ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್. ಪದವಿಯ ನಿಬಂಧ

ಬಿ.ಎ.ಸನದಿಯವರ ಕಾವ್ಯ ತತ್ವ : ವಿಭಿನ್ನ ನೆಲೆಗಳು

ಸಂಶೋಧನ ವಿದ್ಯಾರ್ಥಿ

ಪಾಟೀಲ ಶೋಭಾ

ಮಾರ್ಗದರ್ಶಕರು

ಡಾ|| ಕೆ.ವಿ. ಚಂದ್ರಣ್ಣಗೌಡ

ಉಪಪ್ರಾಚಾರ್ಯರು

ಮುಖ್ಯಸ್ಥರು, ಕನ್ನಡ ವಿಭಾಗ

ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು

ಕೆ.ಆರ್.ರಸ್ತೆ, ಬೆಂಗಳೂರು-04

ಕಾವ್ಯಮಂಡಲ

ಬೆಂಗಳೂರು-560004.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್. ಪದವಿಯ ನಿಬಂಧ

ಬಿ.ಎ.ಸನದಿಯವರ ಕಾವ್ಯ ತತ್ವ : ವಿಭಿನ್ನ ನೆಲೆಗಳು

ಸಂಶೋಧನ ವಿದ್ಯಾರ್ಥಿ

ಪಾಟೀಲ ಶೋಭಾ

ಮಾರ್ಗದರ್ಶಕರು

ಡಾ॥ ಕೆ.ವಿ. ಚಂದ್ರಣ್ಣಗೌಡ

ಉಪಪ್ರಾಚಾರ್ಯರು

ಮುಖ್ಯಸ್ಥರು, ಕನ್ನಡ ವಿಭಾಗ

ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು

ಕೆ.ಆರ್.ರಸ್ತೆ, ಬೆಂಗಳೂರು-04

ಕಾವ್ಯಮಂಡಲ

ಬೆಂಗಳೂರು-560004.

1142

ದೃಢೀಕರಣ ಪತ್ರ

ಬಿ.ಎ.ಸನದಿಯವರ ಕಾವ್ಯತತ್ವ : ವಿಭಿನ್ನ ನೆಲೆಗಳು ಎಂಬ ವಿಷಯವನ್ನು ಕುರಿತ ನಿಬಂಧವನ್ನು ಕನ್ನಡ ವಿಶ್ವ ವಿದ್ಯಾಲಯ, ಹಂಪಿ ಇವರಿಗೆ ಎಂ.ಫಿಲ್ ಪದವಿಗಾಗಿ ಡಾ॥ ಕೆ.ವಿ.ಚಂದ್ರಣ್ಣಗೌಡ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿಯಾದ ನಾನು ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿದ್ದೇನೆ. ಈ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವ-ವಿದ್ಯಾಲಯದ ಪದವಿ ಪ್ರಕಟಣೆಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ತಮ್ಮ ವಿಶ್ವಾಸಿ,
(ಪಾಟೀಲ ಶೋಭಾ)
ಸಂಶೋಧನಾ ವಿದ್ಯಾರ್ಥಿ
ಕಾವ್ಯಮಂಡಲ
ಬೆಂಗಳೂರು-560004.

ಸ್ಥಳ : ಬೆಂಗಳೂರು
ದಿನಾಂಕ : 24/7/2014

1142

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎ.ಸನದಿಯವರ ಕಾವ್ಯತತ್ವ : ವಿಭಿನ್ನ ನೆಲೆಗಳು ಎಂಬ ವಿಷಯವನ್ನು ಕುರಿತ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸಲು ಪಾಟೀಲ ಶೋಭಾ ಅವರು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿದ್ದಾರೆ. ಈ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ವಿಶ್ವವಿದ್ಯಾಲಯದ ಪದವಿ ಪ್ರಕಟಣೆಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ಕೆ.ವಿ. ಚಂದ್ರಣ್ಣಗೌಡ)
ಉಪಪ್ರಾಚಾರ್ಯರು
ಮುಖ್ಯಸ್ಥರು, ಕನ್ನಡ ವಿಭಾಗ
ವಿವಿಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್.ರಸ್ತೆ, ಬೆಂಗಳೂರು-04

ಸ್ಥಳ : ಬೆಂಗಳೂರು
ದಿನಾಂಕ :

ಪರಿವಿಡಿ	ಪುಟ ಸಂಖ್ಯೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಪ್ಪತ್ತೊಂದನೇಯ ಶತಮಾನದ ಮೊದಲ ಭಾಗದಿಂದ ಸಾಹಿತ್ಯ ರಚನೆಯಲ್ಲಿ ತೊಡಗಿದ ಲೇಖಕರೆಲ್ಲರೂ ತಮಗಿಂತ ಹಿಂದಿನ ಪ್ರಮುಖ ಸಾಹಿತ್ಯ ಕೃತಿಗಳ ಬಗೆಗೆ ಗಂಭೀರ ಅಧ್ಯಯನ ನಡೆಸಿ, ಅವುಗಳೊಂದಿಗೆ ಸಂಘರ್ಷ, ಸಂವಾದಗಳಲ್ಲಿ ತೊಡಗಿದ್ದರೆಂದು ಹೇಳಲು ಸಾಧ್ಯವಿಲ್ಲ. ಬರವಣಿಗೆಯ ಕೆಲಸದ ಮೇಲೆ ಸಾಹಿತ್ಯದಾಚೆಗಿನ ಹೊರ ಒತ್ತಡಗಳೇ ತೀವ್ರವಾದ ಕಾಲದಲ್ಲಂತೂ ಇಂಥ ಅಧ್ಯಯನವು ಅನಿವಾರ್ಯವೆನ್ನಿಸುವುದಿಲ್ಲ. ಒಂದು ಸನ್ನಿವೇಶದಲ್ಲಿ ಹಲವಾರು ಪರಸ್ಪರ ವಿಭಿನ್ನವಾದ, ಸಾಹಿತ್ಯಕ ಪರಂಪರೆಯ ಧಾರೆಗಳು ಅಸ್ತಿತ್ವದಲ್ಲಿರುತ್ತವೆ. ಹೀಗಾದಾಗ ಪ್ರತಿಯೊಬ್ಬ ಸಾಹಿತಿಯೂ ತನ್ನ ಮನೋಧರ್ಮಕ್ಕೆ ಹಾಗೂ ಪೂರ್ವಸಿದ್ಧತೆಗಳಿಗೆ ಒಗ್ಗುವಂಥ ಒಂದು ನಿರ್ದಿಷ್ಟಧಾರೆಯ ಪ್ರಮುಖ ಕೃತಿಗಳೊಂದಿಗೆ ಮಾತ್ರ ಸಂವಾದ ನಡೆಸಿ ಉಳಿದವನ್ನು ನಿರ್ಲಕ್ಷಿಸಬಹುದು. ಈ ಧಾರೆಯ ಆಯ್ಕೆಯು ಎಷ್ಟೋಸಲ ಭಾಷೆ, ದೇಶ, ಕಾಲ, ಮತ್ತು ಸಾಹಿತ್ಯವನ್ನು ಅದರ ಪ್ರಕಾರಗಳಲ್ಲಿ ಗಡಿಯನ್ನು ದಾಟಿ ಹೋಗಬಹುದು.


ಸೂಕ್ಷ್ಮಮತಿಯಾದ ಸಾಹಿತಿಯೂ ಒಬ್ಬ ಸಮಾಜಜೀವಿ; ಆತನೂ ನಮ್ಮಂತೆಯೇ ಜೀವನವನ್ನು ನಡೆಸುತ್ತಾನೆ. ವ್ಯಕ್ತಿಗತ ಜೀವನ, ಸಮಾಜಜೀವನ, ರಾಜಕೀಯ, ಆರ್ಥಿಕ ಸ್ಥಿತಿಗತಿಗಳು ಮತ್ತು ಬಗೆಬಗೆಯ ವ್ಯವಸ್ಥೆಗಳು, ಜೀವನವನ್ನು ರೂಪಿಸುವ ನೀತಿ, ತತ್ವ, ಮತಧರ್ಮ ಶಾಸ್ತ್ರಾದಿಗಳು ಹಾಗೂ ಕಲೆ ಮಾನವ ಜೀವನದ ಮುಖಗಳಾಗಿವೆ. ಸಾಹಿತಿಯಾದವನು ನೂರಾರು ಮುಖಗಳನ್ನು ಹುಡುಕಿ, ಜೀವನದ ಅರಿವಿನ ಮೂರ್ತತೆಯನ್ನು ಹೆಚ್ಚಿಸುತ್ತಾನೆ. ನೀತಿ, ವೀರ, ತ್ಯಾಗ, ಶೌರ್ಯ, ಕಾಮ, ರತಿ, ದ್ವೇಷ, ತಿರಸ್ಕಾರ, ದುಃಖ, ಸುಖ–ಸೊಗಸು, ಹೀಗೆ ಜೀವನದಲ್ಲಿ ಹಲವಾರು ಮೌಲ್ಯಗಳಿಗೆ ಇವುಗಳ ಸ್ವರೂಪವನ್ನು ಸಾಹಿತಿಯು ಮನೋಜ್ಞವಾಗಿ–ಚಿತ್ರಿಸಬಲ್ಲನು. 'ಕುಮಾರವ್ಯಾಸ' ಕವಿಯು ತನ್ನ 'ಭಾರತ'ದಲ್ಲಿ ಹೀಗೆ ಹೇಳಿದ್ದಾನೆ. 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದಸಾರ, ಯೋಗೀಶ್ವರರ ತತ್ವವಿಚಾರ, ಮಂತ್ರಜನಕ್ಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣಿತರ ಅಲಂಕಾರ:–[೧] ಆತನು ಹೇಳಿರುವುದಕ್ಕಿಂತ ಬಿಟ್ಟಿರುವ ಜೀವನ ಮೌಲ್ಯಗಳು ಅಮೌಲ್ಯಗಳು ನೂರಾರು ಇವೆ. ಅಂದರೆ ಆತನ ಕೃತಿಯಲ್ಲಿ ಇವು ಚಿತ್ರಿತವಾಗಿವೆ. ಜೀವನ ವಿಕಾಸವಿಲ್ಲದೆ ಸಾಹಿತ್ಯದ ಉದಯವೂ ಇಲ್ಲ, ವಿಕಾಸವೂ ಇಲ್ಲ ಎಂಬ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಒಬ್ಬ ಸಾಹಿತಿ ಮಾನವ ಬದುಕನ್ನು ತನ್ನ ಕೃತಿಯ ತೆಕ್ಕೆಗೆ ತರುತ್ತಲೇ ಉದ್ದೇಶಿತ ಸಾಮಾಜಿಕ ಬದಲಾವಣೆಯನ್ನು ಸೂಚಿಸುತ್ತಾನೆ. ಪ್ರಗತಿಶೀಲ, ಬಂಡಾಯ, ದಲಿತ ಸಾಹಿತ್ಯ ಮೇಲೆ ವಚನ ಸಾಹಿತ್ಯವನ್ನೆಲ್ಲ ಇಲ್ಲಿ ಹೆಸರಿಸಬಹುದಾಗಿದೆ. ಭಾರತೀಯರ ಪ್ರಕಾರ ಸಾಹಿತಿ 'ಎರಡನೇಯ ಬ್ರಹ್ಮ'

ಪಾಶ್ಚಿಮಾತ್ಯರ ಪ್ರಕಾರ (ಶೆಲ್ಲಿ ಎಂಬುವವರ ಪ್ರಕಾರ) ಸಾಹಿತಿಯೊಬ್ಬ 'ವಿದಾಯಕ'. ಬಹುಶಃ ಮಾನವನ ಮೇಲೆ ಸಾಹಿತಿ ಕನಸನ್ನು ಕಾಣುವ ಸ್ವಭಾವವನ್ನು ಕಳೆದುಕೊಂಡಿದ್ದರೆ ಅವರಿಬ್ಬರೂ ಇಂದಿನ ಅವಸ್ಥೆಯನ್ನು ತಲುಪುತ್ತಿರಲಿಲ್ಲ; ಆದಿಮಾನವರಾಗಿಯೇ ಉಳಯುತ್ತಿದ್ದರೆಂದು ತೋರುತ್ತದೆ.

ಕಾವ್ಯ ಜಗತ್ತಿನಲ್ಲಿ 'ಕವಿ' ಮತ್ತು 'ಸಹೃದಯ' ಇಬ್ಬರು ಬಹುಮುಖ ಸಾರಸ್ವತ ತತ್ವಗಳಾಗಿದ್ದಾರೆ. "ಆನಂದವರ್ಧನ" ಹೇಳದಂತೆ ಅಪಾರವಾದ ಕಾವ್ಯ ಸಂಸಾರದಲ್ಲಿ ಕವಿಯೇ ಬ್ರಹ್ಮ, ಅವನ ಇಷ್ಟದಂತೆಯೇ ಈ ಜಗತ್ತು ಪರಿವರ್ತನೆಯನ್ನು ಪಡೆಯುತ್ತದೆ. ಕವಿ ಈ ಬಾಹ್ಯ ಜಗತ್ತನ್ನು ತನ್ನ ಇಷ್ಟಬಂದಂತೆ ಬದಲಾಯಿಸುತ್ತಾನೆ. ಮತ್ತು ಸ್ವತಂತ್ರವಾದ ಕಾವ್ಯ ಜಗತ್ತನ್ನು ಸೃಷ್ಠಿಮಾಡುತ್ತಾನೆ. ಭಾರತೀಯ ಕಾವ್ಯವಿಮಾಂಸೆಯ ಈ ನಿಲುವು ಅತ್ಯಂತ ವೈಶಿಷ್ಟ್ಯ ಪೂರ್ಣವಾದುದು. ಕವಿಯು ಈ ಸೃಷ್ಟಿ ಜಗತ್ತಿನ ಒಂದು ಪ್ರತಿಸೃಷ್ಠಿಯಾಗಿರುವುದಿಲ್ಲ ಅಥವಾ ಜಗತ್ತಿನ ನಕಲು ಈ ಕಾವ್ಯ ಜಗತ್ತು ಅಲ್ಲ. ಕವಿಯ ಜಗತ್ತು ಒಂದು ಸ್ವತಂತ್ರ ಜಗತ್ತು ಮತ್ತು ಹೊಚ್ಚಹೊಸ ಸೃಷ್ಠಿ. ಆದರೆ ಅಡಿಪಾಯ ಮಾತ್ರ ಈ ಜಗತ್ತೆ. ಈ ಕಾರಣದಿಂದಲೇ ಕವಿಯ ಕ್ರಿಯೆಯನ್ನು 'ಅಭಿನಯಗುಪ್ತ' 'ಅನುವ್ಯವಸಾಯ' ಎನ್ನುತ್ತಾನೆ. ಬೇರೆಯವರು ಏನೇ ಬಿತ್ತಿ ಬೆಳೆದಿದ್ದರೂ ಆ ಬೆಳೆ ತಾನು ಸ್ವಂತ ಉತ್ತಿ-ಬಿತ್ತಿ ಬೆಳೆದದ್ದಕ್ಕಿಂತಲೂ ಭಿನ್ನವಾಗಿರುತ್ತದೆ. ಕವಿಯುದವನು ತಾನೇ ಸ್ವಂತ ಉತ್ತಿ-ಬಿತ್ತಿ ಬೆಳೆಯನ್ನು ಪಡೆಯುವ ಈ ಸೃಷ್ಠಿ ಕ್ರಿಯೆಗೆ 'ಅಭಿನವಗುಪ್ತ' 'ಅನುವ್ಯವಸಾಯ' ಎಂದಿರುವುದು ಅರ್ಥಪೂರ್ಣವಾಗಿದೆ. ಕಾವ್ಯಾನುಭವದ ವರ್ತುಲದಲ್ಲಿ ಈ ಜಗತ್ತು ಪ್ರಾರಂಭದ ಮೊದಲ ಬಿಂದು ಆಗುತ್ತದೆ. ಏಕೆಂದರೆ ಕಾವ್ಯ ನಿರ್ಮಾಣ ಮಾಡುವ ಕವಿಯನ್ನು ರೂಪುಗೊಳಸುವ ಕರ್ಮಟವೇ ಈ ಜಗತ್ತು. ಕಾವ್ಯ ವರ್ತುಲದ ಎರಡನೇ ಬಿಂದು ಕವಿಯಾಗುತ್ತಾನೆ. ಜಗತ್ತಿನಿಂದ ಅನುಭವ ಪಡೆವ ಕವಿ ಕಾವ್ಯ ಸೃಷ್ಠಿಸುತ್ತಾನೆ. ಈ ಕಾವ್ಯ ಓದುಗನ ಅಥವಾ ಸಹೃದಯನ ಅನುಭದದಲ್ಲಿ ಪರ್ಯಾವಸಾನವಾಗುತ್ತದೆ. ಕವಿ ಹಾಗೂ ಸಹೃದಯ ರಿಬ್ಬರಿಗೂ ತಳಪಾಯ ಈ ಜಗತ್ತು ಮತ್ತು ಇವರಿಬ್ಬರನ್ನು ಬೆಸೆಯುವ ಭಾವನಾತ್ಮಕ ಕೊಂಡಿ ಕಾವ್ಯ.

ಕಾವ್ಯ ಉಗಮದಿಂದ ಹಿಡಿದು ಅವರ ಬೆಳವಣಿಗೆಯನ್ನು ಮತ್ತು ಅದರ ಪರ್ಯವಸನ (ಸೇರ್ಪಡೆ)ದ ಪರಿಣಾಮವನ್ನು ಗಮನಿಸಿ ಅದರ ಒಟ್ಟು ಕ್ರಿಯೆಯನ್ನು ನಾವು ಒಂದು ವರ್ತುಲಕ್ಕೆ ಹೋಲಿಸಬಹುದಾಗಿದೆ.



ಕಾವ್ಯದ ಮತ್ತೊಂದು ಕೊಂಡಿ ಸಹೃದಯ. ಸಹೃದಯ ಎಂದರೆ ಸಮಾನವಾದ ಹೃದಯವನ್ನು ಹೊಂದಿದವನು ಎಂದರ್ಥ. ಸಾಹಿತ್ಯ ಲೋಕದ ಮೂರು ಕಣ್ಣುಗಳಲ್ಲಿ ಮೊದಲನೆಯ ಕಣ್ಣು 'ಕವಿ' ಎರಡನೇಯ ಕಣ್ಣು 'ಸಹೃದಯ' ಅಥವಾ ಓದುಗ (Reader) 'ರಸಿಕ' ಎಂಬುದು 'ಸಹೃದಯ'ನಿಗೆ ಬಳಸುವ ಪರ್ಯಾಯ ಶಬ್ದವಾಗಿದೆ. ಕಾವ್ಯದ ಓದುಗನೇ ಸಹೃದಯ. ಕವಿ ತಾನು ಎಷ್ಟು ಒಳ್ಳೆಯ ಕೃತಿಗಳನ್ನು, ಕಾವ್ಯಗಳನ್ನು ರಚಿಸಿರಬಹುದು. ಆದರೆ ಅದನ್ನು ಓದಿ ಸಂತಸಪಡದ, ಆದರಿಸದ ಜನರಿರದಿದ್ದರೆ ಕವಿಯ ಉತ್ಸಾಹಕ್ಕೆ ಕುಂದುಂಟಾಗುತ್ತದೆ. ಕೃತಿ ರಚನೆಯಲ್ಲಿ ಔದಾಸೀನ್ಯತೆ ಉಂಟಾಗುತ್ತದೆ. ಕವಿ ಸೃಷ್ಟಿಗೆ ಸಾಮಾನ್ಯವಾಗಿ ಲೋಕವ್ಯವಹಾರವೇ ಆಧಾರ. ಆದ್ದರಿಂದ ಕಾವ್ಯವನ್ನು ಸಹಾನುಭೂತಿಯಿಂದ, ಸಮಭಾವದಿಂದ ಆಲಿಸುವವರೂ ಬೇಕು. ಹಾಗಾಗಿ ಕಾವ್ಯ ಪ್ರೇಮಿಗೆ,ಸಾಹಿತ್ಯ ಪ್ರೇಮಿಗೆ, ಆಸಕ್ತನಿಗೆ ಸಾಹಿತ್ಯ ಲೋಕದಲ್ಲಿ ತುಂಬಾ ಪ್ರಾಶಸ್ತ್ಯವಿದೆ.

ಕಾವ್ಯಗಳನ್ನು ಪರಿಶೀಲಿಸಿ ಮನಸ್ಸೆಂಬ ಕನ್ನಡಿ ನಿರ್ಮಲವಾಗಿರುವುದರಿಂದ ವರ್ಣಿತ ವಿಷಯದಲ್ಲಿ ತನ್ಮಯನಾಗುವ ಯೋಗ್ಯತೆಯಾರಿಗುಂಟೋ ಅವರೇ ಸಹೃದಯ ಎಂದಿದ್ದಾರೆ ಪ್ರಾಚೀನ ವಿದ್ವಾಂಸರಾದ ಅಭಿನವಗುಪ್ತ. ಇದರಿಂದ ಸಹೃದಯದ ಸಂಪೂರ್ಣ ಪರಿಕಲ್ಪನೆ ನಮಗಾಗುತ್ತದೆ.

ಭಕ್ತರಿಲ್ಲದ ದೇವರು ಇಲ್ಲ ಎನ್ನುವ ಹಾಗೆ ಸಹೃದಯರಿಲ್ಲದೆ ಕಾವ್ಯವೂ ಇಲ್ಲ. ಕಾವ್ಯಕ್ಕೆ ಕವಿ ಹೃದಯ ಉಗಮಸ್ಥಾನವಾದರೆ ಸಹೃದಯ ಸಂಗಮಸ್ಥಾನ; ಸಹೃದಯರಿಲ್ಲದೆ ಕವಿಯನ್ನು ಕವಿಯಿಲ್ಲದೆ ಸಹೃದಯರನ್ನು ಕಲ್ಪಿಸಿಕೊಳ್ಳುವುದೇ ಅಸಾಧ್ಯ. ಕವಿಯ ಅನುಭವವು ಸಹೃದಯನ ಅನುಭವವಾಗುವ ಪ್ರಕ್ರಿಯೆ ಗಮನಾರ್ಹ. ಕಾವ್ಯ ಮೀಮಾಂಸಕರು ಸಹೃದಯನದು ಅನುಸೃಷ್ಟಿಕಾರ್ಯ ಎಂದು ಕರೆದಿರುವುದನ್ನು ಗಮನಿಸಿದ್ದೇವೆ. ಅವರು ಕವಿ-ಸಹೃದಯರನ್ನು ಸಮಾನವಾಗಿ ಕಂಡಿದ್ದಾರೆ.[೨]

ಅಧ್ಯಯನದ ಸ್ವರೂಪ

ಬಿ.ಎ. ಸನದಿಯವರು ಹುಟ್ಟಿ ಬೆಳೆದ ಪರಿಸರಿದ ಸುತ್ತಲೂ ಎಲ್ಲ ಧರ್ಮ, ಜಾತಿ-ಮತಗಳ ಜನರೊಡನೆ ಅನ್ಯೋನ್ಯ ಸಂಬಂಧ ಬೆಳೆಸಿಕೊಂಡು ಸಾಮರಸ್ಯದಿಂದ ತಮ್ಮ ಜೀವನವನ್ನು ಪ್ರಾರಂಭಿಸಿದವರು. ಉನ್ನತ ವಿಧ್ಯಾಭ್ಯಾಸಕ್ಕೆ ತೊಡಗಿದಾಗ ಶರಣರ, ದಾಸರ ವೈಚಾರಿಕ ಜ್ಞಾನಕ್ಕೆ ಮಾರುಹೋದರು. ಸನದಿಯವರನ್ನು ಒಂದು ಧ್ವನಿ ಕಾಡುತ್ತ ಇದೆ. ಅದು ಮಾನವೀಯತೆಯ ಕ್ರೂರ ಹತ್ಯೆಯ ನೀಳ್ದನಿಯ ರೋದನ!

ಸದುವಿನಯದ ನದಿಯಂತಿರುವ ಸನದಿಯವರು ಬದುಕಿನ ನೀತಿ ಮತ್ತು ಬರಹದ ರೀತಿ ಎರಡರಲ್ಲೂ ಗೊತ್ತಾದ ಬೆಳಹೆಣಿಕೆಯನ್ನು ಸಹಜವಾಗಿಯೇ ಸಾಧಿಸಿರುವ ಸನದಿಯವರ ಕಾವ್ಯದ್ದು

ನಿಜವಾದ ಅರ್ಥದಲ್ಲಿ ಸಮನ್ವಯ ಮಾರ್ಗ. ಸಹಜ ಮತ್ತು ಸರಳ ಅಭಿವ್ಯಕ್ತಿಯಲ್ಲೇ ಸಮತೆ-ಸಮನ್ವಯ-ಶಾಂತಿ ಮತ್ತು ಒಟ್ಟಾರೆ ಒಂದು ಅನಾತಂಕಿತ. ಸುಂದರ ವ್ಯವಸ್ಥೆಯನ್ನು ಧೇನಿಸುವ (ಹೇಳುವ) ಅವರ ಕಾವ್ಯ ಗುಚ್ಛವು ಕನ್ನಡ ಸಾಹಿತ್ಯಕ್ಕೆ ಮೂಗುತಿ ಇದ್ದಂತೆ. ನವೋದಯದ ಆರಂಭದ ಹೊಸಗನ್ನಡ ಕಾವ್ಯಯಾನವು ಪ್ರಗತಿಶೀಲ. ನವ್ಯ. ದಲಿತ. ಬಂಡಾಯದ ಘಟ್ಟಗಳಲ್ಲಿ ಹಾಯ್ದು ಬಂದು ಮತ್ತೆ ಈಗ ನವೋದಯ ಧೋರಣೆಯೇ ಪ್ರಧಾನವಾದ ಒಂದು ಸಮ್ಮಿಶ್ರ ನೆಲೆಗೆ ತಲುಪಿದೆ. ಹೊಸಗನ್ನಡ ಕಾವ್ಯದ ಈ ಚಾರಿತ್ರಿಕ ನಡೆಯೊಂದಿಗೆ ಸನದಿಯವರ ಕಾವ್ಯದ ಗತಿಯನ್ನು ಹೋಲಿಸಿ ನೋಡಿದಾಗ ಆಶ್ಚರ್ಯಕರ ಸತ್ಯವೊಂದರ ದರ್ಶನವಾಗುತ್ತದೆ. ಸನದಿಯವರು ಮೂಲತಃ ಮತ್ತು ಮುಖ್ಯತ: ನವೋದಯಕ್ಕೆ ಒಲಿದ ಕವಿಮನ. ಅವರ ಒಟ್ಟು ಕಾವ್ಯಾಭಿವ್ಯಕ್ತಿಯಲ್ಲಿ ಪ್ರಧಾನವಾಗಿ ಎದ್ದು ಕಾಣುವುದೇ ನವೋದಯ ಮನೋಧರ್ಮ. ನವೋದಯಕ್ಕೆ ಒಲಿದ ಅವರ ಕವಿಮನ, ಹೊಸಗನ್ನಡ ಕಾವ್ಯ ಏನೆಲ್ಲ ಅವಸ್ಥಾಂತರಗಳನ್ನು ಪಡೆದಾಗಲೂ, ತನ್ನ ಮೂಲಸ್ವಭಾವವನ್ನು ಬದಲಿಸದೆ. ಇಂದಿಗೂ ನವೋದಯವನ್ನೇ ಅಪ್ಪಿರುವ ಮನೋಧರ್ಮವಾಗಿರುವುದು ಎತ್ತಿ ಹೇಳಬೇಕಾದ ಅನನ್ಯತಾ ಅಂಶವಾಗಿ ನನಗಿಲ್ಲಿ ತೋರುತ್ತಿದೆ.

ಅವರ ಆರಂಭದ ಕವನ ಸಂಕಲನದಲ್ಲಿ ಈ ರೀತಿ ಹೇಳಿರುತ್ತಾರೆ.

"ಸಂಸ್ಕೃತಿಯ ಸರ್ವಾಧಿಕಾರಯೊಲು ಕುಣಿಯುವುದು
ಯಾವ ನಾಡಿಗು ಸಲ್ಲ! ಯಾರ ಹಿತವೇನಲ್ಲ!
ನಮ್ಮದಿದು - ನಿಮ್ಮದಿದು ಎಂಬ ಭೇದವೆ ಹೊಲ್ಲ!
ಎಲ್ಲರೊಳಬಯಕಗಳ ಸಂಗಮದಿ ಸವಿಯಿಹುದು!
ಮಾನಾಭಿಮಾನಗಳು ನುಡಿ ಬುರುಡಿಯೊಳಗಿಹವೇನು?
ಕೂಡಿ ಬಾಳ್ ತೀಡಿಕೊಳೆ ಸುರಿದೀತು ಹೂಜೇನು!"

ಈ ರೀತಿಯ ನವೋದಯದ ಆದರ್ಶದ ಮೇಲೆ ಆಶಾವಾದದ ತೊರೆ ಅವರ ಕಾವ್ಯ ಕೃಷಿಯುದ್ದಕ್ಕೂ ಹರಿಯುತ್ತ ಬಂದು ತೀರ ಇತ್ತೀಚಿನ ಸಂಕಲನದಲ್ಲೂ ಸಹ ಅದೇ ಗುಣವನ್ನು ನಾವು ಕಾಣುತ್ತೇವೆ.

"ವಿಶ್ವದ ಪರಿವಾರದಲ್ಲಿ
ಸಕಲರಿಗೂ ಸ್ವಾಗತ!
ಮತಮತಗಳ ತಿರುಳನಲ್ಲಿ
ಕಂಡನಿತೂ ಸಹಮತ!
ಭಿನ್ನವೆಂದು ಬಗೆದರೂನು
ಸಹಜೀವನ ಸಮ್ಮತ!
ಪರಕೀಯತೆ ಪರದೆಯಾಚೆ

ಯಾವುದೇಕೆ ಪರಮತ?

ಮನುಜ ಮನುಜನೆಂದು

ಒಪ್ಪಿ ಅಪ್ಪಿಕೊಂಬ ಕ್ಷಣವೆ

ಸಹಜೀವನ ಸಂಕೇತ"

ಹೀಗೆ ಮಡುಗಟ್ಟಿರುವುದನ್ನು ಗಮನಿಸಿದರೆ ಸನದಿಯವರ ಮನ ಮತ್ತು ಕಾವ್ಯದಾಳದಲ್ಲಿ ನವೋದಯದ ಪ್ರಭಾವ ಯಾವ ಮಟ್ಟದ್ದಿದೆಯೆಂಬುದರ ಅರಿವಾಗುತ್ತದೆ. ಐವತ್ತರ ದಶಕದಲ್ಲೆ ಕನ್ನಡ ಕಾವ್ಯ ಹೊರಳು ಹಾದಿಯಲ್ಲಿದ್ದಾಗಲೂ ಆ ಬಗ್ಗೆ ಮನ ಕದಡಿಕೊಳ್ಳದೆ ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ, ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ಸಾಹಿತ್ಯದ ವಿಷಯವಾಗಿ ಮಾತನಾಡುವಾಗ ಸಾಹಿತಿಯು ಹುಟ್ಟಿಬಂದ ಧರ್ಮ ಜನಾಂಗದ ಬಗ್ಗೆ ಪ್ರಸ್ತಾಪಿಸುವುದು ಔಚಿತ್ಯಪೂರ್ಣವಾಗಲಕ್ಕಿಲ್ಲ ಹಾಗೂ ಅದು ಅಗತ್ಯವೂ ಆಗಲಕ್ಕಿಲ್ಲ. ಅಂತೆಯೇ ಸನದಿಯವರು 'ಮುಸ್ಲಿಂ ಜನಾಂಗದಿಂದ ಬಂದವರು' ಎಂದು ಹೇಳಲು ಅವರ ಆತ್ಯಾತ್ಮೀಯ ಸ್ನೇಹಿತರು ಹಾಗೂ ಕನ್ನಡ ವಿಮರ್ಶೆ ಹಿಂಜರಿದಂತಿದೆ. ಈ ಹಿಂಜರಿಕೆಗೆ ಬಹಳ ಮುಖ್ಯ ಕಾರಣವಾಗಿರುವುದು ಸನದಿಯವರು ಜನಾಂಗಾತೀತವಾಗಿ ಎಲ್ಲರೊಂದಿಗೂ ಬೆರೆತದ್ದು, ಬೆಳೆದದ್ದು ಮೇಲೆ ಉಳಿದದ್ದು. ಮುಖ್ಯವಾಗಿ ಎತ್ತಿ ಹೇಳಬೇಕಾದ ವಾಸ್ತವವೆಂದರೆ ಸನದಿಯವರ ಇಡೀ ಸಾಹಿತ್ಯರಾಶಿಯನ್ನು ಹತ್ತಾರು ಬಾರಿ ತಿರುವಿ ಹಾಕಿದರೂ ಅಲ್ಲೆಲ್ಲೂ ಅವರು ಮುಸ್ಲಿಂ ಜನಾಂಗದವರೆಂದು ಗುರುತಿಸಬಹುದಾದ ಕುರುಹುಗಳಿಲ್ಲದಿರುವುದು. ಇದು ಸನದಿಯವರ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯ ಅತೀ ಮುಖ್ಯವಾದ ಅನನ್ಯತಾ ಭಾವನೆಯಾಗಿದೆ. ತಾನು ಮುಸ್ಲಿಂ ಜನಾಂಗದಿಂದ ಬಂದವ ಎಂಬುದನ್ನವರು ಪ್ರಜ್ಞಾಪೂರ್ವಕವಾಗಿ, ಎಚ್ಚರಿಕೆಯಿಂದ ಹಾಗೂ ಮುತುವರ್ಜಿಯಿಂದ ಮುಚ್ಚಿಡುವುದಿಲ್ಲ; ಬದಲಾಗಿ ಅವರ ಬದುಕಿನ ಆಳದಲ್ಲೇ ಬೇರು ಬಿಟ್ಟಿರುವ ಸಮನ್ವಯ ಮನೋಧರ್ಮ ಅವರಿಗರಿವಿಲ್ಲದಂತೆಯೇ ಈ ಕೆಲಸ ಮಾಡಿಸುತ್ತದೆ. 'ಸಾಹಿತ್ಯದಲ್ಲಿ ಮುಸ್ಲಿಂ ಪ್ರಜೆ' ಎಂಬ ಪ್ರತ್ಯೇಕವಾದ ಲೇಬಲ್ ಹಚ್ಚಿಕೊಂಡ ಸಾಹಿತ್ಯ ವಿಮರ್ಶೆಯ ಉಪಕ್ರಮವೊಂದು ಕನ್ನಡದಲ್ಲಿ ಬೆಳೆದು ಬಂದಿದೆ. ಮುಸ್ಲಿಂ ಜನಾಂಗದ ಒಳ-ಹೊರಗನ್ನು ಚಿತ್ರಿಸುವ ಲೇಖಕರ ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ಇಂಥ ವಿಮರ್ಶೆ ಪೂರಕವಾಗಬಹುದು. ಆದರೆ ಈ ಬಗೆಯ ಮಾನದಂಡವನ್ನಿಟ್ಟುಕೊಂಡು ಸನದಿಯವರ ಕಾವ್ಯ ಅಥವಾ ಸಾಹಿತ್ಯವನ್ನು ಪರಾಮರ್ಶಿಸ ಹೊರಟರೆ ಅಲ್ಲಿ ಸಿಗುವುದು ಸೊನ್ನೆ ಮಾತ್ರ ಅಷ್ಟರ ಮಟ್ಟಿಗೆ ಸನದಿಯವರು ಅಂಥದ್ದನ್ನೆಲ್ಲ ಮೀರಿದ್ದಾರೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಈ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಯನ್ನು ನೋಡಿದಾಗ ಈ ಮೊದಲೇ ಹೇಳಿದಂತೆ, ಸನದಿಯವರು "ತಾನೊಬ್ಬ ಮುಸ್ಲಿಂ ಕವಿ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಆಹ್ವಾನಿಸಿಕೊಂಡು ಬರೆಯದೆ, ನಮ್ಮಲ್ಲೊಬ್ಬರಾಗಿ ನಿಜ ಪ್ರಜಾಪ್ರಭುತ್ವವಾದಿ ಕವಿಯಾಗಿ ಸನದಿ ಬರೆದಿದ್ದಾರೆ.

ಈ ಅಂಶದಿಂದ ಈ ಕವಿ ನಮಗೆಲ್ಲ ಹೆಚ್ಚು ಆತ್ಮೀಯರೂ ಆಗುತ್ತಾರೆ. ಕೇವಲ ಮನುಷ್ಯರಾಗಿ ಅನುಭವಿಸಿದ್ದನ್ನು ತನ್ನ ತಾಯ್ನಾಡಿಯಲ್ಲಿ ಇಡುವ ನಿಸ್ಪೃಹತೆ ಅಂಥ ಹಿರಿಮೆ ವ್ಯಕ್ತಿತ್ವದಲ್ಲಿದ್ದಾಗ ಮಾತ್ರ ಸಾಧ್ಯ".[೭] ಎಂದು ಹೇಳುತ್ತ. ಸನದಿಯವರು ಯಾವುದೇ ಜನಾಂಗದಿಂದ ಬಂದಿರಲಿ ಕನ್ನಡವಲ್ಲದ ಬೇರೆ ಯಾವುದೋ ನೆಲದಲ್ಲಿ ನಿಂತು ಸಾಹಿತ್ಯ ನಿರ್ಮಿಸಿರಲಿ. ಅವರ ಒಟ್ಟಾರೆ ಸಾಹಿತ್ಯ ಸಾಧನೆಯ ಹಿನ್ನಲೆಯಲ್ಲಿ ನಾವು ಅವರನ್ನು ಗುರುತಿಸುವುದು ಮತ್ತು ಗೌರವಿಸುವುದು ಅವರು ಒಬ್ಬ ಆಶಾವಾದಿಯಾಗಿ. ಮಾನವೀಯ ಹೃದಯಸಂವೇದನೆಯುಳ್ಳ ಅಪ್ಪಟ ಕನ್ನಡ ಸಾಹಿತಿಯೆಂದು. ಕನ್ನಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಾಕಷ್ಟು ಕೃಷಿ ಮಾಡಿದ್ದರೂ ಅವರ ಪ್ರಧಾನ ಆಸಕ್ತಿ ಇರುವುದು ಕಾವ್ಯದಲ್ಲೆ. ಅದರಲ್ಲು ನವೋದಯ ಮನೋಧರ್ಮವನ್ನೇ ತಮ್ಮ ಬದುಕು, ಚಿಂತನೆ ಮತ್ತು ಅಭಿವ್ಯಕ್ತಿಯ ಮೂಲದ್ರವ್ಯವನ್ನಾಗಿಸಿಕೊಂಡು ಬಂದದ್ದು ಸನದಿಯವರ ಹೆಚ್ಚುಗಾರಿಕೆ.[೮] ಅವರನ್ನು ಕವಿಯೆಂದೂ, ಪುನರ್ನವೋದಯದ ಉಷಃ ಕಾಲದ ಕವಿಯೆಂದೂ ಕರೆದದ್ದುಂಟು. ನವೋದಯ ಮನೋಧರ್ಮದ ತುಡಿತದ ಪ್ರಭಾವ ಕನ್ನಡ ಕಾವ್ಯದ ಮೇಲೆ ಹೇಗೆ ಬೀರಿದೆ ಎಂಬುದನ್ನು ಪರಿಶೀಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

~*~*~*~*~*~

ಕೊನೆ ಟಿಪ್ಪಣಿಗಳು

೧.	ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ	ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧, ಪುಟ-೧೮
೨.	ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು	ಜಿ.ಎಸ್.ಶಿವರುದ್ರಪ್ಪ, ಸಂ: ಜಿ.ಎಸ್.ಎಸ್., ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೮೧ ಪುಟ-೮೪
೩.	ತವಾನಿಂದ ತಾವರೆ	ಡಾ.ಬಸವರಾಜ ಸಾದರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ-೧೩
೪.	ಅದೇ	ಪುಟ-೧೭

ಅಧ್ಯಾಯ – ೨

ಕಾವ್ಯ ಪ್ರೇರಣೆಗಳು

೨.೧:– ಬಿ.ಎ. ಸನದಿ ಅವರ ಬಾಲ್ಯ ಜೀವನ:–

ಸ್ವಾತಂತ್ರ್ಯೋತ್ತರ ಕನ್ನಡ ವಾಙ್ಮಯದ ಪ್ರಮುಖ ಸಾಹಿತಿಗಳಲ್ಲಿ ಬಿ.ಎ. ಸನದಿ ಅವರೂ ಒಬ್ಬರು. ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ ಅವರ ಸಾಲಿನಲ್ಲಿ ಕೇಳ ಬರುವ ಮತ್ತೊಂದು ಹೆಸರು ಕವಿ ಸನದಿ ಅವರದು. ಕನ್ನಡದ ಉದಾರವಾದಿ ಕಾವ್ಯ ಕವಲಿನ ಪ್ರಮುಖ ವಕ್ತಾರರಾಗಿರುವ ಸನದಿ ಅವರದು ಜನಪರ ಧೋರಣೆ; ಜೀವನಪರ ನಿಲುವು. ಎಪ್ಪತ್ತರ ದಶಕದಲ್ಲೇ ಜನಕಾವ್ಯ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದ ಈ ಕವಿ "ನಾಳಿನ ಜನಕಾವ್ಯವು ಯಾವೊಂದು ಜಾತಿ ಮತದ ಶೃತಿಯಾಗದೆ ಇಡಿಯ ಜನಸಮುದಾಯದ ಜಾಗೃತ ಚೇತನದ ಫಲಶೃತಿಯಾಗಿ ಹೊರ ಹೊಮ್ಮುತ್ತದೆ."[೧] ಎಂಬ ತಮ್ಮದೇ ಮಾತಿನಿಂದ ಸಮಾಜಾಭಿಮುಖಿಯಾದ ಧೀರೋದಾತ್ತ ಆಶಾವಾದವನ್ನು ಎತ್ತಿ ಹಿಡಿದವರು. ಹೀಗಾಗಿ ಅವರ ಸಾಹಿತ್ಯದಲ್ಲಿ ಬಡವರ, ದೀನದಲಿತರ, ಪರಿಸರದ, ಮಣ್ಣಿಗೆ ಅಂಟಿಕೊಂಡವರ, ಜನಬದುಕಿನೊಂದಿಗೆ ನಡೆಸಿದ ಸಂವಾದ ಹಾಗೂ ಮುಖಾಮುಖಿಯ ದಟ್ಟವಾದ ವಿವರಗಳ ಚಿತ್ರಣ ಕಾಣಸಿಗುತ್ತದೆ.

ಮಾನವ್ಯ ಕವಿ, ಭಾವೈಕ್ಯತೆಯ ಕವಿ, ಸಮನ್ವಯ ಕವಿ, ಸಮತೂಕದ ಕವಿ, ಸಾಂಸ್ಕೃತಿಕ ರಾಯಬಾರಿ, ಸುಸಂಸ್ಕೃತ–ಸಜ್ಜನ ಕವಿ, ಅಪರೂಪದ ಸಂಘಟಕ, ಇತ್ಯಾದಿ ವಿಶೇಷಣಗಳಿಂದ ಹೆಸರಿಸಲ್ಪಡುವ ಡಾ.ಬಿ.ಎ. ಸನದಿ ಈಗ ನಮ್ಮ ನಡುವೆ ಇರುವ ಹಿರಿಯ ಕವಿಗಳಲ್ಲೊಬ್ಬರು.

೧೯೩೩ ಆಗಸ್ಟ್ ೧೮ರಂದು ಬೆಳಗಾವಿ ಜಿಲ್ಲೆಯ ಸಿಂಧೊಳ್ಳಿ ಎಂಬ ಕಿರುಗ್ರಾಮದಲ್ಲಿ ಜನಿಸಿದ ಬಿ.ಎ.ಸನದಿ ಅವರ ಪೂರ್ಣ ಹೆಸರು 'ಬಾಬಾಸಾಹೇಬ ಅಹಮ್ಮದ್ ಸಾಹೇಬ' ಎಂದುದಾದರೂ ಅವರು ಸನದಿ ಎಂಬ ಸನದುವಿನಿಂದಲೇ ಚಿರಪರಿಚಿತರು. ಚಿಕ್ಕವಯಸ್ಸಿನಲ್ಲೆ ತಾಯಿಯನ್ನು ಕಳೆದುಕೊಂಡು, ಹಳ್ಳಿಯಲ್ಲಿ ಆರಂಭಿಕ ಅಕ್ಷರಗಳ ಕಲಿತು, ತಮ್ಮ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಕಾಲೇಜು ದಿನಗಳಲ್ಲಿ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದರೂ ಸಾಹಿತ್ಯದ ಒಲವು ಚಿಂತನೆಯ ಮೂಲಕ ಮೊದಲಿನಿಂದಲೂ ರಮ್ಯ, ನವ್ಯ ಪ್ರಗತಿಶೀಲ, ದಲಿತ, ಬಂಡಾಯದ ಮಾದರಿಗಳನ್ನು ಮೀರಿದ ಸಮಗ್ರ ಮನುಷ್ಯಕುಲದ ಉತ್ಕರ್ಷವನ್ನೇ ಗಮನದಲ್ಲಿರಿಸಿಕೊಂಡ ಜನಪರ ಕಾವ್ಯದೃಷ್ಟಿಯೊಂದನ್ನು ರೂಪಿಸಿಕೊಂಡವರು.

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ಉದ್ಯೋಗಕ್ಕಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಸಂಚರಿಸಿ ಕೊನೆಗೆ ಅನೇಕ ವರ್ಷಗಳಿಂದ ಮುಂಬಯಿ ಎಂಬ ಯಾಂತ್ರಿಕ ಪಟ್ಟಣದಲ್ಲಿ ವಾಸವಾಗಿದ್ದ ಕವಿ ಜೀವನದಲ್ಲಿ ವ್ಯಕ್ತಿ–ಪ್ರವೃತ್ತಿಗಳು ಹಲವು ಸ್ಥಿತ್ಯಂತರದ ಪರಿವರ್ತನೆಗೆ ಸಿಕ್ಕು ತೂಗಾಡಿದರೂ ಅಚಲ ಶ್ರದ್ಧೆ, ನಿಷ್ಠೆ, ಸತತ ಕಾವ್ಯಭ್ಯಾಸ ಮತ್ತು ಕಾವ್ಯ ಕೃಷಿಯಿಂದ ಕನ್ನಡ ಸಾಹಿತ್ಯವನ್ನು ಅವರು

ಶ್ರೀಮಂತಗೊಳಿಸಿದ್ದಾರೆ. ಇದುವರೆಗೂ ಹತ್ತೊಂಭತ್ತು ಕವಿತಾ ಸಂಕಲನ, ಮೂರು ಕಥಾ ಸಂಕಲನ, ಆರು ಶಿಶುಸಾಹಿತ್ಯ, ಮೂರು ವಿಮರ್ಶಾ ಸಂಕಲನ, ಎರಡು ನಾಟಕ, ಒಂದು ವ್ಯಕ್ತಿ ಚಿತ್ರ, ಐದು ಸಂಪಾದನಾ ಕೃತಿಗಳು ಹಾಗೂ ಎರಡು ಅನುವಾದ ಕೃತಿಗಳು ಹೀಗೆ ಇತ್ಯಾದಿಯಾಗಿ ಐವತ್ತಕ್ಕೂ ಹೆಚ್ಚಿನ ಮೌಲಿಕ ಕೃತಿಗಳನ್ನು ಅವರು ಕನ್ನಡಕ್ಕೆ ನೀಡಿದ್ದಾರೆ.

ಬಿ.ಎ. ಸನದಿಯವರು ಭಾರತ ಸರ್ಕಾರದ ವಾರ್ತಾ ಇಲಾಖೆಯಲ್ಲಿ ಮುಖ್ಯವಾಗಿ ಆಕಾಶವಾಣಿಯಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರೂ ತಮ್ಮ ಸೇವೆಯ ಆರಂಭ ಕಾಲದಲ್ಲಿ (೧೯೫೪-೫೭) ಅವರು ಬೆಳಗಾವಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಮಾಧ್ಯಮಿಕ ಶಾಲೆಯೊಂದರಲ್ಲಿ ಅಧ್ಯಾಪಕರಾಗಿ ದುಡಿದವರು. ತಮ್ಮ ಜೀವನದಲ್ಲಿ ಪಟ್ಟಪಾಡು, ಅದು ಕಾವ್ಯದಲ್ಲಿ ಹಾಡಾಗಿ ಹರಿದಿದೆ. ಆದರ್ಶ ಶಿಕ್ಷಕರಾಗಿ, ಉತ್ತಮ ಆಡಳಿತಗಾರರಾಗಿ, ಕವಿಯಾಗಿ, ಕತೆಗಾರರಾಗಿ, ವಿಮರ್ಶಕರಾಗಿ, ಪ್ರಬಂಧಕಾರರಾಗಿ, ಅನುವಾದಕರಾಗಿ ಸಾಹಿತ್ಯ ಕ್ಷೇತ್ರದ ನಾನಾ ನೆಲೆಗಳಲ್ಲಿ ಸೇವೆ ಸಲ್ಲಿಸಿ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾರೆ. ಅವರ ಜೀವನ ಸಾಧನೆ ಒಂದು ದೊಡ್ಡ ಸಾಹಸಗಾಥೆ.[೨]

೧೯೭೦ರಲ್ಲಿ ಶಿವಾಜಿ ವಿಶ್ವವಿದ್ಯಾಲಯದಿಂದ ಕನ್ನಡ-ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ಸಹ ಪಡೆದಿದ್ದಾರೆ. ಈ ಕವಿಯ ಮನೆಯ ಮಾತು ಉರ್ದು; ಮನದ ಮಾತು ಜನದ ಮಾತು ಅದುವೇ ಕನ್ನಡ. ಅವರ ಪ್ರೇಮದ ಮಡದಿಗೂ ಹಾಗೆಯೇ ಅವರ ಇಬ್ಬರು ಮಕ್ಕಳು ದುಬಾಯಿ ಮತ್ತು ಅಮೇರಿಕಾದಲ್ಲಿ ವಾಸವಾಗಿದ್ದಾರೆ. ಕವಿ ಸನದಿಯವರು ಮರಳಿ ಮಣ್ಣಿಗೆ ಎಂಬಂತೆ ಹಲವಾರು ವರ್ಷಗಳ ಕಾಲ ಮುಂಬಯಿಯ ವಾಸದಿಂದ ಬೇಸರಗೊಂಡು ಇತ್ತೀಚೆಗೆ ಕುಮಟಾ ನಗರದಲ್ಲಿ ವಾಸ್ತವ್ಯ ಹೂಡಿದ್ದಾರೆ.

ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ದೂರದ ಮುಂಬೈಯಲ್ಲಿದ್ದುಕೊಂಡು ಕನ್ನಡ ಸಾಹಿತ್ಯದ ಕೃಷಿಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದ ಅವರದು ಬಹುಭಾಷಿಕ ಸಂವೇದನೆ. ಮನೆ ಮಾತು ಉರ್ದು, ಕಲಿತದ್ದು ಕನ್ನಡ ಮಾಧ್ಯಮದಲ್ಲಿ, ಮುಂದೆ ಇಂಗ್ಲಿಷ್‌ಗೆ ದಾಟು. ಮರಾಠಿ, ಹಿಂದಿ, ಗುಜರಾತಿ ಪರಿಸರದಲ್ಲಿ ಸೇವೆ ಸಲ್ಲಿಸುವ ಅವಕಾಶ. ಅನಂತರ ಸಂಸ್ಕೃತದಲ್ಲಿ ವಿಶೇಷ ಅಧ್ಯಯನ. ಬಹುಕಾಲ ನಾಡಿನಾಚೆಯ ಊರುಗಳಲ್ಲಿ ಕನ್ನಡದ ಕಂಪನ್ನು, ಸೊಗಡನ್ನು ಹರಡಿದ್ದಾರೆ. ಮುಂಬೈ ಆಕಾಶವಾಣಿಗೆ ಕನ್ನಡದ ದನಿ ದೀಕ್ಷೆ ನೀಡಿರುವಲ್ಲಿ ಅವರ ಪಾತ್ರ ಮರೆಯಲಾರದಂತಹದ್ದು. ಮುಂಬೈ ಕರ್ನಾಟಕ ಸಂಘ ಹಮ್ಮಿಕೊಂಡ ಕನ್ನಡ ಕಾರ್ಯಕ್ರಮಗಳ ರೂವಾರಿ ಹಾಗೂ ಮುಖ್ಯ ಪಾತ್ರಧಾರಿ ಇವರಾಗಿದ್ದಾರೆ. ಹೀಗೆ ನಮ್ಮಲ್ಲಿರಬೇಕಾದ ಸಾರಸ್ವತ ಮೈತ್ರಿಗೆ ಅವರು ಉತ್ತಮ ನಿದರ್ಶನ. "ಬಾಬಾ ಸಾಹೇಬ ಸನದಿ ಅವರು ಕರ್ನಾಟಕತ್ವವನ್ನು ಮೈಗೂಡಿಸಿಕೊಂಡು ಒಂದು ಮೂರ್ತಿಯಾದವರು. ಅವರು ಕರ್ನಾಟಕದವರೆಷ್ಟೋ ಅಷ್ಟೇ

ಭಾರತದವರೂ ಆಗಿದ್ದಾರೆ ಜಾತಿಯ ಯಾವ ಸೋಂಕೂ ಇಲ್ಲದ ಅಪ್ಪಟ ರಾಷ್ಟ್ರವಾದಿ ಅವರು. ಒಬ್ಬ ಒಳ್ಳೆಯ ಮುಸ್ಲಿಂ, ಒಬ್ಬ ಒಳ್ಳೆಯ ಕನ್ನಡಿಗ, ಒಬ್ಬ ಒಳ್ಳೆಯ ಭಾರತೀಯ ಹೇಗೆ ಇರುತ್ತಾನೆಂದು ಕೇಳಿದರೆ ಈ ಸನದಿ ಅವರ ಕಡೆಗೆ ಬೆರಳೆತ್ತಿ ತೋರಿಸಬಹುದು"[೩] ಎಂದು ಖ್ಯಾತ ಪತ್ರಕರ್ತ ಪಾಪು ಅವರು ಸನದಿ ಅವರ ವ್ಯಕ್ತಿತ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

ಆರಂಭಿಕ ಹಂತದಲ್ಲಿ ಸನದಿಯವರು ಬೇಂದ್ರೆ, ಕುವೆಂಪು, ದಿನಕರ ದೇಸಾಯಿ, ಕಣವಿ, ಅಡಿಗ ಮುಂತಾದ ಕವಿಗಳ ಕವನಗಳನ್ನು ಅಕ್ಕರೆಯಿಂದ ಓದಿದ್ದರೂ ಹಾಗೆಯೇ ಬೆಳಗಾವಿಯಲ್ಲಿದ್ದ ಈಶ್ವರ ಸಣಕಲ್ಲ, ಕರ್ಕಿ, ಇಂಚರ, ಸುಂಕಾಪುರ ಅವರ ಕಾವ್ಯ ಉತ್ತೇಜನ ಕವಿಗೆ ದೊರೆಯಿತು. ಸನದಿಯವರು ಸಮುದಾಯದ ಕವಿ ಜನಸಮುದಾಯದ ಭಾಗವಾಗಿ ಬದುಕಿದವರು. ಗ್ರಾಮೀಣ ಪರಿಸರವೇ ಅವರಿಗೆ ಆರಂಭದ ಅನುಭವದ ಲೋಕ. ಅದೇ ವಿಶ್ವವಿದ್ಯಾಲಯ. ಅನಂತರ ನಗರ, ಮಹಾನಗರಗಳತ್ತ ಪಯಣ. ಹೀಗಾಗಿ ಅವರ ಸಾಹಿತ್ಯದ ಹರವು ವಿಸ್ತಾರವೂ, ವೈವಿಧ್ಯಮಯವೂ ಆಗಿದೆ. ಬದುಕಿನ ಬಗೆಗಿರುವ ಅದಮ್ಯ ಶ್ರದ್ಧೆ ಹಾಗೂ ಜೀವನ ಪ್ರೀತಿ ಕವಿ ಸನದಿ ಅವರ ಸಾಹಿತ್ಯದ ಜೀವಂತ ನೆಲೆಗಳು. ಹೊಸಗನ್ನಡ ಸಾಹಿತ್ಯದ ಎಲ್ಲ ಚಳುವಳಿಗಳನ್ನು ಆಯಾಮಗಳನ್ನು ತಮ್ಮ ಕಣ್ಣ ಮುಂದೆ ಕಂಡ ಸನದಿ ಅವರು ಆಯಾಯ ಕಾಲಘಟ್ಟಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಸಜೀವವಾಗಿರಿಸಿಕೊಂಡು ಕಾವ್ಯ ಸಂವೇದನೆಯನ್ನು ಹೊರಹೊಮ್ಮಿಸುತ್ತ ಬಂದಿದ್ದಾರೆ. ಸಾಹಿತ್ಯ ಕ್ಷೇತ್ರದ ಕಾಲಕಾಲದ ಗೊಂದಲಗಳನ್ನು ತಲೆಗೆ ಹಚ್ಚಿಕೊಳ್ಳದೇ ತಮ್ಮ ಕಾವ್ಯ ನಾವೆಯನ್ನು ಮುನ್ನಡೆಸಿಕೊಂಡು ಬಂದಿರುತ್ತಾರೆ.

೨.೨:- ಬಿ.ಎ. ಸನದಿಯವರ ಕೃತಿಗಳ ವಿವರಣೆ

ಬಿ.ಎ.ಸನದಿಯವರು ತಮ್ಮನ್ನು ತಮ್ಮ ೧೬ನೇಯ ವಯಸ್ಸಿನಲ್ಲೇ ಸಾಹಿತ್ಯ ಕ್ಷೇತ್ರಕ್ಕೆ ಒದಗಿಸಿಕೊಂಡರು. ೧೯೪೯ರಲ್ಲಿ ಸನದಿಯವರು ಪ್ರಥಮ ಕವನ 'ಜಯಕರ್ನಾಟಕ' ಹುಬ್ಬಳ್ಳಿಯ 'ನವಯುಗ' ಪತ್ರಿಕೆಯಲ್ಲಿ ಪ್ರಕಟವಾಯಿತು ಮತ್ತು 'ಪತಿವ್ರತಾ ಪ್ರಭಾವ' ಎಂಬ ನಾಟಕವು ಸಿಂಧೊಳ್ಳಿಯಲ್ಲಿ ಪ್ರಯೋಗಶಾಲೆಯ ಮೆಟ್ಟಿಲು ಹತ್ತಿತು. ಈ ನಾಟಕವು ಹಳ್ಳಿಯ ಜಮೀನುದಾರನ ದುರಾಚಾರವನ್ನು ಚಿತ್ರಿಸುವ ವಸ್ತುವುಳ್ಳದ್ದಾಗಿದೆ.

ಸುಮಾರು ಮೂವತ್ತು ವರ್ಷಕ್ಕೂ ಮೀರಿದ ಮುಂಬೈ ವಾಸದಿಂದಾಗಿ ನಗರದ ದೈಹಿಕ ಮತ್ತು ಮಾನಸಿಕ ಜಂಜಡದ ನಡುವೆಯೂ ತೋಟದಲ್ಲಿ ನೆಟ್ಟ ಗಿಡದಂತೆ ನಳನಳಿಸಿ ಚೈತನ್ಯ ಉಳಿಸಿಕೊಂಡು ಕಾವ್ಯರಚನೆಗೆ ಮೂಲ ಕ್ಷೇತ್ರಬಿಂದು ಮನುಷ್ಯನೆಂದು ನಂಬಿದ ಕವಿ ತಮ್ಮ ಎಲ್ಲಾ ಸಾಹಿತ್ಯ ಕೃಷಿಯುದ್ದಕ್ಕೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಮಾನವೀಯ ಸಂವೇದನೆಗಳನ್ನು ಸಾಹಿತ್ಯದ ಮೂಲಕ ಹೊರಹಾಕಿದ್ದಾರೆ. ಸನದಿಯವರ ಕೆಲವು ಪ್ರಮುಖ ಕಾವ್ಯ, ಗದ್ಯ, ನಾಟಕ ವಿಮರ್ಶಾ ಲೇಖನಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

ಸನದಿಯವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉಳುಮೆ ಮಾಡಿದ್ದು, ಅವುಗಳಲ್ಲಿ ಕಾವ್ಯವೇ ಅವರ ಪ್ರಧಾನ ಅಭಿವ್ಯಕ್ತಿ ಮಾಧ್ಯಮವೆನಿಸಿದೆ. ಕಾವ್ಯದಲ್ಲಿಯೇ ಎಲ್ಲ ಅನುಭವಗಳನ್ನು ಅಳವಡಿಸುವುದು ಕಷ್ಟ. ಕೆಲವು ಅನುಭವಗಳು ಗದ್ಯ ಪ್ರಕಾರವನ್ನೇ ನಿರೀಕ್ಷಿಸುತ್ತದೆ. ಅಂತೆಯೇ ಅವರು ಅನೇಕ ಸಣ್ಣಕತೆಗಳನ್ನು ನಾಟಕಗಳನ್ನು ಬರೆದದ್ದುಂಟು ಕಾವ್ಯದ ಹೊರತಾಗಿ ತ್ವರಿತ ಪರಿಣಾಮದ ದೃಷ್ಠಿಯಿಂದ ಸನದಿಯವರ ಪ್ರಕಾರ ನಾಟಕ ಅಷ್ಟೇ ಯಶಸ್ವಿಯಾಗಿಲ್ಲ.

ಒಂದು ಕಾಲದಲ್ಲಿ ಒಂದು ತತ್ವವನ್ನು ಹೇಳಿ, ಇನ್ನೊಂದು ಸಂದರ್ಭದಲ್ಲಿ ತಮ್ಮ ಧೋರಣೆಯನ್ನು ಬದಲಿಸುವುದು ನಂಬಿಕೆಯನ್ನು ಕದಲಿಸುವಂತಹದ್ದು ಸನದಿಯವರ ಕವಿತ್ವದಲ್ಲಿ ಕಂಡು ಬರುವ ಮಾನವ್ಯ ದೃಷ್ಠಿ ಗದ್ಯಲೇಖನಗಳಲ್ಲಿಯೂ ಕಂಡು ಬರುತ್ತದೆ. ಅವರ ಗದ್ಯದಲ್ಲಿ ಕ್ಲಿಷ್ಟತೆಯಿಲ್ಲದಿರುವುದೂ ಒಂದು ವಿಶೇಷ. ಕುಸುಮಾಗ್ರಜರ ಕವನಗಳು, ಇಂಗ್ಲೀಷ್ ಕವಿಗಳ ಹಲವಾರು ಕವನಗಳನ್ನು ಸನದಿಯವರು ಸಮರ್ಥವಾಗಿ ಅನುವಾದಿಸಿರುತ್ತಾರೆ. ಅವರು ರಚಿಸಿರುವ ಕಾವ್ಯಗಳೆಂದರೆ, ಆಶಾಕಿರಣ (೧೯೫೭), ನೆಲಸಂಪಿಗೆ (೧೯೫೮), ತಾಜಮಹಲು (೧೯೬೨), ಹಿಮಗಿರಿಯ ಮುಡಿಯಲ್ಲಿ (೧೯೬೨), ವೀರಕಂಕಣ (೧೯೬೫), ಧ್ರುವಬಿಂದು (೧೯೬೫), ಪ್ರತಿಬಿಂಬ (೧೯೬೭), ಸೀಮಾಂತರ (೧೯೭೪), ಮುಂಬೈ ಮಳೆ (೧೯೭೯), ಮನೆ ಮನೆಗೆ ಬೇಲಿ (೧೯೮೧), ಸಪ್ತರಂಗ (ಆಯ್ದ ಕವನಗಳು) (೧೯೮೧), ಗೀತ ಗುಂಜನ (೧೯೮೪), ಸಂಭವ (೧೯೯೧), ಸೂರ್ಯಪಾನ (ಸಮಗ್ರಕಾವ್ಯ ಸಂಪುಟ) (೧೯೯೫), ಮರುಭೂಮಿ (೧೯೯೮), ಲಿಂಕನ್ ಕವಿತೆಗಳು (೧೯೯೯), ನಮ್ಮ ಪ್ರೀತಿ (೨೦೦೧), ತಪನಿಂದ ತಾವರೆ (೨೦೦೨), ಥರ್ಸಿಟಿ ವರ್ಡ್ಸ್ (ಇಂಗ್ಲೀಷ್) (೨೦೦೨), ಹಾಗೆಯೇ ಕಥೆಗಳೆಂದರೆ, ನೀರಿಲ್ಲದ ನಲ್ಲಿ (೧೯೭೩), ಅನುಭವ (೧೯೮೬), ಬುರ್ಖಾದ ಹುಡುಗಿ (೨೦೦೬), ಶಿಶುಸಾಹಿತ್ಯಗಳೆಂದರೆ ಗುಲಾಬಿ ಗೊಂಚಲು (೧೯೫೫), ಗೃಹ ಪಂಚಮಿ (೧೯೫೫), ಜಿಲೇಬಿ ಝುಣ್-ಝುಣ್ (೧೯೫೬), ಬಹುಮಾನ (೧೯೬೨), ಹೂವಿನ ಹುಡುಗಿ (೧೯೬೦) ಹೊಸಾಹೊಸಾ ಹೂವು (೨೦೦೫), ವಿಮರ್ಶೆಗಳೆಂದರೆ ಜನಕಾವ್ಯದೃಷ್ಠಿ (೧೯೮೨), ಇಲ್ಲಿ ಸಲ್ಲುವವರು (ವಚನ ಸಾಹಿತ್ಯ) (೧೯೮೪), ಕಲೆ ಮತ್ತು ಮನುಷ್ಯ ಸಂಸ್ಕೃತಿ (೧೯೯೦), ನಾಟಕಗಳೆಂದರೆ ಬಂದೆಯಾ ಬಾ ರಾಯಾ (೧೯೭೪), ನೀಲಾಂಬಿಕಾ (೧೯೮೨), ಅನುವಾದಗಳೆಂದರೆ ರಕ್ತ ಮಾಂಗಲ್ಯ (೧೯೬೮), ನಮ್ಮ ಭಾರತ ದೇಶ (೧೯೬೯), ಭಗವಾನ್ ಮಹಾವೀರ್ (೧೯೮೩), ತಾನಸೇನ್ (೧೯೯೧), ಮಿರ್ಜಾಗಾಲಿಬ್ (೧೯೯೩), ಬಾಲಪಟ್ಟ ಫಜೀಲೆ (೨೦೦೧), ಬಾಲಪ್ಟ ಫಜೇಲೆ (೧೯೮೭), ಕ್ರಿಯೆ ಮತ್ತು ಸಂಬಂಧ (೨೦೦೦), ಸಂಪಾದನೆಗಳೆಂದರೆ ವಿಜಯ ದುಂದುಭಿ (ಕಾವ್ಯ) (೧೯೫೬), ಸನ್ಮಾನ (ಕಥೆ) (೧೯೬೮), ಶರಣ ಪ್ರಸಾದ (ವಚನಕಾರರು) (೧೯೬೯), ತುಂಗಾತರಂಗ (೧೯೬೮), ಮುಂಬಯಿ ಕತೆಗಳು (೧೯೯೪), ಇವರು ರಚಿಸಿರುವ ಕೃತಿಗಳಾಗಿವೆ. ಹಾಗೆಯೇ ಬಿ.ಎ. ಸನದಿಯವರು ೧೯೬೨ರಲ್ಲಿ ತಾಜಮಹಲ ಕಾವ್ಯಕ್ಕೆ ರಾಜ್ಯ ಸರಕಾರ ಪ್ರಶಸ್ತಿ,

೧೯೬೨ ತಾಜಮಹಲು ಕಾವ್ಯಕ್ಕೆ, ರಾಜ್ಯ ಸರಕಾರ ಪ್ರಶಸಿ, ೧೯೬೯ ಧ್ರುವಬಿಂದು ಕಾವ್ಯಕ್ಕೆ, ಭಾರತ ಸರ್ಕಾರ ಪುರಸ್ಕಾರ, ೧೯೯೨ ಸಮಗ್ರ ಸಾಹಿತ್ಯಕ್ಕೆ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೨೦೦೫ ಸಮಗ್ರ ಸಾಹಿತ್ಯಕ್ಕೆ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

೨.೩:- ಕವಿ - ಕಾವ್ಯಭಾಷೆ

ಸನದಿಯವರು ತಮ್ಮ ಕವನಗಳಲ್ಲಿ ಅಬ್ಬರಿಸಿದ್ದು, ಹುಬ್ಬೇರಿಸಿದ್ದು ಬಹಳ ಕಡಿಮೆ. ಆದರೆ ಶಬ್ದ, ಅರ್ಥಗಳ ಪ್ರಯೋಗಗದಲ್ಲಿ ಅವರ ದುಡಿಮೆ ಗಮನಾರ್ಹವಾದುದು. ಪದಲಾಲಿತ್ಯದೊಡನೆ ಮೇಳೈಸಿಕೊಂಡ ವೈಚಾರಿಕ ಸಾಂಗತ್ಯ ಕೌತುಕಪೂರ್ಣವಾಗಿದೆ. ಪದ ಸಂಯೋಜನೆಯಲ್ಲಿ ಸನದಿಯವರು ಸಾಧಿಸಿನ ನಯವಾದ ನವಿರಾದ ನಡಿಗೆ ಅವರ ಅನೇಕ ಸುನೀತಗಳಲ್ಲಿ ಎದ್ದು ಕಾಣುತ್ತದೆ.

ಸನದಿಯವರ ಕಾವ್ಯದ ಪ್ರತಿ ಶಬ್ದವೂ ಸಂಸ್ಕೃತಿಯಿಂದ ಹೀರಿಕೊಂಡ ಅರ್ಥಸಾಮರ್ಥ್ಯದ ಬಲದಿಂದ ಸಹಜವಾಗಿ ಅನುಭವವನ್ನು ದಾಟಿಸಿ ಬಿಡುತ್ತದೆ. ಸರಳ ಭಾವ, ಪಾರದರ್ಶಕ ಭಾಷೆ, ಸುಲಭಗ್ರಾಹಿ ಶೈಲಿ, ಲಯ ಪ್ರಧಾನ ಓಟದ ಮಧುರ ರಚನೆಗಳು ಇವು. ವಸ್ತುವಿಗೆ ತಕ್ಕಂತೆ ಭಾಷಾ ಶರೀರವನ್ನು ನಾದ-ಲಯಗಳ ಮೂಲಕ ಧರಿಸಿ ಮೈತಾಳುವ ಈ ರಚನೆಗಳ ಸಂಕ್ಷಿಪ್ತತೆ, ನಾದ-ಲಯಗಳ ಮೂಲಕ ಹಿಡಿಸುವ ಗುಂಗು, ಭಾರವಲ್ಲದ ಭಾವನಾಮಯತೆ, ಅಸಂದಿಗ್ಧ ಅರ್ಥ ಇತ್ಯಾದಿ. ಇಲ್ಲಿ ವೈಚಾರಿಕ ಅಂಶವೂ ವಿಫುಲವಾಗಿದೆ. ಕೆಲವು ಸಲ ಈ ಕಾರಣಗಳಿಂದಾಗಿ ಒಂದೊಂದು ಕವನ ಸುಂದರವಾಗಿ ಸುಲಲಿತವಾಗಿ ಓದುಗರಲ್ಲಿ ಕುತೂಹಲ ಹುಟ್ಟಿಸಿ, ಆಸಕ್ತಿ ಕೆರಳಿಸಿ ತಕ್ಷಣ ತೆಳುವಾಗಿ ಕೊನೆಗೊಂಡು ಅತೃಪ್ತಿಯನ್ನುಂಟುಮಾಡಿ ಬಿಡುತ್ತದೆ. ಬಹುಶಃ ಗೀತೆ ಪ್ರಕಾರದ ಕೆಲವು ಗುಣ ಲಕ್ಷಣಗಳ ಆಗ್ರಹದಿಂದಲೂ ಹೀಗಾಗಲೂ ಶಕ್ಯವಿದೆ.[೪]

ಸನದಿಯವರ ಕಾವ್ಯದ ಪ್ರಮುಖ ಅಂಶವೆಂದರೆ ಗುರಿಸಾಧನೆಯಲ್ಲಿ ಇವುಗಳ ಸಫಲತೆ. ಹಾಡಲು, ರಂಜಿಸಲು, ಕಾವ್ಯಭಾರುಚಿಯನ್ನು ಕುದುರಿಸುವ ದಿಸೆಯಲ್ಲಿ ಖಂಡಿತವಾಗಿ ಇವು ಯಶಸ್ವಿಯಾಗುತ್ತವೆ. ಇವರ ನಲ್ವತ್ತು ವರ್ಷಗಳ ನಿರಂತರ ಕಾವ್ಯ ಸಾಧನೆಯಲ್ಲಿ ಗೇಯಗುಣದ ಗೀತೆಗಳು ಇವರನ್ನು ಬೆನ್ನಟ್ಟಿಕೊಂಡು ಬಂದಿರುವ ಹಾಗೆ ಭಾಸವಾಗುತ್ತದೆ. ಇವರ "ಸಂಭವ" ಕವನ ಸಂಗ್ರಹದ ಒಂದು ಕವನ ಹೀಗಿದೆ :

"ಯಾರು ನಿಲ್ಲದೆ ಹೋದರೂ
ಹಾಡು ನಿಲ್ಲಲೆ ಇಲ್ಲ,
ನಿಲ್ಲುವುದು ಹಾಡಲ್ಲ!"

ಸನದಿಯವರ ಕಾವ್ಯವು ಸಮನ್ವಯ ಕಾವ್ಯವೆನ್ನುವುದಕ್ಕೆ ಹತ್ತಿರವಿರುವ ರಚನೆಗಳು ಇವು. ಅಂದರೆ ನವೋದಯದ ಭಾವನಿಷ್ಠೆಯ ಜೊತೆಗೆ ನವ್ಯದ ತಾಂತ್ರಿಕ ಕೌಶಲ್ಯಗಳನ್ನು

ಮೈಗೊಂಡಿಸಿಕೊಂಡಿರುವುವು ಈ ರಚನೆಗಳು. ಅಂದರೆ ನವ್ಯದ ಛಲದಿಂದ ಶೈಲಿಯಲ್ಲಿ ಅಂದರೆ ಎಲ್ಲವನ್ನೂ ಪ್ರತಿಮಾನಿಷ್ಠವಾಗಿಯೇ ಹೇಳುವೆನೆಂಬ ಛಲ ಇವರ ಕಾವ್ಯದಲ್ಲಿ ಇಲ್ಲ. ಹಾಗಂತ ಅವನ್ನು ಬಳಸುವುದೇ ಇಲ್ಲವೆಂಬ ವಿರೋಧವೂ ಇಲ್ಲ. ಈ ಪ್ರಯೋಗ ಮುಕ್ತತೆಯ ಕಾರಣದಿಂದಲೂ ಇವು ಸಮನ್ವಯ ಕಾವ್ಯಕ್ಕೆ ಸೇರುತ್ತವೆ. ಅಂದರೆ ಇಲ್ಲಿ ಹಲವು ಕವಿತೆಗಳು ನವೋದಯದ ಸಿದ್ಧ ಶೈಲಿಯಲ್ಲಿಯೇ ಬರೆಯಲ್ಪಟ್ಟಿವೆ. ಉದಾಹರಣೆಯಾಗಿ:- ಚೈತ್ರೋದಯ, ಪ್ರಜ್ಞಾಪತಿ, ಮಣ್ಣು ಇತ್ಯಾದಿ ಕೆಲವು ಕವಿತೆಗಳು ಬಯಲಸೀಮೆಯ ಜಾನಪದ ಶೈಲಿಯಲ್ಲಿರುವುದನ್ನು ನಾನೇ ಗಮನಿಸಿರುತ್ತೆನೆ.

ಇವುಗಳಲ್ಲಿ ಗೀತಗುಣಕ್ಕೆ ಶಬ್ದಸಂಪತ್ತಿಗೆ ಸಂಬಂಧಪಟ್ಟು ಹೇಳುವುದಾದರೆ ಇಲ್ಲಿನ ಬಹುತೇಕ ರಚನೆಗಳು ಯಶಸ್ವಿಯಾಗಿವೆ. ಲಯ ವೈವಿಧ್ಯ ಉಲ್ಲೇಖಾರ್ಹ ಅಂಶ ಇವರ "ಗೀತ ಗುಂಜನ" ಸಂಕಲನದಲ್ಲಿದೆ. ಜಾನಪದ ದಾಟಿಯ ಈ ಕವನ ಹೀಗಿದೆ :

"ಬರ್ತದ ಬರ್ತದ ಬರ್ತದ ಅಂದರೆ
ಬರಲಿಲ್ಲ ಯಾವೊಂದು ತ್ವಾಳ
ಹೆದರಿಸಿ ಬೆದರಿಸಿ ಗದರಿಸಿಕೊಂಬೋರು
ಹುಸಿಗೊಂಡು ಹಾಕೋದು ಭಾಳಾ
ಬೆಳೆಯುವ ಬನದಾಗ
ದುಡಿಯುವ ಜನದಾಗ
ಅರಳುವ ಮನದಾಗ
ತೇಲುತ್ತಲಿರುವಾಗ
ಕನಸಿನ ಬೆಳ್ಳಕ್ಕಿ ಸಾಲಾ"

ಭಾವಾನುವರ್ತಿಯಾಗಿ ಲಯದ ಗತಿಯನ್ನು ಬದಲಾಯಿಸಿಕೊಳ್ಳುತ್ತ ಪರಂಪರಾಗತ ನಂಬಿಕೆಯೊಂದನ್ನು ಜಾಲಾಡಿಸುತ್ತ ಸಾಗುವ ಈ ಕವನ ಕನಸಿನ ಬೆಳ್ಳಕ್ಕಿ ಸಾಲಾ ಎಂಬಲ್ಲಿ ಉಜ್ವಲವಾಗಿ ಮಿನುಗುವದು ಕವಿಯ ಭಾಷಾ ಸಾಮರ್ಥ್ಯಕ್ಕೆ ಸಾಕ್ಷಿ. ಹೃದಯ ತಟ್ಟದ ಕ್ರಿಯೆ ಮೆದುಳು ತಟ್ಟುವುದಿಲ್ಲ ಎಂದರಿತ ಕವಿಯ ಈ ಮಾದರಿಯ ಕವನಗಳು ಹೃದಯವನ್ನು ತಟ್ಟಿ ಮೆದುಳನ್ನೂ ಮುಟ್ಟಿ ವಾಚಕರನ್ನು ವಿಚಾರಕ್ಕೆ ತೊಡಗಿಸುವುದು ಗಮನಾರ್ಹವಾದ ಸಂಗತಿಯಾಗಿದೆ.

ಕವಿಯ ಶಬ್ದಗಳಿಗೆ ಕಲಾವಿದರ ಸ್ವರವು ಆಯಾ ಕಾವ್ಯಾಭಿಲಾಷೆಗೆ ತಕ್ಕಂತೆ ಹೊಂದಿಕೊಂಡಾಗ ಶ್ರೋತೃಗಳ ಮೇಲಾಗುವ ಪರಿಣಾಮವೂ ಸಹ ಅದ್ಭುತವಾಗಿರುತ್ತದೆ.

"ಕೇವಲ ಶಬ್ದಗಳ ಸುರು ಸುರು ಬಾಣ ಬಿಡುವುದರಿಂದ
ಕತ್ತಲೆಯೂ ಕರಗುವುದಿಲ್ಲ
ಹೊಸ ಬೆಳಕೂ ಬರುವುದಿಲ್ಲ"

ಎಂಬ ವಾಸ್ತವ ಸತ್ಯವನ್ನು ಕಂಡು ಕೊಂಡಿರುವ ಕವಿ ಸನದಿಯವರು ತಮ್ಮ ಕಾವ್ಯವನ್ನು ಕೇವಲ ಶಬ್ದ ಭಂಡಾರದ ರಾಶಿಯನ್ನಾಗಿಸದೆ ಓದುಗನನ್ನು ಸ್ವವಿಮರ್ಶೆಗೆ ಒಡ್ಡುತ್ತದೆ. ಮನುಷ್ಯ ಮಾಗಿದ ಮೇಲೆ ಅವನ ಲೇಖನಿಯಿಂದ ಮಧುರವಾದುದೇ ಹೊರಬರುತ್ತದೆ. ಅವರ ಪದ್ಯದಂತೆ ಗದ್ಯವೂ ಬಹು ಹೃದ್ಯವಾಗಿದೆ. ಬಹು ಸುಂದರವಾದ ಸೊಬಗಿನ ಶೈಲಿಯನ್ನು ಅವರು ಸಾಧಿಸಿದ್ದಾರೆ.

ಸನದಿಯವರ ಕಾವ್ಯಭಾಷೆಗೆ ಸಾಕಷ್ಟು ಕಹಿಯಾದ ಆದರೂ ಸಿಹಿಯನ್ನು ಕಳೆದುಕೊಳ್ಳದ ಅನುಭವದ ಹಿನ್ನೆಲೆಯಿದೆ. ಆಶಾವಾದಿಯಾದ ಮನೋಭೂಮಿಕೆಯಿದೆ. ಅವರ ಬರವಣಿಗೆಗೆ ಒಂದು ಹದವಿದೆ, ಸವಿಯಿದೆ. ನಮ್ಮ ಬಹುತೇಕ ಕವಿಗಳು ಶ್ಲೇಷೆಯನ್ನು ಸಮರ್ಥವಾಗಿ ಬಳಸುತ್ತಾರೆ. ಕೆಲವರಲ್ಲಿ ಶಬ್ದಚ್ಛೇದ ಮಾತ್ರ ಕೃತ್ರಿಮವೆನಿಸಿ ಬಿಡುತ್ತದೆ. ಆದರೆ ಸನದಿಯವರು ಇವೆರಡನ್ನೂ ಯಶಸ್ವಿಯಾಗಿ ಪ್ರಯೋಗಿಸಿದ್ದೊಂದು ವಿಶೇಷ.

ಈ ಕವಿ ತಮ್ಮ ಅನೇಕ ಕವನಗಳಲ್ಲಿ ಪರಿಚ್ಛೇದದ ಸಫಲ ಪ್ರಯೋಗ ಮಾಡಿ, ಆಯಾ ಶಬ್ದ ಅಥವಾ ಪಂಕ್ತಿಯ ತುಣುಕುಗಳಲ್ಲಿ ಹೊಸ ಅರ್ಥದ ಮಿಣುಕು ಮೂಡುವಂತೆ ಮಾಡಿದ್ದಾರೆ. ಮನೆಮನೆಗೆ ಬೇಲಿಯ ಇಂದಿನ ಹಾಡು ಕವನದಲ್ಲಿ ಹೀಗಿದೆ :

"ಒಳಮನದ ದಿಕ್ಕುಗಳ ಸುಕ್ಕುಗಳ
ಒಳಗವಿತ ಕಾ
ರಣದ"

ಎಂಬಲ್ಲಿಯ ರಣ ಹಾಗೂ ಕಾರಣ ಅರ್ಥವ್ಯಾಪ್ತಿಯನ್ನು ಗಮನಿಸಬಹುದು. ಅದರಂತೆಯೇ 'ನಮ್ಮ ಸರಸತೀ ವಿಚಾರ' ಕವನದಲ್ಲಿ ದೀನ-ದಲಿತರ ಕೈವಾರಿ ಎಂಬಲ್ಲಿಯ ವಾರಿ-ಕೈವಾರಿಗಳ ಸಂದರ್ಭೋಚಿತ ಅರ್ಥ ವಿಶೇಷವನ್ನು ಗಮನಿಸಬಹುದಾಗಿದೆ. ಲಯ-ವಲಯಗಳು ಸೃಷ್ಟಿಸುವ ಅರ್ಥವಲಯಗಳ ಸೊಗಸೇ ಬೇರೆ. ಉದ್ಧಾರ ಕವನದಲ್ಲಿಯ ಈ ಪರಿಯ ಪರಿವರ್ತನೆಗೇನು ಕಾರಣವೇನು ಪರಿಣಾಮ ಎಂಬಲ್ಲಿಯ ಹುಟ್ಟಿಕೊಳ್ಳುವ ನಾದತರಂಗಗಳ ಜೊತೆಗೆ ಸೂಸುವ ಅರ್ಥವಿನ್ಯಾಸದ ಪರಿಣಾಮ ಮನಸ್ಸಿಗೆ ಮುದ ನೀಡುತ್ತದೆ. ಇಂಥ ಪರಿಚ್ಛೇದ ಹಾಗೂ ಶ್ಲೇಷೆಗಳ ಪ್ರಯೋಗ ಸನದಿಯವರ ಹನಿಗವನಗಳಲ್ಲಂತೂ ಹೇರಳವಾಗಿ ನಡೆದಿದೆ. ಕಾವ್ಯ ಸಂವಹನ ನಾನಾ ಮಜಲುಗಳಲ್ಲಿ ಕಾವ್ಯ ಅರ್ಥವಾಗುವುದು ಒಂದು. ಆದ್ದರಿಂದ ಕಾವ್ಯ ಅರ್ಥವಾಗುವಂತಿರಬೇಕು ಆದರೆ ಅದಕ್ಕಿಂತ ಮಿಗಿಲಾಗಿ ಕಾವ್ಯದಲ್ಲಿ ಅರ್ಥವಿರಬೇಕು, ಆಗಲೇ ಕಾವ್ಯ ಅರ್ಥಪೂರ್ಣ ಎನ್ನುವ 'ಅಡಿಗರ' ನುಡಿಯನ್ನು ಇಲ್ಲಿ ನೆನೆಯಬಹುದಾಗಿದೆ.

ಸಾಮಾನ್ಯವಾಗಿ ಶ್ಲೇಷೆಯು ಒಂದೇ ಪದದಿಂದ ದ್ವಯಾರ್ಥ ಹೊರಡಿಸುವುದರಲ್ಲಿರುತ್ತದೆ. ಅದೂ ಆ ಶಬ್ದದ ಸಂದರ್ಭವನ್ನೇ ಅವಲಂಬಿಸಿರುತ್ತದೆ. ಉದಾಹರಣೆಗೆ ಸೀಮಾಂತರ ಸಂಗ್ರಹದ ಸಾಕು ಕವನದ ಕೆಲವು ಸಾಲುಗಳು ಹೀಗಿವೆ:

"ಇಂದು ಈ ಪರಿ War ಮಾಡುವ ಪರಿವರ ಯಾರಿಗಪ್ಪ ಬೇಕು?

ಪೆನ್ನು-ಗನ್ನುಗಳೆರಡನೂ ಹಿಡಿಯಲಾಗದ ಸೇನೆ

ಸಾಕಪ್ಪಾ ಸಾಕು"

ಇಲ್ಲಿ ಪರಿವಾರವನ್ನು ಈ ರೀತಿ ಯುದ್ಧವನ್ನಾಗಿ ಮಾರ್ಪಡಿಸುವ ಪೆನ್ನು-ಗನ್ನುಗಳೆರಡನ್ನೂ ಹಿಡಿಯಬಲ್ಲ ಕವಿಚಾತುರ್ಯದ ಚಾರುತ್ವ ಒಡಮೂಡಿ ನಿಂತಿದೆ.

ಕವಿತೆಯಲ್ಲಿ ಭಾವ-ಅರ್ಥ-ರಸಗಳು ಓಕುಳಿಯಾಡಬೇಕಾದರೆ ಅದರ ಹಿಂದೆ ಜೀವನಾನುಭವ ದ್ರವ್ಯ ಗಟ್ಟಿಗೊಂಡಿರಬೇಕು. ಒಂದು ಪಕ್ಷ ಒತ್ತಾಸೆಯಿಂದ ಕವಿತೆ ಹೊಸೆದರೆ ಅಲ್ಲಿನ ಅಕ್ಷರಗಳೇ ಅದಕ್ಕೆ ಭಾರವಾಗುತ್ತದೆ. 'ಭಾರ' ಎಂಬ ಹನಿಗವಿತೆಯಲ್ಲಿ ಇಂತಹ ಅನಿಸಿಕೆಯನ್ನು ಸನದಿಯವರು ಮೋಡಗಳ ಆವರಣದಲ್ಲಿ ಈ ರೀತಿ ವ್ಯಕ್ತಪಡಿಸಿರುತ್ತಾರೆ.

"ಉಗಿಯಾಗಿ ಬಿಗಿಯಾಗಿ ಮೋಡಗೊಳ್ಳುವ ಮುನ್ನ

ಗಿರಿ-ಕೊಳ್ಳಗಳ ತಿರುವಿನಲಿ ಸಿಲುಕಿ ತಿಣುಕುತ್ತ

ತನ್ನ ಅಸ್ತಿತ್ವವನೆ ಕಳೆದುಕೊಳ್ಳುವ ಶಬ್ದಕ್ಕೆ

ಅಕ್ಷರಕ್ಷರ-ಭಾರ!"

ಎಲ್ಲಾ ಮೋಡಗಳು ಮಳೆ ಸುರಿಸಲಾರವು. ಗರ್ಭಕಟ್ಟುವ ರಸ ಮೋಡಗಳೇ ಮಳೆ ಸುರಿಸಬಲ್ಲವು ಕಾಯ್ದಿಟ್ಟುಕೊಂಡ ಆವಿಗೆ ತಂಪು ತಗಲುವ ವಾಯು ಮಂಡಲ ಎತ್ತರಕ್ಕೇರಿದಾಗಲೇ ಮೊದಲು ಘನೀಭೂತವಾಗುತ್ತದೆ. ಇದನ್ನೇ ಭಾವಸ್ಥಿತಿ-ರಸಸ್ಥಿತಿಗೇರಿಸಿದಾಗಲೇ ಕಾವ್ಯ ಫಲಿಸಬಲ್ಲುದು ಎಂಬ ತತ್ವಕ್ಕೆ ಅನ್ವಯಿಸಿಕೊಳ್ಳಬಹುದಾಗಿದೆ. ಅಕ್ಷರಗಳಾಚೆ ಶಬ್ದ, ಶಬ್ದಗಳಾಚೆಗೆ ಭಾವ, ಭವದಾಚೆಗೆ ರಸಸ್ಪಂದನ, ಇದನ್ನು ಪ್ರಕೃತಿಯ ಪರ್ಯಾವರಣ ಮಟ್ಟದಲ್ಲಿ ಕಾಣಿಸಲಾಗಿದೆ.

ಹಾಗೆ ನೋಡಿದರೆ, ಸನದಿಯವರ ಕವಿತೆ ಅಂಥ ಆಭರಣ ಪ್ರಿಯಳೇನು ಅಲ್ಲ. ಆಕೆ ಮೂಲತಃ ನಿರಾಭರಣ ಸುಂದರಿ. ಆದರೆ ಆಭರಣ ಬೇರೆ, ಅಲಂಕಾರವೇ ಬೇರೆ. ಅಲಂಕಾರಕ್ಕೆ ಅಲಂ (ಸಾಕು) ಎನಿಸುವ ಔಚಿತ್ಯ ಪ್ರಜ್ಞೆಯಿರುತ್ತದೆ. ಎಲ್ಲಿ, ಯಾವುದು, ಎಷ್ಟು ಸಲ್ಲಬೇಕು ಎಂಬ ಅರಿವಿನಿಂದ ಈ ಕವಿ ತನ್ನ ವಾಗ್ದೇವಿಗೆ ಒಡವೆಗಳನ್ನು ತೊಡಿಸುತ್ತಾರೆ. ಒಡಗೂಡುವಂತೆ ಇದ್ದರೆ ಅದೊಂದು ಒಡಪು. ಇಲ್ಲವಾದರೆ ಬರೀ ಒಡವೆ ಎಂದು ಸನದಿ ಹೀಗೆ ನುಡಿದಿದ್ದಾರೆ.

"ಮನದಲ್ಲಿ ಮೂಡುವ ನಾದ-ವಿನೋದಕ

ಶಬ್ದವೂ ಹೊರಗಿನ ಆವರಣ!

ನಾದಕೆ ಮೋದವೆ ತಾಳಿಯ ಕಟ್ಟಲು

ಮತ್ತೇತಕೆ ಹೊಸ ಆಭರಣ?

ಸಿಂಗಾರಗೊಳುವುದಕೆ ಬಂಗಾರವೇ ಬೇಕೆ

ಹಳೆಯದಾಯಿತು ನಲ್ಲೆ ಆ ನಂಬಿಕೆ!"

ಇಂಥ ಪದ್ಯಗಳಲ್ಲಿ ತನ್ನ ಕಾವ್ಯದ ನಿರಾಭರಣ ಸೌಂದರ್ಯದ ಬಗ್ಗೆ ಕವಿಗೆ ಅಭಿಮಾನವಿದ್ದುದು ಎದ್ದು ಕಾಣುತ್ತದೆ.

ಸನದಿಯವರ ಕವಿತೆಗಳಲ್ಲಿ ಒಂದಾದ ಮೇಲೊಂದು ನುಡಿಚಿತ್ರಗಳನ್ನು ನೀಡುತ್ತ ಒಂದೊಂದು ಅನುಭವವು ಆಂತರಿಕ ಸಂಬಂಧವನ್ನು ಪಡೆಯುತ್ತ ಕೊನೆಯವರೆಗೂ ಕೂತೂಹಲವನ್ನು ಹುಟ್ಟಿಸುವ ಸಹಜ ಕಲೆಗಾರಿಕೆ ಕಾಣುತ್ತದೆ. ಇಂದಿನ ಜೀವನದ ಹಾಗೆಯೇ ಕಾವ್ಯಧೋರಣೆಯು ನಾನಾ ಬಗೆಗಳನ್ನು ಸುರುಳ ಬಿಚ್ಚುತ್ತ ಯಾವುದು ಸಲ್ಲದೆಂಬುದನ್ನು ಅಲ್ಲಲ್ಲೇ ಧ್ವನಿಸುತ್ತ ದುಡಿಯುವವರ ಮೌನಕ್ಕೆ ಹೊಸ ಧ್ವನಿಯ ನೀಡುವ ಬಯಕೆ ಸಚಿತ್ರವಾಗಿದೆ. ತನ್ನ ವಿಶಿಷ್ಟತೆಗೆ ಅನುಗುಣವಾದ ಭಾಷೆ ಲಯಗಳ ಮೂಲಕ ಹೊಸತನವನ್ನು ದಕ್ಕಿಸಿಕೊಂಡು ಕಾವ್ಯಧೋರಣೆ ಯಾವುದೇ ಇದ್ದರೂ ಅದರ ಅಭಿವ್ಯಕ್ತಿ ಕಲಾತ್ಮಕವಾಗಿರುವಂತೆ ಇವರ ಕಾವ್ಯ ನೋಡಿಕೊಳ್ಳುತ್ತದೆ.

ಚೆನ್ನವೀರ ಕಣವಿಯವರು ಸನದಿಯವರ ಕಾವ್ಯದಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಂಶಗಳನ್ನು ಈ ರೀತಿಯಲ್ಲಿ ಗುರುತಿಸಿರುತ್ತಾರೆ.

೧. ಬದುಕಿನ ಬಗ್ಗೆ ಚಿಂತನದ ಬೇರೆ ಬೇರೆ ಪರಿ, ಕಪಟ, ವಂಚನೆ, ಆಡಂಬರ, ಆಟೋಟೋಪಗಳನ್ನು ಕಟುವಾಗಿ ವಿಡಂಬಿಸಬಲ್ಲ ಶಕ್ತಿ.

೨. ಮನಸ್ಸಿನ ಒಂದು ಭಾವನೆಯನ್ನು ತಕ್ಕ ನಿದರ್ಶನದೊಂದಿಗೆ ಅದರ ಸೌಮ್ಯ ವೈಷಮ್ಯಗಳೊಂದಿಗೆ ರೂಪಿಸುವ ಕಲೆ.

ಇದು ಅಲ್ಲದೆ. ಮುಕ್ತ ಛಂದದ ಆಡುಮಾತಿನ ಲಯ ಇಲ್ಲಿ ಪ್ರಧಾನವಾಗಿದ್ದರೂ ಅದನ್ನು ಇನ್ನಷ್ಟು ಹಿಡಿತಕ್ಕೆ ಬಲಪಡಿಸಬೇಕು. ಅದರಿಂದ ರಚನೆಯಲ್ಲಿ ಬಿಗುವು ಉಂಟಾಗುತ್ತದೆ. ಇದನ್ನು ಈ ಕವಿ ಮರೆತಿಲ್ಲ. ಅಲ್ಲದೆ ಶಬ್ದಕ್ಕಿರುವ ವ್ಯಂಜನಾ ಸಾಮರ್ಥ್ಯವನ್ನು ಇವರು ತಮ್ಮ ಕಾವ್ಯ ಶೈಲಿಗೆ ಚೆನ್ನಾಗಿಯೇ ಬಳಸಿಕೊಂಡಿದ್ದಾರೆ ಎಂಬುದು ಕಣವಿಯವರ ಅಭಿಪ್ರಾಯವಾಗಿದೆ.[೫೫]

ಇದಕ್ಕೆ ಒಂದು ಚಿಕ್ಕ ಮಾದರಿ ಹೀಗಿದೆ :

"ನಾವೆಲ್ಲ ತಪ್ಪಿ ಮಾತು ಕೊಡುವವರು
ಕೊಟ್ಟು ತಪ್ಪುವವರಲ್ಲ,
ಕೊಟ್ಟು ತಪ್ಪುವವರಲ್ಲ;
ತಪ್ಪಿ ಒಪ್ಪುವವರಲ್ಲ ಬಲ್ಲಿರಾ?"

ಇಲ್ಲಿ ತಪ್ಪು ಬೇರೆ-ಬೇರೆ ಅರ್ಥದ ನೆಲೆಗೂ ಚಾಚಿಗೊಳ್ಳುತ್ತದೆ ಹಾಗೆಯೇ

"ಹೊಹಾರಿ ಅತ್ತಿತ್ತ ಓಡಾಡುವರ ನಡುವೆ
ಸ್ತಂಭದೊಳು ನಿಂತು
ನಿಂತಲ್ಲೇ ದೀಪಸ್ತಂಭವಾಗು!"

ಇಲ್ಲಿ 'ಸ್ತಂಭವನ್ನು' ಸಮರ್ಥವಾಗಿ, ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

ಇಡಿಯ ನೆಲ-ಮುಗಿಲಗಳ ನಡುವೆ ವ್ಯಾಪಿಸಿರುವ ಮಾನವ್ಯತೆಯ ಆಕಾರ-ವಿಕಾರಗಳನ್ನೆಲ್ಲ ತಿಳಿಗಣ್ಣಿನಿಂದ ಅಳೆದು ತಿಳಿದು ನೋಡುವ ಶಬ್ದ ಪ್ರಪಂಚ ಈ ಕವಿಯದು. ಸನದಿಯವರ ಕಾವ್ಯಭಾಷೆಯಲ್ಲಿನ ಪದಸಂಯೋಜನೆ ಯಥಾರ್ಥವಾಗಿ ಅನುರಣನದ ಧ್ವನಿಯನ್ನು ಕೊಡುವುದು ಗಮನಾರ್ಹವಾಗಿದೆ. ಇತರ ಕವನಗಳಲ್ಲಿ ಹಲವೊಂದು ಕಡೆಗೆ ಕೃತ್ಯಾನುಕರಣ, ಪದಪುಂಜಗಳು ಕಾಣಸಿಗುತ್ತವೆ. ಆದರೆ ಇವು ಕೇವಲ ಕಾವ್ಯದ ಬೆಡಗು ಹೆಚ್ಚಿಸುವ ಆಭರಣಗಳಾಗಿರದೆ ಸಹೃದಯರನ್ನು ಕ್ಷಣಕಾಲವಾದರೂ ಆಲೋಚನೆಗೆ ತೊಡಗಿಸುವ ಶಬ್ಧೋಪಕರಣಗಳಾಗಿವೆ. ಈ ಕವಿ ದೃಷ್ಟಿಯಲ್ಲಿ ಜಡವಾದ ಆಭರಣಗಳಗಿಂತ ಕ್ರಿಯಾಶೀಲ ಉಪಕರಣಗಳ ಉಪಯೋಗವೇ ಹೆಚ್ಚು ಮಹತ್ವದ್ದು. ಈ ತಾರತಮ್ಯವನ್ನು ನಿರ್ಧರಿಸುವಲ್ಲಿಯೂ ಕವಿಯು ಭಾವುಕತೆಗಿಂತ ವಿವೇಕವೇ ಹೆಚ್ಚು ಕ್ರಿಯಾಶೀಲವಾದದ್ದು. ಈ ವಿವೇಕದ ಬಹುಮುಖ ಸಂವಹನಕ್ಕೆ ಶಬ್ದಗಳನ್ನು ಕವಾಯಿತಿಗೆ ನಿಲ್ಲಿಸಿ ತನ್ನದೇ ಆದ ಕಾವ್ಯ ಶರೀರದ ಶಿಸ್ತಿಗೊಳಪಡಿಸಿದ್ದು ಈ ಕವಿಯ ಶ್ರೇಯಸ್ಸು ಎಂಬುದನ್ನು ನಾನಿಲ್ಲಿ ಅರಿತಿದ್ದೇನೆ.

೨.೪:- ಮಾನವ್ಯ ಕಾವ್ಯ

ಸಾಹಿತ್ಯಾಸಕ್ತ ದೃಷ್ಟಿಗೆ ನಮ್ಮ ಸಮಕಾಲೀನ ಸಾಹಿತಿಗಳಲ್ಲಿ ಅಭಿವ್ಯಕ್ತಿಯ ಮೂರು ಪ್ರಕಾರಗಳು ಕಂಡುಬರುತ್ತವೆ. ಇದನ್ನು ನಾವು ಯಾವುದೇ ಸಾಹಿತ್ಯಿಕ ಚಳುವಳಿಗೆ ಅನ್ವಯಿಸಿ ಹೇಳುವಂತಿಲ್ಲ. ಬದಲಿಗೆ ತನ್ನ ಮಾಧ್ಯಮದಲ್ಲಿ ಸಾಹಿತಿಯು ಪ್ರವೃತ್ತನಾಗುವ ವಿಧಾನಗಳನ್ನು ಮಾತ್ರ ಲಕ್ಷಿಸುತ್ತೇವೆ. ಅಲ್ಲದೆ ಇಲ್ಲಿ ಸಾಹಿತಿಗಿಂತ ಸಾಹಿತ್ಯವೇ ಮುಖ್ಯವಾಗುತ್ತದೆ.

ಮೊದಲನೆಯದಾಗಿ ಶಿವರಾಮ ಕಾರಂತರಂಥ ಅನುಭವ ಪ್ರಾಮಾಣ್ಯಕ್ಕೆ ಆತುಕೊಂಡು ಬರೆಯುವ ವಾಸ್ತವ ಪ್ರಜ್ಞೆಯನ್ನು ಸದಾ ಕಾಯ್ದುಕೊಳ್ಳುವ ಸಾಹಿತಿಗಳು ಅವರು ತಮ್ಮ ವಸ್ತುವಿನೊಂದಿಗಿನ ಸಂವಾದದಲ್ಲಿ ನಿಗದಿತ ಅಂತರವನ್ನಿಟ್ಟುಕೊಳ್ಳುತ್ತಾರೆ. ಕ್ರಾಂತಿ, ಹೊಸತನ ಅನ್ವೇಷಣೆ, ಮೌಲ್ಯ, ಸಂಘಟನೆ, ವಿಘಟನೆಗಳೆಲ್ಲವೂ ಬದುಕಿನ ಸಹಜ ಹಂತಗಳಾಗಿ ಮಾತ್ರ ಇಲ್ಲಿ ಪಡೆಯುತ್ತದೆ.

ಇನ್ನೊಂದು ವರ್ಗದ ಸಾಹಿತ್ಯದಲ್ಲಿ ಸಮಾನವಾದ ಆದರೆ ಪರಸ್ಪರ ವಿರುದ್ಧವಾದ ಎರಡು ಶಕ್ತಿಗಳು ಹೊರಕ್ಕೆಯಾಗುವ ಸಮತೋಲನವನ್ನು ಹುಡುಕಿಕೊಳ್ಳುವ ಪ್ರಯತ್ನಗಳನ್ನು ಕಾಣುತ್ತೇವೆ. ಇದು ಬದುಕಿನ ಧ್ವನಿಪೂರ್ವ ಪ್ರತೀಕಾತ್ಮಕ ಮರುಸೃಷ್ಟಿಯಾಗಿದೆ. ಸ್ತ್ರೀವಾದಿ ಬರಹಗಳು ಅಥವಾ ದಲಿತ ಕೃತಿಗಳ ಯಜಮಾನದ ವಿರುದ್ಧ ಸಂಘರ್ಷ ವ್ಯವಸ್ಥೆಯನ್ನು ಪ್ರಶ್ನಿಸುವ ಧೋರಣೆಗಳು ಈ ಪ್ರಕಾರದಲ್ಲಿ ಪ್ರಧಾನವಾಗಿರುತ್ತವೆ.

ಮೂರನೇ ದಾರಿಯನ್ನು ಹಿಡಿದ ಸಾಹಿತಿಗಳು ಇಂಥ ಬದ್ಧತೆಗಳನ್ನು ಮುಕ್ತ ಮನೋಭಾವದಿಂದ ಬರೆಯುವ ಬಲವನ್ನು ಗುರುತಿಸುಬಹುದು. ಅಲ್ಲಿ ಕನಸುಗಾರಿಕೆ, ರಮ್ಯವಾದ, ಆದರ್ಶಪ್ರಿಯತೆಗಳೂ ಇವೆ. ವಾಸ್ತವದ ಕಟು ಪ್ರಜ್ಞೆ ಪ್ರತಿಕ್ರಿಯಾಶೀಲತೆ ಪ್ರತಿಭಟನೆಗೂ ಇವೆ. ಸೋಲು. ನೋವು. ವೈಫಲ್ಯ. ಆಶಾವಾದ. ಆತ್ಮವಿಶ್ವಾಸಗಳಿಗೂ ಅವಕಾಶವಿದೆ. ಈ ವಿಧಾನವನ್ನು ತಮ್ಮ ಸಾಹಿತ್ಯಮಾರ್ಗವಾಗಿ ಆಯ್ದುಕೊಂಡವರಲ್ಲಿ ಮಾನವ್ಯ ಕವಿ 'ಬಿ.ಎ.ಸನದಿ'ಯವರೂ ಒಬ್ಬರಾಗಿದ್ದಾರೆ.

ಈ ಮೂರನೇ ವರ್ಗಕ್ಕೆ ಸೇರಿದ ಸಾಹಿತ್ಯವನ್ನು ಪುರೋಗಾಮಿ ಸಾಹಿತ್ಯವೆಂದು ಅ.ನ.ಕೃರವರು ಗುರುತಿಸುತ್ತ. ಪುರೋಗಾಮಿ ಸಾಹಿತ್ಯದ ಲಕ್ಷಣಗಳನ್ನು ಹೀಗೆ ಸೂಚಿಸಿದ್ದಾರೆ. ಈ ವರ್ಗಕ್ಕೆ ಸೇರಿದ ಸಾಹಿತಿಗಳ ಸಾಹಿತ್ಯದಲ್ಲಿ ಮಾನವತೆಯನ್ನು ತನ್ನ ಧರ್ಮವನ್ನಾಗಿ ಸ್ವೀಕರಿಸಿದ್ದಾರೆ. ತಾವು ಹುಟ್ಟಿದ ಧರ್ಮ ಬೆಳೆದ ವಾತಾವರಣ ಮುಖ್ಯವಲ್ಲ. ಜಗತ್ತಿನ ಜೀವನವನ್ನೆಲ್ಲ ಒಂದು ಗೂಡಿಸುವ ನೂಲು ಯಾವುದೋ ಅದೇ ಅವನ ಧರ್ಮ. ಪುರೋಗಾಮಿ ಸಾಹಿತಿ ತನ್ನ ಕಾರ್ಯಕ್ಷೇತ್ರ ರೂಢಿಮೂಲವಾದ ಕೆಲವು ತತ್ವಭಾವನೆಗಳೆಂದು ಬಗೆಯುವುದಿಲ್ಲ. ಅವನು ತೆರೆದ ಕಣ್ಣುಗಳುಳ್ಳವನು ಜಗತ್ತಿನಲ್ಲಿ ಕಾಣುವ ಮತ್ತು ತನ್ನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವ ಪ್ರತಿಯೊಂದು ವಿಷಯವನ್ನೂ ತನ್ನ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತಾನೆ. ಅವನ ಹೃದಯ ಮಂದಿರದ ಕಿಟಕಿಗಳೆಲ್ಲವೂ ತೆರೆದವುಗಳಾಗಿರುತ್ತವೆ ಬೆಳಕು ಎಲ್ಲಿಂದ ಬಂದರೂ ಅವನು ಸ್ವೀಕರಿಸಲು ಸಿದ್ಧನಾಗಿರುತ್ತಾನೆ.

ಪುರೋಗಾಮಿ ಸಾಹಿತಿ ಶ್ರಮ ಜೀವಿ. ಕಂಡವರ ರಕ್ತ ಹೀರಿ ಹಿರಿಯನಾಗಿ ಬಲಿಷ್ಟವಾಗಿ ಮೆರೆಯಬೇಕೆಂಬ ಆಸೆ ಅವನಿಗಿಲ್ಲ. ಸಮಾಜದ ರಕ್ತೋಪಜೀವಿಗಳನ್ನು ಅವನು ಎಂದಿಗೂ ಸ್ನೇಹವರ್ಗಕ್ಕೆ ಸೇರಿಸಿಕೊಳ್ಳುವುದಿಲ್ಲ. ಪುರೋಗಾಮಿ ಸಾಹಿತಿ ಇಂದಿನ ಜಗತ್ತು ಈಗ ಇರುವುದಕ್ಕಿಂತಲೂ ಹೆಚ್ಚು ಸುಂದರವಾಗಬೇಕೆಂದು ಬಯಸುತ್ತಾನೆ. ಅದರ ಸಲುವಾಗಿ ಅವನು ಸುಧಾರಣೆ. ಪ್ರಗತಿ. ಮೌಢ್ಯ ನಿರಸನಗಳನ್ನು ಬಯಸುತ್ತಾನೆ. ಕಣವಿ. ಶಿವರುದ್ರಪ್ಪನವರನ್ನು ಪುರೋಗಾಮಿ ಸಾಹಿತಿಗಳೆಂದು ಗುರುತಿಸಿದಾಗ ಅವರು ಸಾಹಿತ್ಯದಲ್ಲಿ ಯಾವುದೇ ತರದ ವರ್ಗೀಕರಣವನ್ನು ಸರಿಯಲ್ಲವೆಂದು ಸಾರಿಬಿಟ್ಟರು. ಅವರ ಜಾಡಿನಲ್ಲೇ ನಡೆದ ಸಮನ್ವಯ ಕವಿ ಬಿ.ಎ.ಸನದಿಯವರು ನವೋದಯ-ನವ್ಯದ ಗುಣ-ಲಕ್ಷಣಗಳನ್ನು ತಮ್ಮ ಕಾವ್ಯಾಭಿವ್ಯಕ್ತಿಯಲ್ಲಿ ಮೈಗೂಡಿಸಿಕೊಂಡ ವಿಶಿಷ್ಟ ಕವಿ.

ಸನದಿಯವರು ತಮ್ಮ 'ಜನಕಾವ್ಯದೃಷ್ಟಿ'ಯಲ್ಲಿ ಹೇಳಿದಂತೆ ಅವರ ಕಾವ್ಯವು ರಮ್ಯ ಕಾವ್ಯದ ಹಿತಮಿತವಾದ. ಭಾವ ನಿಷ್ಠೆಯನ್ನೂ. ಸೌಂದರ್ಯದೃಷ್ಟಿಯನ್ನೂ. ನವ್ಯ ಕಾವ್ಯದ ವೈಚಾರಿಕತೆಯನ್ನೂ. ಸಾಮಾಜಿಕ ಕಳಕಳಿಯನ್ನೂ ಮೈಗೂಡಿಸಿಕೊಂಡು ಈವರೆಗೆ ಮುಖ

ಮುಚ್ಚಿಕೊಂಡೇ ಇರುವ ಅಜ್ಞಾತ ಜೀವ ಚೇತನಗಳ ಜೀವಂತ ಧ್ವನಿಯಾಗಿ ಮೊಳಗುತ್ತದೆ ಎಂಬ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ.

ಈ ಕವಿಯ ಮನೋಧರ್ಮ ಒಟ್ಟಾರೆ ಪುರೋಗಾಮಿ. ಪ್ರಗತಿಪರ ಸಂಪ್ರದಾಯಕ್ಕೆ ಆಧುನಿಕ ಪ್ರಜ್ಞೆಯ ವೈಚಾರಿಕತೆ, ಸಾಮಾಜಿಕ ರಾಜಕೀಯ ಸ್ಥಿತ್ಯಂತರಕ್ಕೆ ದನಿಗೂಡಿಸುವಂತಹದು. ಸಾಮಾಜಿಕ ಅನ್ಯಾಯ, ವೈಷಮ್ಯ, ಡಂಭಾಚಾರ, ಪ್ರಭಾವ ಪೂಜೆಗಳನ್ನು ಪ್ರತಿಭಟಿಸುವಂತೆಯೇ ಅವುಗಳ ಆಚೆಯ ಆಳದ ಮಾನವೀಯ ದೌರ್ಬಲ್ಯಗಳನ್ನೂ ಮರುಕದಿಂದ ನೋಡುವ ಹೃದಯವಂತಿಕೆ ಇವರ ಕಾವ್ಯದ್ದು.

ಒಮ್ಮೊಮ್ಮೆ ಆಧುನಿಕರೂ ನವ್ಯರಾಗುವುದುಂಟು ನವ್ಯರೂ ಆಧುನಿಕರಾಗುವುದುಂಟು. ಅದೇ ಕವಿ ಒಮ್ಮೆ ನವ್ಯ, ಒಮ್ಮೆ ಆಧುನಿಕನಾಗುವುದುಂಟು. ಹೀಗಾಗಿ ಕಾವ್ಯದಲ್ಲಿ ಚಮತ್ಕಾರದ ಸಂಕರ ಕಂಡುಬರುತ್ತದೆ. ಸನದಿಯವರು ಕಣವಿಯವರಂತೆಯೇ ಈ ಸಂಕರದ ಶಿಶುವಾಗಿ ಬೆಳೆದವರು. ಆಧುನಿಕ ಮನೋವೃತ್ತಿಯಲ್ಲಿ ಪ್ರಸಂಗಾನುಸಾರ ನವ್ಯದ ಪ್ರವೃತ್ತಿ ಇವರಿಗೆ ಲಭಿಸಿದೆ ಇಂಥವರಿಗೆ ನವ್ಯತೆಯ ಡಾ॥ ಗೋಕಾಕ ರೆನ್ನುವಂತೆ "ಯಾವುದೊಂದು ವಿಶಿಷ್ಟ ಜೀವನ ದೃಷ್ಟಿಗಳ ಕಲಾಸಿದ್ಧಿಯ ಒಂದು ಪ್ರಕಾರವಾಗಬಹುದು. ಈ ಪ್ರಕಾರದ ಕಲಾಸಿದ್ಧಿ ಕವಿ ಸನದಿಯವರಿಗೆ ನಿಶ್ಚಿತವಾಗಿಯೂ ಸಾಧಿಸಿದೆ. ಸನದಿಯವರು ಭಾವನೆಯ ಆವೇಶಕ್ಕೆ ಎಂದೂ ತೇಲಿ ಹೋಗುವುದಿಲ್ಲ. ತನ್ನ ತುಡಿತ-ಮಿಡಿತಗಳ ಮೇಲೆ ಹದವಾದ ಹಿಡಿತವಿಟ್ಟುಕೊಳ್ಳುತ್ತಾರೆ. ಅದಕ್ಕೆ ತಕ್ಕ Aestehitic distance ವರ್ಣ್ಯ ವಸುವಿನೊಂದಿಗೆ ಕಾಪಾಡಿಕೊಂಡಿರುತ್ತಾರೆ. ಅಂತೆಯೇ ಪ್ರಸಾದಗುಣ ಅವರ ಶೈಲಿಯ ಮುಖ್ಯ ಲಕ್ಷಣವೆನಿಸಿದೆ" ಎಂದಿದ್ದಾರೆ. ಸನದಿಯವರ ಪಂಥದ ಬಗ್ಗೆ ಹೇಳುತ್ತಾ, ಡಾ॥ ಗೌರೀಶ ಕಾಯ್ಕಿಣಿಯವರು "ಇವರು ನವ್ಯರೂ ಅಲ್ಲ; ಮಾ-ನವ್ಯರೂ ಅಲ್ಲ; ಸಾದಾ ಸಾಚಾ ಮಾನವ್ಯ ಕವಿ ಎಂದಿದ್ದು, ಕವಿ ಚೇತನಕ್ಕೆ ರಸದೇವತೆಯ ಆಶೀರ್ವಾದವು ಅನುಗ್ರಹವಾಗಿ ಪಾಲಿಸಿದೆ. ಸನದಿಯವರ ಕಾವ್ಯಕ್ಕೆ ಸಾಫಲ್ಯವೇ ಸಾಕ್ಷಿ! ಈ ಕಾವ್ಯ ಸಂಚಯ ದಾಹಿಯಂತೂ ಅಲ್ಲ; ನಿಶ್ಚಿತವಾಗಿಯೂ ನಿರಂತರ ಪ್ರವಾಹಿ; ನಿರಂತರ ಮೋದವಾಹಿ" ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಸನದಿಯವರು ಎಡಪಂಥೀಯ ಸಾಹಿತ್ಯ, ಸಾಹಿತ್ಯ ವಿಮರ್ಶೆ-ಸಿದ್ಧಾಂತಗಳನ್ನು ಓದಿ, ಅರಗಿಸಿಕೊಂಡಿದ್ದರು. "ಎಡಪಂಥೀಯರಲ್ಲ, ನವ್ಯತೆಯ ಗಾಳಿ ಬೀಸಿದಾಗಲೂ ಅವರು ಅದರ ಬೆನ್ನು ಹತ್ತಿದವರಲ್ಲ. ಇವರು ಅಂತರ್ಜಲದ ಒರತೆಯುಳ್ಳ ಕವಿ. ಆಕಾರದಂತೆ ಅವರ ಕಾವ್ಯಕ್ಕೆ ಆವಿಷ್ಕಾರವೂ ನೇರ, ಸರಳ. ಅವರು ಯಾವುದೇ ಸಾಹಿತ್ಯಕ ವಾದ-ವಿವಾದಗಳ ಸುಳಿಗಳಲ್ಲಿ ಸಿಕ್ಕಿಕೊಂಡವರಲ್ಲ. ದಲಿತ, ಬಂಡಾಯ, ನವ್ಯ, ಅಡಿಗೋತ್ತರ ಮುಂತಾದ ಇತರೇತರ ತಲೆ ಪಟ್ಟಿಗಳು ಅವರ ಟೊಪ್ಪಿಗೆಗೆ ಅಂಟಿಕೊಂಡಿಲ್ಲ" ಎನ್ನುವ ಡಾ॥ ಗೌರೀಶ ಕಾಯ್ಕಿಣಿಯವರು ಸನದಿಯವರ ಕಾವ್ಯವನ್ನು ಪೋಷಿಸುವ ಕಸುವು ಅವರ ಬಲಿಷ್ಠ ವಿವೇಕ ಮತ್ತು ಅದರ ಹಿಡಿತದಲ್ಲಿಯೆ ಏರಿಳಿತಗೊಳ್ಳುವ ಅವರ ಭಾವನಾಲಹರಿ, ಆರಂಭದ ನವ್ಯದಲ್ಲಿ ಒಂದು ಬಗೆಯ ನವೋದಯ ಮತ್ತೆ ಕಾಣಿಸಿಕೊಂಡಂತಿದೆ.

ಅದನ್ನು Neo Romantism ಎನ್ನಬಹುದು. ಇದನ್ನೇ ರಸಿಕರಂಗ ಡಾ॥ ಮುಗಳಿಯವರು 'ಪುನರ್ ನವೋದಯ'ವೆಂದು ಕರೆದಿದ್ದಾರೆ.

ಸನದಿಯವರ ಕಾವ್ಯದ ಲಕ್ಷಣವನ್ನು ಚರ್ಚಿಸುತ್ತಾ ಕವಿ ಸಹ ಸು.ರಂ. ಎಕ್ಕುಂಡಿಯವರು ಸನದಿಯವರನ್ನು 'ಪುನರ್ನವೋದಯ ಕವಿ' ಎಂದು ಕರೆದಿದ್ದಾರೆ. ಆದರೆ ಅಂಥ ಲಾವಣ್ಯ ಕಾವ್ಯ ಸನದಿಯವರದಲ್ಲ. ಇವರು ಪುರಾಣ ಪುರುಷರ ಸ್ವಪ್ನದರ್ಶನಗಳಲ್ಲಿ ಎಂದು ತೊಡಗಿದವರಲ್ಲ. ಆ ಅರ್ಥದಲ್ಲಿ ಇವರು ಪೂರ್ತಿ ಜನಪರ. ಇವರಲ್ಲಿ ಪೌರಾಣಿಕ ದಾರ್ಶನಿಕತೆ ಕಂಡುಬರುವುದಿಲ್ಲ.

"ವೇದ ಪುರಾಣ ಕುರಾಣ ಬಾಯಿಬಲ್ಲ ಬಾಯಿಗಳು
ತಡವರಿಸುತಿದೆ, ಅವಕೆ ಹೊಸದೇನು ಗೊತ್ತು?"

ಎಂದೊಂದು ಕವನದಲ್ಲಿ ಸನದಿ ಕಲವಳ ಪಟ್ಟದುಂಟು. ಇವರಲ್ಲಿ ಶರಣ ಸಾಹಿತ್ಯದ ಮೃದುವಾದ, ನಯವಾದ, ಆದರೂ ಅಷ್ಟೇ ಉತ್ಕಟವಾದ ಕಾವ್ಯ ಸಂಸ್ಕಾರ ಅಲ್ಲಲ್ಲಿ ಕಂಡು ಬರುತ್ತದೆ.

"ವಿಶಾಲ ಬಯಲಿಗೆ ಬಾನಿನ ಅಂಬು
ಅಂಚಿನಾಚೆಗೋ ಅನುಮನ
ಅಂಚಿನಾವರೆಗೂ ತಲುಪುವ ಹೆಜ್ಜೆಗೆ
ಕಾರ್ಮುಗಿಲುಗಳೇ ಸೋಪಾನ"

ಈ ರೀತಿಯ ಆಶಾವಾದದ ಅದಮ್ಯ ಶಕ್ತಿಯು ರಮ್ಯಕಾವ್ಯದ ಮಧುರ ಚಿತ್ರವಾಗಿದ್ದು ಸನದಿಯವರ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಇವರ ಕಾವ್ಯಾರಂಭದ "ಆಶಾಕಿರಣ" (೧೯೫೭)ದಲ್ಲಿ ಇವರ ಆಶಾವಾದವೇ ಪ್ರಧಾನ ಭೂಮಿಕೆಯಾಗಿದೆ. ಇಲ್ಲಿ ಗಮನಿಸಬೇಕಾದ ಮಾತೆಂದರೆ ಈ ಕವಿಗೆ ಮೌನವಾಗಿ ಹರಸಿದ ನವೋದಯ ಹಿರಿಯ ಕವಿಗಳ ಕಾವ್ಯದ ವಾಸ್ತವದ ಆದರ್ಶೀಕರಣವಾಗಿದ್ದು ಕೆಲವರು ಆದರ್ಶದ ವಾಸ್ತವೀಕರಣಕ್ಕೂ ಯತ್ನಿಸಿದ್ದುಂಟು. ಕವಿ ಸನದಿಯವರು ಒಂದು ರೀತಿ ಪುನರ್ನವೋದಯದ ಉಷಃ ಕಾಲದವರು. ಇವರ ಒಟ್ಟು ವಾಸ್ತವ-ಆದರ್ಶಗಳ ಒಂದು ಸಮ್ಮಿಶ್ರ ಸಂಧಿ ಪ್ರಕಾಶದಲ್ಲಿ, ನವೋದಯ ನವ್ಯಗಳ ಹೇತುಪೂರ್ಣ ಸಮನ್ವಯದ ಸೇತುವೆಯ ಮೇಲೆ ಇವರು ನಿಂತವರಲ್ಲ. ಅದರಾಚೆಗೆ ದಾಟಿ ನಡೆದವರು. ಕಣವಿ, ಕಾವ್ಯಾನಂದ, ಶಿವರುದ್ರಪ್ಪ ಮುಂತಾದವರ ಸಾಲಿಗೆ ಸೇರಿದವರು. ಆದರೂ ಇವರ ಒಳದನಿ ಧ್ವನಿಸುವ ಬಗೆ ಹೀಗಿದೆ.

"ನಾನಾರ ದಾಸ
ನಲ್ಲ ಎಂದು
ಎದೆಯುಬ್ಬಿಸಿ ಕಣ್ಣರಳಿಸಿ
ಮುಗಿಲ ಮಾರಿಯನೆ ನಿಟ್ಟಿಸುವ
ಮುನ್ನಡೆಯುತಿರುವಾಗ
ನನ್ನನಾರೋ ಹಿಡಿದು ಎಳೆ

ದಂತೆ ಭಾಸ!

ಇರಬಹುದೆ.

ನನ್ನ ನಂಬಿಕೆಯ ಪರಿ

ಹಾಸ?"

ಆದರೆ ಇದು ಪರಿಹಾರವಲ್ಲ, ಬರೀ ಭಾಸವೂ ಅಲ್ಲ. ಇದು ಈ 'ಹಳೆಯಮನೆಮಂದಿ'ಯ ಪ್ರಜ್ಞಾ ಸಂಸ್ಕಾರದಿಂದ ಚಿಟಸಿಕೊಂಡು ಬೆಳೆಯುವ ಕಾವ್ಯದ ಇತಿಹಾಸ.

ಕಾವ್ಯ ನವೋದಯ ಪಂಥದ್ದೇ ಆಗಲಿ, ನವ್ಯ ಪಂಥದ್ದೇ ಆಗಲಿ ಸಾಮಾನ್ಯ ವಾಚಕರಲ್ಲೂ ಜಾತಿಮತಗಳ ಎಲ್ಲೇ ಮೀರಿ ನಿಲ್ಲುವಂಥ ಕಳಕಳಿಯನ್ನು ಉದ್ಧೀಪನಗೊಳಿಸುವಂತಾದರೆ, ಮಾನವನ ಘನತೆ ಗೌರವಗಳನ್ನು ಪೋಷಿಸಿಕೊಂಡು ಹೋಗುವ ಪೂರಕ ಪ್ರೇರಣೆಯೊದಗಿಸುವಂತಿದ್ದರೆ ಅದೆಲ್ಲ ಮಾನವ್ಯ ಕಾವ್ಯವೇ.

ಯುಗಧರ್ಮದ ಪ್ರಭಾವವೆಂಬಂತೆ ನವ್ಯದ ಕೆಲವು ತಾಂತ್ರಿಕ ಚಾಳಿಗಳು ಸನದಿಯವರನ್ನು ಆವರಿಸಿಕೊಂಡಿದ್ದರೂ, ಅವರು ಸಂಯಮದಿಂದ, ಸ್ವಂತಿಕೆಯ ವಿವೇಚನೆಯಿಂದಲೇ ವರ್ತಿಸಿದ್ದಾರೆ. ರಮ್ಯ ಮತ್ತು ಪುನರ್ನವೋದಯ ಪ್ರವೃತ್ತಿಗಳಿಗೆ ಉಪಶಮವಾಗಿ ಬಂದ ಕಲಾತ್ಮಕ ಆಂದೋಲನ ಪಾಶ್ಚಾತ್ಯ ಪರಿಭಾಷೆಯಲ್ಲಿ Surrealism ಮೂಲತಃ ಇದು ಒಳಮನಸ್ಸಿನ ಪ್ರಜ್ಞೆಗೂ ಆಸೆಯ ಅಜಾಗೃತ ಸ್ತರಗಳ ಸಮಮನೋಲಹರಿಗಳನ್ನು ಪ್ರಕಟಿಸುವ ಒಂದು ವಿಧಾನ, ತಂತ್ರ. ಇದು ಪಾಶ್ಚಾತ್ಯ ಕಲಾ ಸಾಹಿತ್ಯ ಲೋಕದಲ್ಲಿ ಧಾರಾಳವಾಗಿ ಬಳಕೆಯಲ್ಲಿದೆ. ಸನದಿಯವರ ಕಾವ್ಯ ಅಂಥ ಉದ್ಭ್ರಾಂತ, ಸ್ವಪ್ನ ಪ್ರಪಂಚ ಅಥವಾ ಅನುಭಾವದ ನಿಗೂಢ ರಹಸ್ಯಮಯತೆಯಿಂದ ಗಾವುದ ದೂರವಿದೆಯೆಂದೇ ಹೇಳಬೇಕು.

ಸನದಿಯವರ ಆಯ್ದ ಕವನಗಳ ಸಂಗ್ರಹ ಸಪ್ತರಂಗಕ್ಕೆ ಹಿನ್ನುಡಿ ಬರೆದ 'ಶ್ರೀ.ಚಂದ್ರಕಾಂತ ಕುಸನೂರ' ರವರು ಸನದಿಯವರ ಕಾವ್ಯ ದೃಷ್ಟಿಯ ಕುರಿತು, "ಯಾವ ಗುಂಪಿನ ಗೊಡವೆಗೂ ಹೋಗದೆ ಯಾವ ತಾಂತ್ರಿಕ ಗುದುಮುರಿಗೂ ಇಳಿಯದೆ, ಒಂದು ಬಗೆಯ ನೇರವಾಗಿ ಕಾವ್ಯಮಾರ್ಗ ಹಿಡಿದು ಮುನ್ನಡೆದವರು. ಜೀವನದ ವಿವಿಧ ಅನುಭವಗಳನ್ನು ಕೇವಲ ಮಾನವೀಯ ಪಾತಳಿಯ ಮೇಲೆ ತೂಗಿ ನೋಡುತ್ತ ಬಂದವರು ಸದಾ ಜನ ಸಾಮಾನ್ಯರ ನಡುವೆಯೇ ಇರುವ ಕಾರಣ ಅವರ ದುಃಖ ದುಮ್ಮಾನಗಳಿಗೆ, ಆಸೆ-ಆಕಾಂಕ್ಷೆಗಳಿಗೆ ಪ್ರತಿಸ್ಪಂದಿಸುವ ಜನ ಕಾವ್ಯದ ದೃಷ್ಟಿಯನ್ನು ರೂಢಿಸಿಕೊಂಡವರು. ಕವಿಯ ಕಾವ್ಯದ 'ಆಶಾಕಿರಣ'ಬುವಿ ಬಾನಂಗಳಗಳನ್ನು ಸುತ್ತಿ 'ಸೀಮಾಂತರ'ಗೊಂಡ ಪರಿಯನ್ನು ಅವರ ಕಾವ್ಯದ ಒಲವು ನಿಲುವುಗಳನ್ನು ಅವರ ಅದಮ್ಯ ಜೀವನೋತ್ಸಾಹವನ್ನು ಗುರುತಿಸಬಹುದು"[೬] ಎಂದಿದ್ದಾರೆ. ಸನದಿಯವರು ತಮ್ಮ ಸಂದರ್ಶನವೊಂದರಲ್ಲಿ ತಮ್ಮ ಕಾವ್ಯ ಸ್ವರೂಪವನ್ನು ವಿವರಿಸುತ್ತ "ನಮಗೆ ಬೇಕಾದದ್ದು ಎಲ್ಲವನ್ನೂ

ಮೀರಿದ ವ್ಯಾಪಕವಾದ Humanism ನನಗೆ ಮುಖ್ಯವಾದದ್ದು. ಮನುಷ್ಯನ ಸಂವೇದನೆ ಹೊರತು ಯಾವ ಧರ್ಮಿಯ, ಜಾತಿಯ ಸಂವೇದನೆ ಅಲ್ಲ". ಎಂದು ಹೇಳಿದ್ದಾರೆ.

Tho Whole Universe is the Modern Poets Experience (Dr. S.P.Sengupta) ಇಡೀ ವಿಶ್ವವೇ ಆಧುನಿಕ ಕವಿಯ ಅನುಭವದ ಕಣಜ. ಸೌಂದರ್ಯದ ಆರಾಧನೆಯನ್ನು ಬದುಕಿನ ವಾಸ್ತವತೆಯ ಒಂದು ಅಂಗವನ್ನಾಗಿ ಪರಿಗಣಿಸುವ ಪ್ರಜ್ಞೆ. ಇದಕ್ಕೂ ಮೀರಿದ ಸತ್ಯಶೋಧನೆ ಸನದಿಯವರ ಮಹತ್ವದ ಕಾಳಜಿಯೂ ಆಗಿರುವುದರಿಂದ ಅವರು ಇಲ್ಲಿದ್ದರೂ ಎಲ್ಲಾ ಕಾಲಕ್ಕೂ ಸಲ್ಲುವವರಾಗಿದ್ದಾರೆ. ಸನದಿಯವರ ಕಾವ್ಯ ಕುರಿತಂತೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲದಿರುವುದರಿಂದ ಅವರ ಜೀವನ ಹಾಗೂ ಕೃತಿಗಳ ಕುರಿತಂತೆ ಸಂಕ್ಷಿಪ್ತ ವಿವರಣೆಯನ್ನು ನನ್ನ ಈ ಅಧ್ಯಯನದಲ್ಲಿ ನೀಡಲು ಇಚ್ಛಿಸಿರುತ್ತೇನೆ.

~*~*~*~*~*~

ಕೊನೆ ಟಿಪ್ಪಣಿಗಳು

೧	ಮುಕ್ತಚಿಂತನ	ಪ್ರೊ.ಎಸ್.ಆರ್. ನಾರಾಯಣ್‌ರಾವ್, ಸನದಿ ಸಾಂಸ್ಕೃತಿಕ ಪ್ರತಿಷ್ಠಾನ, ಬೆಳಗಾವಿ, ೨೦೦೬, ಪುಟ-೯೨
೨	ಅದೇ	ಪುಟ-೧೦೪
೩	ಅದೇ	ಪುಟ-೧೧೨
೪	ಮಾನವ್ಯ ಕವಿ	ಡಾ॥ ಗೌರೀಶ್ ಕಾಯ್ಕಿಣಿ, ಭವನಾ ಪ್ರಕಾಶನ, ಮುಂಬಯಿ, ೧೯೯೬, ಪುಟ-೭೪
೫	ಮಾನವ್ಯ ಕವಿ ಬಿ.ಎ ಸನದಿ	ಸಂಃ ಬಿ.ವಿ.ಗುಂಜೆಟ್ಟಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೨೦೦೨, ಪುಟ-೦೬
೬	ಶ್ರೀ ಬಿ.ಎ. ಸನದಿ. ಬದುಕು - ಬರಹ	ಡಾ॥ ಜಿ.ಎನ್. ಉಪಾಧ್ಯ ಕರ್ನಾಟಕ ಸಂಘ, ಮುಂಬಯಿ, ೨೦೦೫, ಪುಟ-೬೩

ಅಧ್ಯಾಯ:- ೩

ವ್ಯಷ್ಟಿ ಸಮಷ್ಟಿಯ ರಸಾನುಭವ

ಕವಿಯನ್ನು ಸಾಮಾನ್ಯ ಮನುಷ್ಯನಿಗಿಂತ ಭಿನ್ನವೆಂದೇ ಈ ಜಗತ್ತು ಮನಗಂಡಿದೆ. ಏಕೆಂದರೆ ಕವಿಯ ಆಕೃತಿಯ ಮೇಲು ನೋಟಕ್ಕೆ ಸಾಮಾನ್ಯನಂತೆ ಕಂಡರೂ ಆತನ ಒಳಗಡೆ ಒಂದು ವಿಶಿಷ್ಟ ವ್ಯಕ್ತಿತ್ವವು ಅಸಾಮಾನ್ಯವಾಗಿ ಬೆಳೆದಿರುತ್ತದೆ. ಹೊರ ವಲಯದಲ್ಲಿ ಅದೆಷ್ಟೋ ಸಾಂಸಾರಿಕ ಒತ್ತಡಗಳಿರಲಿ, ನೋವು ನಲಿವುಗಳ ಸರಮಾಲೆಗಳು ಆತನನ್ನು ಮುತ್ತಿರಲಿ, ಅವೆಲ್ಲವನ್ನೂ ಮೀರಿದ ಒಳ ಚಿಂತನೆಯಲ್ಲಿ ಆ ಸಾಮಾನ್ಯ ವ್ಯಕ್ತಿತ್ವದಿಂದಾಗಿ ಆತನು ಜಗತ್ತಿಗೆ ಹಿತವಾದುದನ್ನೇ ನೀಡಲು ಪ್ರಯತ್ನಿಸುತ್ತಾನೆ. ಆ ಪ್ರಯತ್ನದಲ್ಲಿ ಮೂಡಿದ ಆವೇಗಗಳು ಅಭಿವ್ಯಕ್ತಿಯನ್ನು ಪಡೆದು ಸಾಮಾನ್ಯನ ಬದುಕಿಗೆ ಚೈತನ್ಯವಾಗುವ ಕಲೆಯಾಗಿ ಪರಿಣಮಿಸುತ್ತವೆ. ಈ ರೀತಿ ಕವಿಯಾದವನು ಸಾಮಾನ್ಯ ಎಲ್ಲ ಅನುಭವಗಳನ್ನು ತನ್ನ ಅನುಭವದೊಂದಿಗೆ ಹೋಲಿಸಿಕೊಂಡು ಅನಂತರ ಅವೆಲ್ಲವನ್ನೂ ಮೇಳವಿಸಿಕೊಂಡು ಚಿಂತೆಯನ್ನು ಸರಿಸಿ ಚಿಂತಕನಾಗಿ, ಆ ಅನುಭವಗಳಲ್ಲಿ ಸಾಮಾನ್ಯ ಧರ್ಮವನ್ನು ಒಟ್ಟೈಸಿ ಪಂಚಾಮೃತಗೊಳಿಸಿ ಅವರವರ ಭಾವಕ್ಕೆ ಅವರವರ ರೂಪದಲ್ಲಿ ಆತ್ಮಾನಂದವನ್ನುಂಟು ಮಾಡುವ ಅಭಿವ್ಯಕ್ತಿಯನ್ನು ನೀಡುತ್ತಾನೆ. ಇಂತಹ ವಿಶಿಷ್ಟವಾದ ಅನುಭವವನ್ನು ಎಂದರೆ, ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಕಾಯಕವನ್ನು ಮಾಡುವವನೇ ಸ್ವದರ್ಶಿಕೆಯನ್ನು ರೇಖೆ ಮತ್ತು ಬಣ್ಣಗಳಲ್ಲಿ ತುಂಬಿ ಬಿಡುವವನು ಚಿತ್ರಕಾರ, ರಾಗಗಳಿಂದ ದೀಪಗೊಳಿಸುವವನು ಸಂಗೀತಕಾರ, ಕಲ್ಲಿನಲ್ಲಿ ಕಾವ್ಯವನ್ನಾಗಿ ಅರಳಿಸುವವನು ಶಿಲ್ಪಿ, ಅಭಿನಯದಲ್ಲಿ ಅರ್ಥವಾಗಿಸುವವನು ನೃತ್ಯಕಾರ–ನಟ, ಶಬ್ದಗಳಲ್ಲಿ ಅರ್ಥವಾಗಿಸುವವ ಕವಿ (ಸಾಹಿತಿ) – ಇವರೆಲ್ಲ ಕಲೆಗಾರರು. ಇವರು ನೀಡಿದ ವೈವಿಧ್ಯಮಯ ಅಭಿವ್ಯಕ್ತಿಯೇ ಚಿತ್ರಕಲೆ, ಸಂಗೀತ ಕಲೆ, ಶಿಲ್ಪಕಲೆ, ನೃತ್ಯಕಲೆ – ನಾಟಕ ಕಲೆ ಮತ್ತು ಸಾಹಿತ್ಯ ಕಲೆ ಎಂಬುವುದಾಗಿ ರೂಪ ತಳೆಯುತ್ತದೆ. ಇವೆಲ್ಲ ಸಾಮಾನ್ಯ ಬದುಕಿನ ವೈವಿಧ್ಯತೆಗಳನ್ನು ತಲಸ್ಪರ್ಶ ಮಾಡಿಸುವ ಸ್ವದರ್ಶಿಕೆಗಳೇ ಹೌದು.[೧]

ಈ ದೃಷ್ಟಿಯಲ್ಲಿ ಕವಿ ಬಾಬಾಸಾಹೇಬ ಅಹಮ್ಮದ್‌ಸಾಹೇಬ ಸನದಿಯವರ ಕಾವ್ಯ ಸೃಷ್ಟಿಯ ಕೆಲವು ಪದರುಗಳನ್ನಾದರೂ ಬಿಚ್ಚಿ ನೋಡುವುದು ಒಂದು ಯೋಗವೆಂದೇ ಭಾವಿಸುತ್ತೇನೆ. ಏಕೆಂದರೆ ಕವಿ ಸನದಿಯವರೂ ಕೂಡ ಸಾಮಾನ್ಯನಾಗಿಯೇ ಬದುಕಿ, ಸಹಜ ನಿರ್ಮಲ ಬದುಕಿನ ಒಳ ಅಲೆಗಳ ಒಳಗೆ ತಮ್ಮ ಕಾವ್ಯ ಸೃಷ್ಟಿಯ ಮೂಲಕ ಸಾಮಾನ್ಯರನ್ನೂ ತಮ್ಮೊಡನೆ ಕರೆದುಕೊಂಡು ಹೋಗಿ ಆ ತಲಸ್ಪರ್ಶದಲ್ಲಿ ಅವರನ್ನು ಅಂತರಂಗ ಸಂಸ್ಪರ್ಶದ ಚಿಲುಮೆಯಾಗಿಸುತ್ತಾರೆ. ಅಲ್ಲಿಂದ ಮುಂದೆ ಅವರನ್ನೆಲ್ಲ ಮಾನವರಾಗಿಯೇ ಬದುಕುವಂತೆ ಮಾಡಲು ಅವರವರ ಸ್ವದರ್ಶಿಕೆಗೆ ಬೆಳಗಾಗುತ್ತಾರೆ. ಹೀಗಾಗಲು ಈ ಕವಿ ತಮ್ಮ ಬಾಳನುದ್ದಕ್ಕೂ ತನ್ನಂತೆ ಪರರನ್ನು ಕಂಡು ಹಿಗ್ಗಿದಾರೆ. ಅಂತೆಯೇ ತಮ್ಮೆಲ್ಲ ನೋವು ನಲಿವುಗಳನ್ನು ಲೋಕಾನುಭವದ ಓರೆಗಲ್ಲಿದೆ ತಿಕ್ಕಿ ಮಿಸುನಿಯಾಗಿ, ಕಾವ್ಯದ

ಹೊಳೆಯಾಗಿ ಹರಿಸಿ ಬದುಕಿನ ಕಾವ್ಯಕ್ಕೆ ಈ ಕವಿ ಹೊಳಪು ನೀಡಿದ್ದಾರೆ. ಆ ಹೊಳಪೇ, ಬದುಕನ್ನು ಕಡೆದು ತಂದ ನವನೀತಿಯ ನವನೀತ, ಸಮದರ್ಶಿತ್ವದ 'ಮಾನವನೀತ'.

ಈ ಮಾತುಗಳ ಗಟ್ಟಿಕಲ್ಲಿನ ಸಾಣೆಗೆ ಸನದಿ ಕಾವ್ಯವನ್ನು ಉಜ್ಜಿದಂತೆಲ್ಲ ಸಾಮಾನ್ಯ ಲೋಕದ ಮಾತುಗಳೆಲ್ಲ ಕಲಾತ್ಮಕವಾದ ಕಾವ್ಯವಾಗಿ ನಲೆ ನಿಲ್ಲುತ್ತವೆ. ವ್ಯಷ್ಟಿಯ ಅನುಭವಗಳು ವಿಚಾರಗಳಾಗಿ ಸಮಷ್ಟಿಗೆ ಸಮರ್ಪಣವಾಗುತ್ತವೆ. ಹೀಗೆ ಬಾಬಾಸಾಹೇಬರ ಅನುಭವಗಳು ಸಮಷ್ಟಿಯ ವಿಚಾರಗಳಾದಾಗ ಅವು ಕವಿ ಸನದಿಯ ಕವಿತಾಗರಿಗಳಾಗುತ್ತವೆ. ಅವುಗಳನ್ನು ಸಂಕಲಿಸಿ ಸಿವುಡು ಕಟ್ಟಿದಾಗ ಮಾನವತೆಯ ಸುಂದರ ಬದುಕಿಗೆ ಬುನಾದಿಯಾಗುತ್ತವೆ. ಸಮಷ್ಟಿಯ ಅರಿವಿನ ಗಟ್ಟಿ ತಳಹದಿಯ ವ್ಯಷ್ಟಿ, ತನಗೆ ತಾನೇ ಗುರುವಿನ ಅರಿವಾಗಿ, ಆಲಯವು ಬಯಲೊಳಗೊ, ಬಯಲು ಆಲಯದೊಳಗೊ; ವ್ಯಷ್ಟಿ ಸಮಷ್ಟಿಯೊ ಸಮಷ್ಟಿ ವ್ಯಷ್ಟಿಯೊ – ಎಂಬ ಅಲೆಗಳನ್ನು ದಾಟಿ ನಿರಾತಂಕವಾದ ನಿರವಂಬಲಿನ ಬ್ರಹ್ಮಾನಂದವನ್ನು ಪಡೆಯುತ್ತಾನೆ. ಆ ಮೂಲಕ ಬ್ರಹ್ಮನಿಗಿಂತಲೂ ಮಿಗಿಲಾದ ಸುಂದರ ಸೃಷ್ಟಿಯ ದೃಷ್ಟಾಂತನಾಗುತ್ತಾನೆ. ಅವನಿಗಿಂತಲೂ ನಿರ್ಲಿಪ್ತತೆ ಪಡೆದು ಸಮಷ್ಟಿಯೇ ತಾನಾಗಿರುತ್ತಾನೆ.

ಐವತ್ತರ ದಶಕದಿಂದ ತಮ್ಮ ಬದುಕಿನ ಕ್ಷಿತಿಜನ ವಿಸ್ತಾರದಲ್ಲಿ ಅನಂತವಾದ ಸಾಮಾನ್ಯ ಅನುಭವಗಳ ಮಧ್ಯೆಯು ತಮ್ಮ ವೈಶಿಷ್ಟ್ಯವನ್ನು ಸಾಧುಗೊಳಿಸಿ ನಡೆದಾಡಿ, ನಂಜುಂಡರಾಗಿ ನಲಿದಾಡಿ ಹಾಡಿದ್ದಾರೆ, ಬರೆದಿದ್ದಾರೆ, ಬರೆಸಿದ್ದಾರೆ. ಇವರ ಅಭಿವ್ಯಕ್ತಿಯು ಹೆಚ್ಚಾಗಿ ಕಾವ್ಯದಲ್ಲಿ ವಿಶಿಷ್ಟವಾದ ಪರಿಣಾಮವನ್ನು ಬೀರಿ, ಅಲೌಕಿಕವಾದ ಅನುಭವವನ್ನು ಆಪ್ಯಾಯಮಾನಗೊಳಿಸುತ್ತದೆ. ನಾಟಕ, ಪ್ರಬಂಧ, ವಿಮರ್ಶೆ, ಕತೆ, ವ್ಯಕ್ತಿ ಚಿತ್ರಣ – ಎಲ್ಲ ಪ್ರಕಾರಗಳಲ್ಲಿಯೂ ಇವರು ಕೈಯಾಡಿಸಿದ್ದರೂ ಓದುಗನು ಮಾತ್ರ ಬಹಳ ಹೊತ್ತಿನವರೆಗೆ ಇವರ ಕಾವ್ಯದಾರಾಮದಲ್ಲಿ ಕಳೆದು ಹೋಗಿ ಬಿಡುತ್ತಾನೆ. ಬಹಳ ಹೊತ್ತಿನ ಅನಂತರ ಆತ ಸಿಕ್ಕರೂ, ಆತನ ಜೀವನದಲ್ಲಿ ಒಂದು ಬಗೆಯ ಕಂಪಿನ ತೇಜಸ್ಸು ಅದ್ವೈತವಾಗಿ ಹೊಸ ಮನುಷ್ಯನಾಗಿ ಆ ಸನದಿಯೊಡನೆ ಕರ್ಣ ಕವಚವಾಗಿ ಕಾಣುತ್ತಾನೆ. ಇದಕ್ಕೆ ಕಾರಣ ಸನದಿಯವರು ಸ್ವಭಾವತಃ ಭಾವುಕರು ಮತ್ತು ಭಾವುಕ ಕವಿಗಳು. ಸಮಷ್ಟಿಗಾಗಿ ಚಿಂತಿಸುವ ಚಿಂತನಾ ಶೀಲ ಕವಿಗಳು. ಅಂತೆಯೇ ಅವರ ಕಾವ್ಯಾರಾಮಕ್ಕೆ ಬಂದ ಯಾವುದೇ ಓದುಗ ಅಲ್ಲಿಯೇ ಅಭೇದವಾದ ಅಂಶವಾಗಿಯೇ ಬಿಡುತ್ತಾನೆ. ಹೀಗಾಗಿ ಕಾವ್ಯದಲ್ಲಿ ಸನದಿ ತಾವು ಸುಪ್ರಮಾನಸವಾಗುವುದರ ಜೊತೆಗೆ, ಓದುಗರನ್ನೂ ಆ ಎತ್ತರಕ್ಕೆ ಒಯ್ದು, ಆ ಆಳಕ್ಕೂ ಅವರನ್ನು ಭದ್ರಗೊಳಿಸುತ್ತಾರೆಂಬುದು ಸ್ಪಷ್ಟವಾಗಿ ಗೋಚರವಾಗುತ್ತಿದೆ.[೨]

ಇಂಥ ಅನುಭವವು ಅವರ 'ಆಶಾಕಿರಣ'ದಿಂದ ಹಿಡಿದು 'ಸಂಭವ'ದ ವರೆಗಿನ ಎಲ್ಲ ಹದಿಮೂರು ಕವನ ಸಂಕಲನಗಳಲ್ಲಿಯೂ ಆಗದೇ ಇರದು. ಮುಂದಿನ ಅವರ ಕವನ ಸಂಕಲನಗಳಲ್ಲಿಯೂ ಇದೇ ಅನುಭವವು ಕೆನೆಗಟ್ಟಿಯೇ ಇರುತ್ತದೆ. ಅಂತಹ ಕೆಲವು ಚಿರನೂತನ

ಕವಿತಾ ಪಾದಗಳನ್ನಾಯ್ದು. ಅವುಗಳನ್ನು ಬಿಡಿಸಿ ನೋಡಿದಾಗ ಈ ವಿಶ್ಲೇಷಣೆಗೆ ಇನ್ನೂ ಹೆಚ್ಚಿನ ಮಹತ್ವ ಬರುತ್ತದೆ.

"ಚೆಲುವಿನಲಿ ಚೇತನವರಿಸಿ ನವರಸ ಹರಿಸಿ
ಕಲ್ಪನೆಯ ಛತ್ರದಲಿ ಚಿತ್ರಗಳ ಬರೆದಿಟ್ಟು
ಆನಮನದ ಜಡತನಕೆ ಹೊಸತು ಚಾಲನೆ ಕೊಟ್ಟು
ಅಶಿವಮಯ ಭಾವನೆಯ ಶಿವದ ಕಾಲ್ಕೆಳಗಿರಿಸಿ
ನವಲೋಕ ನಿರ್ಮಿಸುವ ಧೀರನಿವ ಕಲೆಗಾರ"

ಎಂಬ 'ಆಶಾಕಿರಣ' ಸಂಕಲನದಲ್ಲಿಯ ಪಾದಗಳು ನಮ್ಮನ್ನು ಸೆರೆ ಹಿಡಿದಾಗ, ಸಾಮಾನ್ಯವಾಗಿ ಪೃಥ್ವಿಯ ಮೇಲಿನ ಪ್ರತಿಯೊಂದು ವಸ್ತು-ಜಡಚೇತನವಲ್ಲ, ಚೆಲುವಿನ ಆವಿರ್ಭಾವ! ಎಂಬುದು ಮನದಟ್ಟಾಗದೇ ಇರದು. ಇದು ಸಾಮಾನ್ಯನ ಒಳಂಗಳದ ಭಾವ. ಅದನ್ನು ಕವಿ ಸನದಿ ಸಮೀಕರಿಸಿ ಆ ಸಾಮಾನ್ಯ ಭಾವವನ್ನೆಲ್ಲ ಅಸಾಮಾನ್ಯ ಕಲೆಯಾಗಿಸಿ ಹಾಡಿದ್ದಾರೆ. ಮುಂದೆ ಮತ್ತೊಂದು ಕಡೆ, ಕಣ್ಣು ಮುಚ್ಚಿದ ಮೇಲೆ ಇರುವ ಬದುಕನ್ನು ಕಂಡು ಬಂದು ಯಾರಾದರೂ ಹೇಳಿದ್ದಾರೆಯೇ? ಎಂಬ ಸಹಜ ಭಾವವು ಮಿಡಿಯುವುದು ಹೀಗಿದೆ:

"ನಾ ಸತ್ತ ಮೇಲೇನು ಸೊಗ ದೊರೆವುದಿದೆ ಕಾಣೆ
ಆ ನಾಳನೆಡೆ ಬಾಳನೆಡೆ ನನ್ನ ಮನವಿಲ್ಲ
ಅಂಥ ನಾಳೆಯನೆಂದು ನಾ ನಂಬಿ ಕುಳಿತಿಲ್ಲ:
ನಾನು ದುಡಿಯುವೆನಿಂದೆ: ಬಂದ ಫಲವೇ ಬರಲಿ
ನಾಳನಾ ಸೊಗದಾಸೆ. ನಾಳೆ ದುಡಿವರಿಗಿರಲಿ"

ಎಂಬ ವಾಸ್ತವವಾದದಲ್ಲಿ ಸೊಗಸನ್ನು ಕಾಣುವ ಬದುಕಿನ ಕಲೆಗೆ ಒತ್ತು ಕೊಟ್ಟಿದ್ದಾರೆ. ಕಾಣದ ನಾಳೆಯ ಬಗ್ಗೆ ಒಣ ತರ್ಕಕ್ಕೆ ಇಳಿದು ಸಮಯ ಪೋಲು ಮಾಡುವುದು ತರವಲ್ಲವೆಂಬ ಪ್ರಜ್ಞೆ ಜೀವಂತವಾಗಿದೆ ಎಂಬುದನ್ನು ನಾವಿಲ್ಲಿ ಕಾಣುತ್ತೇವೆ. ವರ್ತಮಾನವನ್ನು ಕಸಿ ಮಾಡಿಕೊಳ್ಳುವ ನಿತ್ಯವಾದ ಧ್ವನಿಸತ್ಯಕ್ಕೆ ಈ ಕವಿತೆ ಇಂಬು ಕೊಟ್ಟಿದೆ.

"ಬೇಲಿಯರಿಯದ ಮುಗಿಲ ಮಂಟಪದಡಿಗೆ
ಮನೆಮನೆಗೆ ಬೇಲಿ
ಮನಮನಕೆ ಬೇಲಿ"

ಎಂದು ಖಾರದ ಮಾರ್ಮಿಕತೆಯಲ್ಲಿ ತನ್ನ ಒಳಮಿಡಿತವನ್ನು ಹೊರಗೆ ಹಾಡಾಗಿಸಿ 'ತುಂಬಿದಾಭಾಸಕ್ಕೆ ಖಾಲಿ ರಖವಾಲಿ' ಎಂದು ಹುಬ್ಬೇರಿಸುತ್ತಲೇ ಮಾರ್ಮಿಕವಾದ ನಗೆ ಬಿದಿಗೆಯನ್ನು ಮನಸ್ಸಿನ ಆಗಸದಲ್ಲಿ ಚೆಲ್ಲುತ್ತಾನೆ. ಆಗ ಆಗಸದಲ್ಲಿ ಅದೇ ತುಂಬಿ ತುಳುಕಿದಾದ ಮೈಜುಮ್ಮೆನ್ನುತ್ತದೆ. ಮನಸ್ಸು ವಿಸ್ಮಯದಾಚೆ ಜಿಗಿಯಲು ಪ್ರಯತ್ನಿಸುತ್ತದೆ. ಬೇಲಿಯೇ ಇಲ್ಲದ, ಬೇಲಿಯನ್ನು ಹಾಕಿದರೂ

ಅದು ಆಭಾಸವಾಗಿ ಕಾಣುವಂತಹ ಕೆಲವು ಆವಾಂತರಗಳನ್ನು ಇಲ್ಲಿ ಕನ್ನಡಿಸಿದ್ದು ಅಭಿನಂದನೀಯ. ಏಕೆಂದರೆ ಈ ಕನ್ನಡಿಯಲ್ಲಿ, ಕೆಲವರಾದರೂ ತಮ್ಮ ಮುಖಗಳಾಗಿ 'ಇಣಿಕಿ ನೋಡಲು' ಸಾಧ್ಯ. ಹಾಗಾದಾಗ ಅಂತವರ ಅಂತರ್ಮುಖಕ್ಕೆ ಈ ಕವನ ಸಾಕ್ಷಿಯಾಗಿದೆ.

"ನೂರು ವರುಷ ನೋವನುಂಡು
ನೋವಿನಲ್ಲೆ ಮುಳುಗಿ ಎದ್ದು
ಬದುಕುವರಿಗೆ ರುಚಿಯೇ ಏನೋ ನಿತ್ಯ ವೇದನೆ!
ಅದೇ ದೇವರ ವರ-ಪ್ರಸಾದವೆಂಬ ಭಾವನೆ!!"

ಎಂಬಂಥ ಸಿದ್ಧಾಂತ ಹೊಳೆದಾಗ ನಮ್ಮ 'ನಮ್ಮ ಕಾಲನ ಇತಿಹಾಸಕ್ಕೆ ನಾವೇ ಮುನ್ನುಡಿ' ಯಾಗಬೇಕಾಗುತ್ತದೆ. ಆಗ ನಮಗೆ ತಿಳಿಯದಂತೆ ಒಳ ಮನದಲ್ಲಿ ಒಂಭತ್ತರ ಮಗ್ಗಿ ಅರಳಿ ಶೂನ್ಯ ಸಂಪಾದನೆಯತ್ತ ಚಿತ್ತ ಹೊರಳಿ ಸರಿಯಾದ ಉತ್ತರ ಕಂಡಾಗ, 'ಬದುಕಿನ ಬೇರು, ಭೂಮಿಯ ಸತ್ವ ನಂಬುತ್ತದೆ; ಗಾಳಿ ಬಾಂದಳದೊಡಲು ತುಂಬುತ್ತದೆ.'

ಇಂಥ ಅನುಭವವಾದಾಗಲೂ ಈ ನೆಲದಲ್ಲಿಯ ಬೇರಿಲ್ಲದ ಗಾಳಿಯೇ ಇಲ್ಲದ ಆಭಾಸದ ಬರಲು ತುಟಿಗಳಿಂದ ಮೂಡಿದ ಒಣ ನಗೆಗಳ ಬಗ್ಗೆ ಕನಿಕರವೂ ಒಡಮೂಡಿದ್ದು ಹೀಗಿದೆ:

"ಚಿಕ್ಕೆಗಳ ಮಂಡಲದಿ
ಮೆರೆವ ಚಂದಪ್ಪನಿಗೆ
ಸ್ವಂತ ಪ್ರಭೆಯಿದೆಯೆಂದು
ಸೂರ್ಯನೆದುರಿಗೆ
ಸಾಕ್ಷಿಯಿತ್ತು ಬರಲೆ?"

ಎಂಬ ಪ್ರಶ್ನೆಯು ಕಾಣಿಸಿಕೊಂಡಾಗ, 'ಸಾವು ಕಾಣದ ಮನೆಯ ಸಾಸಿವೆಯ ಕಣಜಕ್ಕೆ' ಸುರಂಗ ಹೊಡೆಯುವ ಅರ್ಥಾತ್ ಗಾಳಿಗೆ ಗುದ್ದಿ ಮೈ ನೋಯಿಸಿಕೊಳ್ಳುವ ಕಾಯಕಕ್ಕೆ ವಿದಾಯ ಹೇಳಬೇಕೆನ್ನಿಸುವ ನಿರ್ಧಾರ ಬರುವುದು ಕಾವ್ಯಯೋಗದ ದಟ್ಟ ಪರಿಣಾಮವಾಗಿ ಬಿಡುತ್ತದೆ. ಆಗ ನಾಡಿಗಿಂತಲೂ ನುಡಿಯು; ನುಡಿಗಿಂತಲೂ ನಡೆಯು ಹಿರಿದಾಗಿರೆ; ಹೃದಯ ಹೃದಯದ ಅರಿವೂ, ನೀರು ಗೊಬ್ಬರವಾಗಿ ನಡೆಗೆ ಬಲವಾಗಿ, ಮನುಜ ಜೀವೊನ್ನತಿಯ ಹೊಸ ಹೊಸತು ಕ್ಷಿತಿಜ ವಿಸ್ತಾರವಾಗುತ್ತ ಸಾಗುತ್ತದೆ.

ಹೀಗೆ ಕ್ಷಿತಿಜ ವಿಸ್ತಾರವಾದಂತೆ, ಪ್ರತಿಯೊಂದು ವಸ್ತುವಿನ ಮೌಲ್ಯವು ವಿರಾಟವಾಗುತ್ತದೆ. ಆಗ ಆತ-ವ್ಯಷ್ಟಿ-ಕವಿ ಅಲ್ಲಿ ಧ್ರುವಬಿಂದುವಾಗಿ, ತನ್ನ ಸುತ್ತೆಲ್ಲ ಬಳಸಿದ ವರ್ತುಲಗಳನ್ನು ಜಾಲಾಡಿಸಿ ನೆಲದ ನೆಲೆಯನ್ನು ಬಿಡಿಸಿ ಸ್ಫಟಿಕಗೊಳಿಸಿದಾಗ ಈ ಅಂಶ ಕಂಡು ಬರುತ್ತದೆ.

"ಇಳೆಯೆದೆಯ ಹಸಿರುಸಿರೆ ಬೆಳೆಯಾಗಿ ತಲೆದೂಗೆ
ಮಣ್ಣು ಪ್ರಕೃತಿಯ ಶ್ರುತಿಯ ಅನುವಾದವು;

ಕಾರ್ಮೋಡಗಳ ಕಂಡು ಕುಣಿಯೆ ಬಣ್ಣದ ಸೋಗೆ

ಅರಳಿದಂತೆರೆ ಮಣ್ಣ ಸಂಮೋದವು"

ಎಂಬ ಸತ್ಯ ಅನುಭೋಗಕ್ಕೆ ಬರುತ್ತದೆ. ಆಗ ಆ ಮಣ್ಣೇ ಸೃಷ್ಟಿಯ ಆದಿ-ಅಂತರಂಗ ಎಂಬುದು ಖಚಿತವಾಗುತ್ತದೆ. ಅದರಿಂದಾಗಿ, 'ವಿಶ್ವ ಸಮ್ಮುಖದಲ್ಲಿ ವಿವಿಧ ಮುಖ ಹಿಂದೆ ಸುಖ' ಎಂಬ ಅಭಿಜ್ಞಾನವು ಮಿಂಚಿ ವ್ಯಷ್ಟಿ - ಸಮಷ್ಟಿಯ ರಸಾನುಭವದಲ್ಲಿ ಸಾಪೇಕ್ಷವು ಸಮೀಕರಣವಾಗುತ್ತದೆ. ಆಗ ವ್ಯಕ್ತಿಯ ಅಭಿವ್ಯಕ್ತಿಯು ಲೋಕದ ಧ್ವನಿಯಾಗಿ – ಆ ಅದು ಎಲ್ಲ ಲೋಕಕ್ಕೆ ಸಮರ್ಪಿತವಾಗಿ, ಕರೆಯ ನೀರನು ಕೆರೆಗೆ ಚೆಲ್ಲಿ, ಆವಿಯೋ-ಕಡಲೋ ಆಗಿ ಚಿರಂತನ ಕಲೆಯಾಗಿ ಅರಳಿ, ಆನಂದವನ್ನು ಒದಗಿಸಿ, ಸಚ್ಚಿದಾನಂದದ ಏಕೈಕ ಹೊಗರನ್ನಿತ್ತು ಎಲ್ಲವನ್ನೂ ಮೈಗೂಡಿಸಿಕೊಂಡ ಆತನು ಎಲ್ಲಡಕವಾಗುತ್ತಾನೆ. ಇದು ಸನದಿ ಕಾವ್ಯ ಸೋಪಾನ: ಕಾವ್ಯೋಪಾಸನ.[೩]

ಕವಿ ಸನದಿ ತನ್ನ ಬದುಕಿನಲ್ಲಿ ಆ ಉದ್ದಕ್ಕೂ ಈ ಉದ್ದಕ್ಕೂ ಆ ಎತ್ತರಕ್ಕೂ ಈ ಆಳಕ್ಕೂ ಅತ್ತದ್ದು ನಕ್ಕದ್ದು, ಕಂಡದ್ದು ಕಾಡಿದ್ದು ಕೇಳಿದ್ದು, ಕೂಡಿದ್ದು ಬಿಟ್ಟಿದ್ದು, ಓದಿದ್ದು ಬರೆದದ್ದು – ಎಲ್ಲ ಎಲ್ಲವನ್ನೂ ತನ್ನದಾಗಿಸಿಕೊಂಡು ತನ್ನ ಹೆಸರನ್ನು ಬರೆದು ಅನಂತರ ಆ ಎಲ್ಲಾ ಸಾಹಿತ್ಯದ ಎಲ್ಲದರ ಮೈ ಬಣ್ಣ ಉಸಿರು, ಒಳ ಉಸಿರು, ಹೊರ ಥಳಕು, ಒಳ ಬೆಳಗು ಎಲ್ಲ ಎಲ್ಲ ಒಂದೇ ಒಂದು – ಆ ಎಲ್ಲ ಸಮಷ್ಟಿ ಸೂರ್ಯನ ಬೆಳಕಿನ ಮುಂದೆ ಈ ನೆಲದಂಚಿನ ಕಡಲಲ್ಲಿ ಸಮರ್ಪಣವಾಗುವ ರೀತಿ ಕಣ್ಣಿಗೆ ಕಾಣುವ ಸೃಷ್ಟಿಯ ಈ ಕಲೆಗಿಂತಲೂ ವಿಸ್ಮಯಕಾರಿ ಹಾಗೂ ನಿರಂತರ ವಿಸ್ಫುಲಿಂಗ. ಈ ವಿಸ್ಫುಲಿಂಗದ ಮೆಲುಕು "ಮುಂಬೈ ಮಳೆ"ಯಲ್ಲೂ ಕಾಣುತ್ತೇವೆ.

"ಇರುವ ಸೂರ್ಯನಿಗಿರುವ

ಬೆಳಕಿಗೊಂದೇ ಭಾಷೆ:

ನಿಮಗೆ ಕಾಣಲಿ ಬಿಡಲಿ

ನಾನು ಇದ್ದೇ ಇರುವೆ"

ಹೀಗೆಂದು ಬೆಳಕಾಗಿ, ಆ ಮುಖಾಂತರ ಸನದಿ ವ್ಯಕ್ತಿತ್ವದ ಕಾವು ಸಹೃದಯನಿಗೆ ತಟ್ಟುತ್ತದೆ. ಆತನ ವ್ಯಕ್ತಿತ್ವವು ಸಮಾಜದ ಒಟ್ಟಂದದ ವ್ಯಕ್ತಿತ್ವವಾಗಿ ಕಾಯ ಅಳಿದರೂ ಕಾವು ಉಳಿದೇ ಇರುತ್ತದೆ. ಸಪ್ತಸ್ವರಗಳ ಒಟ್ಟಂದದ ಧ್ವನಿಯು ಸಾಕ್ಷಾತ್ತಾಗಿ ಸಪ್ತವರ್ಣದ ಒಟ್ಟಂದದ ಬೆಳಕಾಗಿ, ಮಾನವ ಮೌಲ್ಯಗಳನ್ನು ಸನದಿಯ ಕಾವ್ಯ ಸಾರ್ವಕಾಲಿಕ ಕ್ರಿಯಾಶೀಲ ಜಾಗೃತಿಗೆ ದೀಪರಾಗವಾಗಿಯೂ ಆನಂದ ಭೈರವಿಯಾಗಿಯೂ ಶ್ರೀಸಾಮಾನ್ಯನ ಬದುಕಿಗೆ ಚೈತನ್ಯದಾಯಿಯಾಗಿ ಉಳಿದೇ ಇರುತ್ತದೆಂಬುದು ನನ್ನ ಅನಿಸಿಕೆಯಾಗಿದೆ.

~*~*~*~*~

ಕೊನೆ ಟಿಪ್ಪಣಿಗಳು

೧ ತಪನಿಂದ ತಾವರೆ	ಸಂಃ ಡಾ. ಬಸವರಾಜ ಸಾದರ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ೨೦೦೨. ಪುಟ-೧೯೩.
೨ ಸೋಪಾನ	ಸಂಃ ಡಾ.ತಾಳ್ತಜೆ ವಸಂತಕುಮಾರ್ ಮತ್ತು ಕೆ.ಚಂದ್ರಮೌಳಿ. ಸುವರ್ಣಗಿರಿ ಪ್ರಕಾಶನ. ಮುಂಬಯಿ. ೧೯೯೭. ಪುಟ-೧೦೭
೩ ಅದೇ	ಪುಟ-೧೧೩

ಅಧ್ಯಾಯ:- ೪

ಸನದಿ ಕಾವ್ಯ ಸಂವೇದನೆಗಳು

ಸನದಿಯವರ ಕಾವ್ಯದ ಉದ್ದಕ್ಕೂ ಕಂಡುಬರುವ ಸೌಂದರ್ಯ, ಔಚಿತ್ಯ, ವೈಚಾರಿಕ, ಪ್ರಕೃತಿ ಜನಪರ ಮತ್ತು ಮಾನವೀಯ ಕಾಳಜಿಯ ಸಂವೇದನೆಗಳು ಎದುರಾಗುತ್ತದೆ. ಅವರ ಕಾವ್ಯ ಸಂವೇದನೆಗಳು ಒಳನೋಟಕ್ಕೆ ನೇಪಥ್ಯವಾಗಿಕಂಡರೂ ಇವುಗಳನ್ನು ಸ್ಥೂಲವಾಗಿ ಪರಿಗಣಿಸುವುದು ಅಗತ್ಯವಾಗುತ್ತದೆ. ಇವುಗಳನ್ನು ಸನದಿಯವರ ಕಾವ್ಯವನ್ನು ಹೇಗೆ ಹೊಸ ನೆಲೆಗಳಿಂದ ನೋಡಬಹುದೆಂಬ ಸೂಚನೆಗಳಾಗಿ ಬಳಸಿಕೊಳ್ಳಲಾಗಿದೆಯೇ ವಿನಾ 'ಅಲ್ಲಿ ಇಷ್ಟೇ ಕಾಳಜಿಗಳು ಇಷ್ಟಿಷ್ಟು ಪ್ರಮಾಣದಲ್ಲಿ ಕೆಲಸ ಮಾಡಿವೆ' ಎಂದು ಕರಾರುವಕ್ಕಾಗಿ ಸಾಧಿಸುವ ಗಣಿತ ಕ್ರಿಯೆಗಾಗಿ ಅಲ್ಲ ಎನ್ನುವುದನ್ನು ಮೊದಲಿಗೆ ಸ್ಪಷ್ಟಪಡಿಸುತ್ತೇನೆ.

೪.೧:- ಸೌಂದರ್ಯ ಕಾಳಜಿ.

ನಮ್ಮ ಎಲ್ಲ ಹಿರಿಯ ಸಾಹಿತಿಗಳೂ ಈ ಸೌಂದರ್ಯಾನ್ವೇಷಕ ಪ್ರವೃತ್ತಿಯವರೇ ಆಗಿದ್ದಾರೆ. ಡಿ.ವಿ.ಜಿ ಯವರ 'ಬದುಕನ್ನು ಚೆಲುವಾಗಿಸು' ಎನ್ನುವ ಸಂದೇಶವಾಗಲಿ ಜೀವನದ ಬಗೆಗೆ ಮಾಸ್ತಿಗಿಂತ ಕೃತಜ್ಞತಾಪೂರ್ವಕ ಆಪ್ತ ಭಾವವಾಗಲಿ, ಬದುಕಿನ ಸವಾಲುಗಳು ಅದು ಕೊಡುವ ಕ್ಷೇಮಭಾವದ ಸಂಕೇತಗಳೆನ್ನುವ 'ರವಿ ಶಶಿಗಳಿಗೆ ಇಲ್ಲದ ಭಯ, ವ್ಯರ್ಥ ವೇಗ, ನಮಗೇಕೆ,' ಎನ್ನುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪರವರಾಗಲಿ, ಸುತ್ತಲಿನ ಸೌಂದರ್ಯವನ್ನು ತೆರೆದ ಕಣ್ಣು ಮನಸ್ಸುಗಳಿಂದ ಮೊಗೆದುಕೊಂಡವರಾಗಿದ್ದಾರೆ. ಈ ಮಾತಿಗೆ ಸನದಿಯವರೂ ಅಪವಾದವಾಗಿಲ್ಲ.

ಮೊದಲಾಗಿ ಸನದಿಯವರ ಅತ್ಯಂತ ಸುಕುಮಾರ ಕಲಾತ್ಮಕವಾದ ಸೌಂದರ್ಯಪ್ರಜ್ಞೆಗೆ ಕೆಲವು ಉದಾಹರಣೆಗಳನ್ನು ಪ್ರಸ್ತಾಪಿಸಬಹುದು. ಸನದಿಯವರ 'ತಾಜ್ ಮಹಲ್' ಕವನ ಸಂಗ್ರಹದ ಮುನ್ನುಡಿಯಲ್ಲಿ ಶ್ರೀ ಬೇಂದ್ರೆಯವರು-"ಮದುವೆಗೂ ಮೊದಲು ಕಂಡ ವಾತ್ಸಲ್ಯದ ಕೃತಜ್ಞತೆಯಲ್ಲಿ ಅಂಕುರಿಸಿದ ಪ್ರೀತಿ, ಒಲವು, ಬಳ್ಳಿಗೆ ಮಂಟಪ ಮಂಟಪಕ್ಕೆ ಬಳ್ಳಿ ಎನ್ನುವ ಅನ್ಯೋನ್ಯಾಶ್ರಯದಲ್ಲಿ ಮಂಡನಗೊಂಡು, ಹೂಗಂಡು ಸಫಲತೆಯ ದಿಕ್ಕಿಗೆ ಮುಖ ಮಾಡಿದಾಗ ಅಖಂಡ ಪ್ರೀತಿ ಭಾವಗೀತೆಗಳೇ ಖಂಡ ಖಂಡ ಶರ್ಕರಾ ಪಿಂಡವಾಗಿ ರಾಶಿಗೊಂಡದ್ದು ಒಂದು ಕ್ಷೇಮ, ಒಂದು ಯೋಗ"[೧] ಎಂದು ಅಭಿಮಾನದಿಂದ ಬರೆದಿದ್ದಾರೆ.

ಪ್ರೀತಿಗೆ ಸ್ಮಾರಕವಾದ 'ತಾಜ್‌ಮಹಲ'ನಲ್ಲಿ ಅವರು ಚೆಲುವನ್ನು ಅರಸುವ ಗುರುತಿಸುವ ರೀತಿ ಹೀಗಿದೆ:

"ಯಾವ ಕವಿ ಕಲ್ಪನೆಯ ಬೆಳಕಿನಲಿ ತೇಲಿ ಬಂದ ರೂಪ?

..

ಆ ರಾಜಶಿಲ್ಪಿಯೂ ಉಳಿಯಧಾರೆ "ಉಳ" ಎಂದು ಕೊಟ್ಟವರವು

ಯಮುನೆಯಡಿಗೆ ನೆಲೆ ಕಂಡು ಶಿಲೆಗೆ ತುಂಬಿಹುದು ಜೀವದರಿವು.

ಹಾಲ್ಗಡಲ ಕನಸು ಕೊನೆಗೊಂಡು ಬಂದ ಪ್ರರ್ಣೇಂದು ತಂದ ನೌಕೆ

ಬೆರಳು ಸೋಂಕಿದರೆ ಹರಳು ಒಗೆದುವೊಲು ನೋಯಬಹುದು-ಜೋಕೆ!"

ಆ ಪ್ರೀತಿಯ ಪಾವಿತ್ರ್ಯವನ್ನು, ಮೃದುತ್ವವನ್ನು, ಗಂಧಶಾಲಿತ್ವವನ್ನು, ರೋಮಾಂಚಕತೆಯನ್ನು ಗಮನಿಸುವ ಕವಿಯ ಸೌಂದರ್ಯಶಕ್ತಿ ಇಲ್ಲಿ ಸಾರ್ಥಕವನ್ನು ಕಂಡಿದೆ.

"ಸುಂದರತೆಯನ್ನೇ ಮೆಚ್ಚುವ ಕಣ್ಣು

ಕವಿಗಳಗಿದ್ದರು ನಿನಗೇನು?

ನಿನ್ನನ್ನರಿಯದ, ಏನನು ಬರೆಯದ

ಅವರಾ ಗೊಡವೆಯನೇ ಮಾಣು.

-ಎನ್ನುತ್ತಾ ಸೌಂದರ್ಯವನ್ನು ಗ್ರಹಿಸಲಾರದ, ಅಭಿವ್ಯಕ್ತಿಸಲಾರದ ಮನೋವೃತ್ತಿಯನ್ನು ಚುಚ್ಚುವ ಭಾವವನ್ನೂ ಸನದಿಯವರು ವ್ಯಕ್ತಪಡಿಸುತ್ತಾರೆ. ಅಲ್ಲಲ್ಲಿ ಬರುವ, ಚೆಲುವಿನ ಮುಂದೆ ರಸಿಕ ಹೃದಯವಷ್ಟೇ ಎಚ್ಚರವಾಗಿದ್ದು, ಬುಧ್ಧಿ ಸುಷುಪ್ತಿಗೆ ನಿದ್ರಾವಸ್ಥೆ ಸಲ್ಲುವ ವೈಚಿತ್ರ್ಯವನ್ನೂ ಅವರು ಅನುಭವಿಸುತ್ತಾರೆ.

ಸನದಿಯವರ ಚಾವ್ಯದಲ್ಲಿ ಎಂದಿಗೂ ಸ್ವಭಾವ ಸಹಜವಾದ ಮಾರ್ದವತೆ ಮರೆಯಾಗಿಲ್ಲ. "ನೆಲಸಂಪಿಗೆ" ಕವನ ಂಕಲದ "ನಿವೇದನೆ" ಕವನದಲ್ಲಿ ಕವಿಯಲ್ಲಿರುವ ಹೂವಿನ ಹುಚ್ಚನ, ಸೌಂದರ್ಯದ ಹುಚ್ಚನ್ನು ಈ ರೀತಿ ತೋಡಿಕೊಂಡಿದ್ದಾರೆ.

"ನನಗೂ ಹೂವಿನ ಹುಚ್ಚು ! ನಿಮಗಾಗಲಿದೆ ಮೆಚ್ಚು

ನನ್ನ ಎಳೆತನದುಳುಮೆಗದುವೆ ಫಲವು!

....

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ

ಸರ್ವಜ್ಞನಾ ನುಡಿಯು ಸರ್ವಮಾನ್ಯ:

ಆ ಕಿರಣ ಸಂಕಿರಣ ಮಾನ ಮಾಪಣದಲ್ಲಿ

ಗೆಲುವಗೆ ನನ್ನದೆಯ ನುಡಿಯಹುದು ಧನ್ಯ!"

ಹೀಗೆ 'ನೆಲಸಂಪಿಗೆ' ಕವನದಲ್ಲಿ ಸೌಂದರ್ಯಾಸ್ವಾದನೆಯಲ್ಲಿ ತೊಡಗಿದ ಮನಸ್ಸು ಕೇವಲ ಕಲ್ಪನಾಲೋಕ ವಿಹಾರಿಯಲ್ಲ, ಅದು ಅನುಭವದ್ರವ್ಯಗಳ ಸೆಲೆ ಈ ನೆಲೆ ಎಂಬ ಎಚ್ಚರಿಕೆಯಿದೆ. ಆದರೆ ಸೌಂದರ್ಯಾಸ್ವಾದನೆಯು ಕಟು ಅನುಭವವೂ ಮಾನಸಿಕ ದೂರವನ್ನುಳಿಸಿಕೊಂಡು, ವ್ಯಕ್ತಿಯ

ಅನುಭವದ ಎಲ್ಲರ ಅನುಭವವಾಗಿ ಸೌಂದರ್ಯಾರಾಧಕ ಕಣ್ಣಿಗಿಂತ ಅನುಭವದ ಹೃದಯವಂತಿಕೆಗೆ ಒತ್ತು ಬಂದಿದೆ. ಕಲ್ಪನೆಯ ಬೆನ್ನೇರಿ ವಾಸ್ತವತೆಯಿಂದ ದೂರ ಸರಿವ ಬಯಕೆ ಕವಿಗಿಲ್ಲ.

ಕವಿ ಸನದಿಯವರ ಕವನಗಳಲ್ಲಿ ಆಗಾಗ್ಗೆ ಸೃಷ್ಟಿ ಸೌಂದರ್ಯದ, ಪ್ರೇಮ, ಚೆಲುವುಗಳ ಬಗೆಗಿನ ಉಲ್ಲೇಖಗಳು ಸುಕುಮಾರ ಹೃದಯದ ರಮ್ಯ ಕವಿಯ ನಿಲುವಿನಂತೆ ಉಲ್ಲೇಖಗೊಳ್ಳುವುದರಿಂದ ಅದು ದಾರಿ ತಪ್ಪಿಸುವಂತೆ ತೋರುತ್ತದೆ. ಯಾವುದೇ ಕಲಾ ರಚನೆ ಕಲೆಯಾಗುವುದೆಂದರೆ, ಸೌಂದರ್ಯಾನುಭವದ ಮಜಲನ್ನು ದಾಟಿ ಸಾಗಬೇಕಾಗುತ್ತದೆ ಎನ್ನುತ್ತಾರೆ. ಹರ್ಬರ್ಟ್ ರೀಡ್ ಅವರ ದೃಷ್ಟಿಯಲ್ಲಿ ಯಾವುದೇ ರಚನೆಯ ರೂಪ–ಸಾಂಗತ್ಯವೇ ಸೌಂದರ್ಯ, ಕಲೆ ಇಂತಹ ಸೌಂದರ್ಯವನ್ನೂ ಮೀರಿದ್ದು ಎಂದಿದ್ದಾರೆ.

ತಮ್ಮ ಕಾವ್ಯದ ಶಿಲ್ಪ ಹಾಗೂ ವಿನ್ಯಾಸಗಳಲ್ಲಿ ಆಗಾಗ ನವ್ಯ ಮನೋಧರ್ಮದ ಪ್ರಭಾವಕ್ಕೊಳಗಾದರೂ, ಸನದಿ ಅವರು ತಮ್ಮ ಕಾವ್ಯದಲ್ಲಿ ಗೇಯ ಗುಣ, ಹಾಗೂ ಸೌಂದರ್ಯ ಪ್ರಜ್ಞೆಯನ್ನು ಕಾಪಾಡಿಕೊಂಡು ನವ್ಯರಿಗಿಂತ ಭಿನ್ನವಾಗಿದ್ದಾರೆ.

'ಆಶಾಕಿರಣ' ಸಂಕಲನದಲ್ಲಿ ಸಾಮಾನ್ಯವಾಗಿ ಪೃಥ್ವಿಯ ಮೇಲಿನ ಪ್ರತಿಯೊಂದು ವಸ್ತು ಜಡಚೇತನವಲ್ಲ, ಚೆಲುವಿನ ಅವಿರ್ಭಾವ! ಎಂಬುದು ಮನದಟ್ಟಾಗದೇ ಇರದು. ಇದು ಸಾಮಾನ್ಯನ ಒಳಾಂಗಗಳದ ಭಾವ. ಅದನ್ನು ಕವಿ ಸನದಿ ಸಮೀಕರಿಸಿ ಆ ಸಾಮಾನ್ಯ ಭಾವವನ್ನೆಲ್ಲ, ಅಸಮಾನ್ಯ ಕಲೆಯಾಗಿಸಿ ಹಾಡಿದ್ದಾರೆ.

ಕೌಟುಂಬಿಕವಾದ ಸರಸ ಸಂವೇದನೆಗಳನ್ನು ಸಂವಹಿಸುವ ಸನದಿಯವರ ಕವನಗಳಲ್ಲಿ 'ಮೈಸೂರು ಮಲ್ಲಿಗೆ'ಯಲ್ಲಿರುವಂಥ ಭಾವಸಂದಿ ಗುಣವನ್ನು ಕಾಣುತ್ತೇವೆ. ಹಿರಿಯ ಕವಿ ಪುರೋಹಿತ ತಿರುನಾರಾಯಣ ಅಯ್ಯಂಗಾರ ನರಸಿಂಹಾಚಾರ್ (ಪು.ತಿ.ನ)ರವರು ಬರೆಯುವಂತೆ "ಬಹುಶಃ ಪ್ರಣಯ ವಾತ್ಸಲ್ಯಗಳೆಂಬ ಆರ್ಷೇಯ ಭಾವಗಳು ಛಂದೋಸುವರ್ತಿಗಳಾಗಿ ಬಾಳಲು ಇಷ್ಟಪಡುತ್ತವೋ ಏನೋ, ಪ್ರೇಮದ ಪೂರ್ವರಂಗ–ಉತ್ತರ ರಂಗಗಳೆರಡರಲ್ಲೂ ಸರಳವೂ, ಮಧುರವೂ ಪ್ರಕೃತಿ ಶೃತಿಲಯ ಬದ್ಧವೂ ಆದ ಭಾವಗಳನ್ನು ಈ ಕವನಗಳ ಆಕೃತಿಮ ಸಂವಿಧಾನದಲ್ಲಿ ಸಾಕ್ಷಾತ್ಕರಿಸುವುದು ಅಭಿನಂದನೀಯವಾಗಿದೆ." ಸನದಿಯವರ ಕಾವ್ಯ ಈ ಜಗತ್ತಿನ ತುಂಬೆಲ್ಲ ಮಾರ್ದವವಾಗಿವೆ ಎಂದು ನುಡಿದಿದ್ದಾರೆ.

ಹೊಸ ಜೀವ ಗೆಚ್ಚೆ ಕಾಲಗಳನ್ನೊತ್ತಿ ಬರುವ ಸಂಭ್ರಮ, ಬದುಕಿನ ಸಾಹಿತ್ಯ ಜೀವನ ಜಾಲದ ಅಸಹಜ ಅನುಭವಗಳೆಲ್ಲ ಇಲ್ಲಿ ಕಾವ್ಯ ಶರೀರಗಳಾಗಿವೆ. ಈ ದೋರೆಗಾಯಿ ಮಾಗಿ ಮಧುರವಾಗುವ, ಹಂತಹಂತವಾಗಿ ಪದೋನ್ನತಿಗಳನ್ನು ಹೊಂದುವ ಪ್ರಕ್ರಿಯೆಗೆ ಕವಿ ಸ್ಪಂದಿಸುತ್ತಾನೆ. ಸಂಸಾರಯಾನದ ಚಿಕ್ಕ ದೊಡ್ಡ ನಿಲುದಾಣಗಳನ್ನು ಪರಿಚಯಿಸುತ್ತ, ಹಾದಿಬದಿಯ ಸೊಬಗನ್ನು ಅನಾವರಣಗೊಳಿಸುತ್ತ ಅವರ ಸಾವಿಲ್ಲದೆ ಈ ಪ್ರಕಾರದ ಕವನಗಳು ನಡೆಯುವುದನ್ನು ನೋಡುವುದೇ ಒಂದು ಸೊಗಸಾದ ಅನುಭವವಾಗುತ್ತದೆ.

ಮದುವೆಯಾಗಿ ಕವಿಯ ದಾಂಪತ್ಯ ಜೀವನ ಆರಂಭವಾಗುತ್ತದೆ. ಆರಂಭದ ಜೀವನದ ಸೊಗಸು ತುಂಬ ರಾಗ ರಂಜನೆಗಳ ಸೊಗಡಿನಿಂದ ಘಮಘಮಿಸಿದೆ. ಹಳ್ಳದ ಹೊಲ ತೋರಿಸಲು ತನ್ನ ನಲ್ಲೆಯನ್ನು ಕರೆದೊಯ್ದ ಚಿತ್ರ ತುಂಬ ಚೆಲುವಾಗಿದೆ. ಎರೆ ನೆಲ, ಮಳೆ ಬಂದು ನಿಂದಿದೆ, ಬೈತಲೆಯಂಥ ಸೀಳ್ದಾರಿ, ತುಂಬ ರಸಿಕತೆಯಿಂದ ಗಿಡಮರ-ಮಾವು ನೇರಿಲ, ಪೇರಲ, ಕೇದಗೆ ಹೊಡೆ, ಕಬ್ಬಿನ ತೋಟ ಮುಂತಾದವು ಮುಗುಳು ನಗುತ್ತ ಅವಳನ್ನು ಸ್ವಾಗತಿಸುತ್ತವೆ. ಕೊನೆಗೆ ಕವಿ ಚೆಂಗುಲಾಬಿಯೊಂದನ್ನು ಹೊಲದ ಗುರಿತಿಗೆಂದು ಮುಡಿಸುತ್ತಾನೆ.

"ನನ್ನ ಕೊರಳಿಗಾಯ್ತು ನಿನ್ನ ತೋಳ ಚಂದ್ರಹಾರ

....

ತಂಗಾಳಿಗು ತಿಳಿಯಲರಿಯದಂಥ ತಂಪು"

ಈ ಸಾಲುಗಳಲ್ಲಿ ಬೇಂದ್ರೆಯವರ 'ಒಲವೆ ನಮ್ಮ ಬದುಕು, ಎಂಬುದರ ಛಾಯೆ ಕಾಣಿಸಿದಂತಿದೆ. ಆ ಋತಕ ಸರಳತೆಯಲ್ಲಿ ಮಿಂಚುವ ಸೌಂದರ್ಯದ ಸೊಗಸೇ ಬೇರೆ, ಸಂತೋಷವೇ ಬೇರೆ.

ಸತ್ಯದಲ್ಲಿ ಸೌಂದರ್ಯವನ್ನರಸುವುದೇ ಸನದಿಯವರ ಕಾವ್ಯ ಚೇತನದ ಹಂಬಲ. ಅದೇ ಜನಪರ ದೃಷ್ಟಿಯ ವಾಸ್ತವವಾದ. ಸೌಂದರ್ಯದಲ್ಲಿ ಸತ್ಯವನ್ನರಸುವುದು ಶುದ್ಧ ಆದರ್ಶವಾದ. ಈ ರೀತಿಯ ಆದರ್ಶವಾದ ಸನದಿಯವರ ಕಾವ್ಯದ ಲಕ್ಷಣವಾಗಿದೆ. ಸನದಿಯವರ ಸೌಂದರ್ಯ ಪ್ರಜ್ಞೆಯನ್ನು ದೊಡ್ಡ ಕವನಗಳಿಂದ ಹಿಡಿದು ಹನಿಗವನಗಳವರೆಗೂ ಹರಡಿದೆ. ಈ ಕವಿಯ ಸೌಂದರ್ಯಪ್ರಜ್ಞೆಯೊಡನೆ ಸತ್ಯದ ಜಿಜ್ಞಾಸೆಯೂ ಸೇರಿ ಈ ಪುಟ್ಟ ಕವನಗಳು ಕವಿಯ ವಾಸ್ತವ ದೃಷ್ಟಿಯ ಪ್ರಕಟಣೆಗೆ ಹೊಸ ವಲಯವನ್ನೇ ನಿರ್ಮಿಸಿಕೊಟ್ಟಿದ್ದಾರೆ.[೨]

೪.೨:- ಔಚಿತ್ಯ ಕಾಳಜಿ.

ಸನದಿಯವರ ಕಾವ್ಯಧರ್ಮದ ಮರ್ಮವಿರುವುದೇ ಔಚಿತ್ಯದಲ್ಲಿ. ಪ್ರಕೃತಿ ಇರಲಿ, ಸಂಸ್ಕೃತಿ ಇರಲಿ.ಸಾಹಿತ್ಯವಿರಲಿ, ದಾಂಪತ್ಯವಿರಲಿ, ಲೋಕಾನುಭವವೇ ಇರಲಿ, ಈ ಕವಿಯ ಅಭಿವ್ಯಕ್ತಿಗೆ ಯಾವಾಗಲೂ ಯಾವ ಮಟ್ಟದಲ್ಲಿಯೂ ಒಂದು ಸಮಂಜಸತೆ ಇರುತ್ತದೆ. ಭಾವ-ಭಾಷೆಗಳ ಸೂಕ್ತ ಸಾಂಗತ್ಯವಿರುತ್ತದೆ. ಇದು ಬಲು ಮಹತ್ವದ ಸಾಧನೆ. ಯಾಕೆಂದರೆ ಕಾವ್ಯದ ಆತ್ಮವೇ ಔಚಿತ್ಯ. ಉಚಿತವಾದ ಪದ ಸಂಯೋಜನೆಯಿಂದಲೇ ಎಲ್ಲ ನಾದ, ಧ್ವನಿ ಮತ್ತು ರಸಗಳ ಆವಿಷ್ಕಾರ. ಸ್ವರಕ್ಕೆ ತಕ್ಕ ಸಮರ್ಪಕವಾದ Resonance column ಅತ್ಯಗತ್ಯ. ಈ ಅವಕಾಶವಿರದಿದ್ದರೆ ಸ್ಪಂದನದಿಂದ ನಾದ ಹೊರಹೊಮ್ಮಲಾರದು. ಇದು ಭಾವಕ್ಕೂ ಅರ್ಥಕ್ಕೂ ಅನ್ವಯಿಸುವ ಅಂಶ. ಶಬ್ದದ ಅರ್ಥದಿಂದ ಭಾವ, ಅದರಿಂದ ಒಳಧ್ವನಿ. ಔಚಿತ್ಯ ಪ್ರಜ್ಞೆ ಸನದಿಯವರ ಕಾವ್ಯದಲ್ಲಿ ಸದಾ ಜಾಗೃತವಿರುವುದರಿಂದ ಸನದಿಯವರ ಶೃಂಗಾರ ಕಾವ್ಯವು ವಾತ್ಸಲ್ಯ ಭಾವದ ಕಡೆಗೆ ವಾಲುತ್ತದೆ. ಸ್ವಲ್ಪ ಎಚ್ಚರ ತಪ್ಪಿದರೂ

ಔಚಿತ್ಯ ಮೀರಬಹುದಾದ ಸಂದರ್ಭಗಳನ್ನೂ ಅವರು ಸಂಯಮದಿಂದ ನಿರ್ವಹಿಸಿದ್ದಾರೆ. ಅವರ ದಾಂಪತ್ಯ ಗೀತೆಗಳು ಈ ಮಾದರಿಯ ಒಳ್ಳೆಯ ಉದಾಹರಣೆಗಳಾಗಿವೆ.

"ಏಕಾಂತ ಕೆಳಸಿತ್ತು ಸ್ವಪ್ನ ರಂಜಿತ ಜೀವನ
ಕಾವೇರಿ ನಿಂದಿತ್ತು
....
ಸ್ವಪ್ನ ಮಾಲೆಯ ನೆಯ್ದು ಮನ
ಮನಗಳೊಂದಾಗಿ
ಬರುವ ಭಾಗ್ಯದ ಶಿಲ್ಪ ಕಲ್ಪನೆಯಲಿ
ತಲ್ಲೀನವಾಗಿರಲು ಎದೆಯ ಬರ ಹೀತಿತ್ತು.
ಕಾಯ್ದ ಮೀಸಲು ಮುರಿದ ಗಳಿಗೆಯಲ್ಲಿ"

ವೈಯಕ್ತಿಕ ರೋಚಕ ಅನುಭವಗಳ ನಿರೂಪಣೆಯಲ್ಲೂ ಅವರು ಕಾವ್ಯ ವಸ್ತುವಿನಿಂದ ತುಸುದೂರದಲ್ಲೇ ಉಳಿದು ಅದರ ಮರ್ಯಾದೆಯನ್ನು ಕಾಯುತ್ತಾರೆ. ಹಾಗೆಯೇ ಸೂರ್ಯಪಾನದಲ್ಲೂ ಇದೆ ವಿಚಾರದ ಪ್ರಸ್ತಾಪವಿರುವುದು ತಿಳಿದುಬರುತ್ತದೆ. ಶಬ್ದ ಅರ್ಥಗಳ ದಾಂಪತ್ಯ, ಉಚಿತ ಪದಗಳ ಕ್ರಮಬದ್ಧ ಬಳಕೆ, ಬುದ್ಧಿ ಭಾವಗಳ ಹಾಳತಗಳು ಸನದಿಯವರ ಕಾವ್ಯದ ವಿಶಿಷ್ಟ ಲಕ್ಷಣಗಳಾಗಿವೆ. ಇಂಥ ಲಾಲಿತ್ಯಪೂರ್ಣ ಮಾತಿನಲ್ಲಿ ಕವಿ ಸನದಿ ಒಂದರ್ಥದಲ್ಲಿ ಕವಿಯಾದ ತನ್ನನ್ನೇ ಕುರಿತು-ತನ್ನ ಕಾವ್ಯ ಸಾಧನೆಯ ಆರಂಭಿಕ ಹಂತದಲ್ಲೇ-ಕೊಟ್ಟ "ಕೈಫಿಯತ್ತು" ಹೇಳುತ್ತಾರೆ.

"ಜೀವನದ ವಿಕಸನಕೆ ಮೇಣ್ ಜನದ ಸಂತಸಕೆ
ಹಾಡುವುದೆಹವಿಗಿರುವುದೊಂದು ಧರ್ಮ
ಅವನೇನು ಹಾಡಿದರು ಕೇಳಬೇಕೇ ನಾವು?
ಬೇಕು-ಬೇಡಗಳರಿವುದನ್ನು ಕರ್ಮ!"

ಒಟ್ಟಿನಲ್ಲಿ ಈ ಪದ್ಯದ ಲಯ, ಮಾತಿನ ನಯ, ದಾಟಿಯ ವಿನಯ-ಎಲ್ಲವೂ ನಿರಾಮಯ, ನಿಬಿಡವಾಗಿ ಭಾವಮಯ! ಲೋಕಕಾರಣಕೆಂದು ರಸ-ಭಾವಗಳ ಕೊಂದು ಭಾಷಣ ಬಗೆಯಲ್ಲಿ ಬರೆದ ಈ ಕವಿಗೆ ದಿಟವಾಗಿಯೂ ಇರುವುದಿಲ್ಲ: ಇರಲೂ ಬಾರದು.

ಔಚಿತ್ಯ ಶಬ್ದಗಳ ಉಚಿತವಾದ ಸಂಯೋಜನೆ. ಸಂದರ್ಭಕ್ಕೆ ಹೊಂದುವ ಮಾತು, ಅರ್ಥಕ್ಕೆ ಹೊಂದುವ ಪದ. ಭಾವಕ್ಕೆ ಹೊಂದುವ ಭಾವೆ ಇವುಗಳ ಖಚಿತವಾದ ಸಂಯೋಜನೆ-ಜೋಡಣೆಯಿಂದಲೇ ಅರ್ಥದ ನಾದ-ನಿನಾದಗಳ ಸ್ವರದ ವ್ಯಂಜನಗಳು ಸಂಭವಿಸುತ್ತವೆ. ಗಂಟೆ ಬಾರಿಸಿದಾಗ, ತಂತಿ ಮಿಡಿದಾಗ ಕೆಲ ಕಾಲದವರೆಗೆ ಅದರ ನಾದ ಮಿಡಿಯುತ್ತಲೇ ಇರುತ್ತದೆ. ಹಾಗೆಯೇ ಮಾತು ಮುಗಿದರೂ ಅದರ ಭಾವಸ್ಪಂದನಗಳು ತರಂಗ ತರಂಗವಾಗಿ ತೇಲುತ್ತಿರುತ್ತವೆ.

ಈ ಗುಣವೇ ಔಚಿತ್ಯ. ಶ್ರೇಷ್ಠ ಆಂಗ್ಲ ವಿಮರ್ಶಕ ಕ್ರಿಲರ್ ಕೋಚ್ ಇದನ್ನು Appropriateness ಎಂದೇ ಕರಿದಿದ್ದಾರೆ. ಇದು ಆಡಂಬರಕ್ಕಿಂತ. ಮಾತಿನ ಬೆಡಗು ಸಡಗರಕ್ಕಿಂತ ಮಿಗಿಲಾದದ್ದು. ಸರ್ವಜ್ಞ ಎತ್ತಿ ಹೇಳಿದ್ದೂ ಈ ಮಾತನ್ನೇ "ಹೊತ್ತಿ ಗಾಡಿದ ಮಾತು ಸತ್ತವನು ಎದ್ದಂತೆ"[೩] ಇದು ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ ಮಾತ್ರವಲ್ಲ. ಅದಕ್ಕಿಂತ ಬಲಿಷ್ಠ ಸತ್ವದ್ದು. ಈ ಸತ್ವ ಸನದಿಯವರ ಕಾವ್ಯದಲ್ಲಿ ಓತಪ್ರೋತವಾಗಿ ಹರಿದಿದೆ. ಇವರ ಕಾವ್ಯಗಳಲ್ಲಿ ಔಚಿತ್ಯವೆಂಬ ಸಾರ್ವಭೌಮ ಗುಣವು ಅರ್ಥ-ಭಾವಗಳ ನಡುವೆ. ಪ್ರಸ್ತುತ-ಅಪ್ರಸ್ತುತಗಳ ನಡುವೆ. ಪೂರ್ವಾಪರ ಸಂದರ್ಭಗಳ ನಡುವೆ. ವಿಶೇಷ-ವಿಶೇಷಣಗಳ ನಡುವೆ. ಯೋಚನೆ-ಯೋಜನೆಗಳ ನಡುವೆ ಕೂಡಿ ಬರುತ್ತದೆ. ಅದರಿಂದಲೇ ಇವರ ಕಾವ್ಯ ವಾಚಾಸಿದ್ಧಿ, ರಸಸಿದ್ಧಿ ಎಂದು ಹೇಳಲಿಚ್ಚಿಸುತ್ತೇನೆ.

೪.೩:- ಪ್ರಕೃತಿ ಕಾಳಜಿ.

ಎಲ್ಲ ಕಾವ್ಯವು ಸತ್ಯವನ್ನು ಸೌಂದರ್ಯದ ಮೂಲಕ ಸೌಂದರ್ಯವನ್ನು ಸತ್ಯದ ಮೂಲಕ ನಡೆಸುವ ಹುಡುಕಾಟವಾಗಿರುತ್ತದೆ. ಕವಿಯ ಪ್ರತಿಭೆ ಹಾಗೂ ಒಲವಿಗಳಿಗನುಗುಣವಾಗಿ ಮೂರ್ತ ಮತ್ತು ಅಮೂರ್ತ ಹೀಗೆ ಎರಡೂ ಲೋಕಗಳು ಅವನೆದುರು ತೆರೆದುಕೊಳ್ಳುತ್ತದೆ. ಕೀಟ್ಸ್, ಸ್ಪೆನ್ಸರ್, ಜಾಸರ್. ಪಂಪ. ಕುಮಾರವ್ಯಾಸ. ಲಕ್ಷ್ಮೀಶ ಅಂಥವರಿಗೆ ದೇವದಾನವರ, ಯಕ್ಷ ಕಿನ್ನರರ ಮಾಯಾಲೋಕಗಳು ಪ್ರಕ್ಷುಬ್ಧ ಸಾಗರಗಳು. ಕಾಡುಗಳು ಎಲ್ಲವೂ ಕಾಣಬಲ್ಲವು. ಇನ್ನು ಕೆಲವರ ಪಾಲಿಗೆ ವರ್ಡ್ಸ್‌ವರ್ತ್. ಸ್ಯಾಂಡ್‌ಬರ್ಗ್. ವಿಟ್‌ಮನ್. ಸರ್ವಜ್ಞ, ಕುವೆಂಪು, ಬೇಂದ್ರೆ ಅಂಥವರಿಗೆ ಹುಲ್ಲು, ಹೂ, ಬೆಟ್ಟ, ಕಣಿವೆ, ಮಾಗಿಗಳ ಪ್ರಪಂಚವೇ ಎಲ್ಲವನ್ನೂ ನೀಡಬಹುದು, ಇಂಥ ಮೂರ್ತ ಲೋಕದ ವಾಸ್ತವವನ್ನು ಮುಗ್ಧತೆ ಹಾಗೂ ವಿಸ್ಮಯಗಳೊಂದಿಗೆ ಬೆರೆಸಿ, ಪ್ರಕೃತಿ ಚಿತ್ರಗಳನ್ನು ನೀಡುವ ಕವಿ ಸನದಿಯವರ ಕುಶಲತೆ ಮೋಹಕವಾಗಿದೆ. ಅವರು ಸತ್ಯ ಹಾಗೂ ಸೌಂದರ್ಯಗಳ ಹೊಳೆಯಲ್ಲಿ ತಮ್ಮ ಕಾವ್ಯದ ನಾವೆ ತೇಲಿಸಿದ್ದಾರೆ. ಸಮಭಾವದ ಸಹಜೀವನದ ಬಯಲ ಬಾಗಿಲು ತೆರೆಯುವುದು ಅವರ ಹವ್ಯಾಸ.

ಕನ್ನಡ ಕಾವ್ಯದಲ್ಲಿ ಕವಿ ಸಮಯದ ಕಟ್ಟುಪಾಡುಗಳು ಕಡಲು ಋತುಗಳು. ಕಾಡುಗಳು. ಹೂ. ಹಕ್ಕಿಗಳು – ಇವನ್ನೆಲ್ಲ ಕಾವ್ಯವಸ್ತುವನ್ನಾಗಿ ಅಲ್ಲಲ್ಲಿ ಸೇರಿಸಿದ್ದವು. ಒಂದು ಮಾವಿನ ಹಣ್ಣನ್ನು ಕಚ್ಚಿ ತಿಂದು ಅಜೀರ್ಣಗೊಂಡ ಗಿಳಿಗಳ ಕುರಿತು ಪಂಪ ಹೇಳಿದ್ದಾನೆ. ಬತ್ತದ ಗದ್ದೆಗಳ ಮೇಲೆರಗಿ. ತೆನೆಗಳಿಗೆ ಹಸಿದು ಬಂದ ಗಿಳಿಗಳನ್ನು ಹಾರಿಸುವ ಹಳ್ಳಿಯ ಹೆಂಗಳೆಯರ ಬಗ್ಗೆ ವಿರೂಪಾಕ್ಷ ಪಂಡಿತ ಬರೆದಿದ್ದಾನೆ. ಅದೇ ಪರಂಪರೆಯನ್ನು ಹಲವು ಕನ್ನಡ ಕವಿಗಳು ಇಂದಿಗೂ ಕಾಯ್ದುಕೊಂಡು ಬಂದಿದ್ದಾರೆ. ಅದರಲ್ಲಿ ಕವಿ ಸನದಿ ಕೂಡ ಒಬ್ಬ ಪ್ರಮುಖ ಕವಿ ಆಗಿದ್ದಾರೆ. ಪ್ರಕೃತಿಯ ವಿವಿಧ ವಿನ್ಯಾಸಗಳನ್ನೂ, ಸೊಬಗಿನ ದೃಶ್ಯಗಳನ್ನೂ ನೀಡುವ ಅನೇಕ ಪದ್ಯಗಳು ಅವರ 'ಆಶಾಕಿರಣ',

ನೆಲಸಂಪಿಗೆ', 'ತಾಜಮಹಲ್', ಪ್ರತಿಬಿಂಬ', ಧ್ರುವಬಿಂದು' ಮುಂತಾದ ಕವನ ಸಂಕಲನಗಳಲ್ಲಿ ನಾವು ಕಾಣುತ್ತೇವೆ. ಸನದಿ ಅವರ ಪ್ರಕೃತಿ ಕಾವ್ಯದ ಸೌಂದರ್ಯ ದೃಷ್ಟಿ ಒಬ್ಬ ಭಾವಗೀತಕಾರನ, ಭಾವುಕನಾದ ದೃಷ್ಟಿಯಾಗಿದೆ. ಇಂದ್ರಿಯಗಳ ಪರಿಕರವಿದ್ದುದೇ ಪ್ರಪಂಚ ಸೌಂದರ್ಯವನ್ನು ಸರಿಯಾಗಿ ಗಮನಿಸಿ, ಬದುಕನ್ನು ಅರ್ಥಪೂರ್ಣವಾಗಿ ಬಾಳುವುದಕ್ಕೆ. ಸಾಮಾನ್ಯವಾಗಿ ಕವಿ ಪ್ರಕೃತಿಯ ಚೆಲುವನ್ನು ಗ್ರಹಿಸುವಾಗ ಸೃಷ್ಟಿಯ ಒಂದೊಂದೇ ಚಿತ್ರವು ಭಾವಚಿತ್ರವಾಗಿ ರೂಪುಗೊಳ್ಳುತ್ತದೆ. ಭಾವನೆಗಳಿಂದ ಬಣ್ಣ ತುಂಬಿಕೊಂಡ ಇಂಥ ರಸಚಿತ್ರಗಳು, ಕಾವ್ಯದ ಧ್ವನಿ ಹಾಗೂ ಅರ್ಥಗಳನ್ನು ಸಂಪದ್ಭರಿತಗೊಳಿಸುತ್ತದೆ. ಸೌಂದರ್ಯಕ್ಕೂ ಕಲೆಗೂ ಇರುವ ನಿಕಟ ಸಂಬಂಧವನ್ನು ಕುರಿತು ಈ ಕವಿ ಹೇಳುತ್ತಾರೆ. ಪ್ರಕೃತಿಯು ಎಲ್ಲ ಸೌಂದರ್ಯದ ತವರು, ಕಲೆಯು ಅದರ ಪ್ರತಿಬಿಂಬ ಮಾತ್ರ. ಎಂಬುದನ್ನು ನಾವಿಲ್ಲಿ ಗಮನಿಸಬೇಕಾದುದು ಅತೀ ಮುಖ್ಯವಾಗುತ್ತದೆ.

"ಕಲೆಯೆದುರು ನೀ ಚೆಂದ,
ನಿನ್ನೆದುರು ಕಲೆ ಛಂದ।"

ಕಲೆ ಮತ್ತು ಪ್ರಕೃತಿಗಳ ಸಂಬಂಧವನ್ನು ಇನ್ನಷ್ಟು ವಿವರಿಸುತ್ತಾ ಕವಿ ಹೀಗೆ ಹೇಳಿದ್ದಾರೆ

"ಕಲ್ಲು-ಬಂಡೆಯದೆತ್ತ ಶಿಲ್ಪಕೃತಿ ತಾನೆತ್ತ?"

ಜನಪರ ಕವಿಗಳು ತಮ್ಮ ಸುತ್ತಲಿನ ಸಾಮಾಜಿಕ ಪರಿಸರವನ್ನು ಮಾತ್ರ ಗಮನಿಸುತ್ತಾರೆಂದೇನೂ ಅಲ್ಲ. ಅವರ ಪ್ರಕೃತಿ ಪ್ರೀತಿಯ ಪರಿಯೇ ಬೇರೆ ತರದ್ದು. ಪ್ರಾಕೃತಿಕ ಪರಿಸರ ಅವರಿಗೆ ತ್ಯಾಜ್ಯವೇನೂ ಅಲ್ಲ. ಆದರೆ ಪ್ರಕೃತಿಯತ್ತ ಅವರು ಹರಿಸುವ ದೃಷ್ಟಿ ಬೇರೆತರದ್ದು. ರಮ್ಯ ಕವಿಗಳಿಗಿಂತ ಭಿನ್ನವಾದದ್ದು. ಉದಾಹರಣೆಗೆ ಇಲ್ಲಿ ಸನದಿಯವರ 'ಚೈತ್ರೋದಯ' ಕವನದಲ್ಲಿ ಹೀಗಿದೆ:

"ಜನಮನಗಣಾವಗುಣಗಳ ಗಾನವ
ಮಾಡುವಾಸೆಯಿರೆ ಮನ್ಮನಕೆ
ಮಾನವ ಜೀವನ ನೂತನಗೊಳ್ಳುವ
ಬಗೆಯಿರೆ ಸಂತತ ಚಿಂತನಕೆ
ಸೃಷ್ಟಿಯ ಸಜ್ಜಿಕೆ ಸನ್ನೆಗಣ್ಣೆನಲಿ
ಕರೆವಳಾವುದೋ ಗತ್ತಿನಲಿ।"

ಪ್ರಕೃತಿಗೆ ಸಂವಾದಿಯಾದರೂ ಸನದಿಯವರ ಚಿತ್ರಣಗಳು ಮಾನವಿಯವಾಗಿಯೇ ಸ್ಪಂದನಗೊಂಡಿವೆ. ಇವರ ಮನಸ್ಸು ಸೃಷ್ಟಿ-ಸೌಂದರ್ಯದಿಂದ ಆಕರ್ಷಿತವಾದಾಗಲೂ ಮನುಷ್ಯ ಜೀವನದ ನೋವು-ನಲಿವುಗಳಿಗೆ ವಿಕರ್ಷಿತವಾಗುವುದಿಲ್ಲ. ಹೀಗೆ ಪ್ರಕೃತಿಯಲ್ಲಿ ನವಚೈತನ್ಯದೊಂದಿಗೆ ಮೊಗದೋರುವ ಚೈತ್ರೋದಯವನ್ನು ಕಂಡು ಮಾನವನ ಹೃದಯದಲ್ಲೂ ಇಂಥ ಚೈತ್ರೋದಯವೇಕಾಗಬಾರದು? ಎಂದು ಈ ಕವಿ ಮನ ಪರಿತಪಿಸುತ್ತದೆ. ಅಂತೆಯೇ ಅವರು

ಅನುವಾದಿಸಿದ Ben Johnson ನ the Nobel Nature ಕನ್ನಡದಲ್ಲಿ 'ಪ್ರಕೃತಿಯ ಪಾಠ'ವಾಗಿ ಮೂಡಿ ಬಂದುದು ಅರ್ಥಪೂರ್ಣವಾಗಿದೆ.

ನಿಸರ್ಗದ ಉನ್ನತ ಉದಾತ್ತ ಹಾಗೂ ಅದ್ಭುತ ರಮ್ಯತೆಗಿಂತ ಈ ಕವಿಯ ಪಾಲಿಗೆ ಪ್ರಕೃತಿ ಮಾತೆಯೂ ತಾಯಿಯಂತೆಯೇ ವಾತ್ಸಲ್ಯಮಯಿಯಾಗಿ ಕಾಣುತ್ತಾಳೆ. ಅವಳ ನೋಟ-ಕೂಟಗಳಲ್ಲಿ ಕವಿಗೆ ಮನುಷ್ಯನ ಜೀವನ ವಿಕಾಸದ ಒಸಗೆಯ ದನಿ ಮಿಡಿದಂತೆ ಭಾಸವಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಈ ಕವಿಯನ್ನು ಪಾಲಿಸಿ ಪೋಷಿಸಿ ಬೆಳೆಸಿದ ಸಂಸ್ಕೃತಿ. Culture rooted in Agricultural! ಪ್ರಕೃತಿಯಿಂದ ಮನುಷ್ಯ ಸಂಸ್ಕೃತಿಯೇ ಸಂಸ್ಕಾರಗೊಳ್ಳುವ ಸಾಧ್ಯತೆಯನ್ನು ಇವರ ಕವನಗಳಲ್ಲಿ ಗುರುತಿಸಲಾಗುತ್ತಿದೆ. ಹೊಳೆ. ಹೊಲ. ಹಸು. ಹಕ್ಕಿ. ಹೂ. ಹಸಿರಿನ ಹಾಸು ಇದೆಲ್ಲವುಗಳ ಅಕೃತ್ರಿಮವಾದ ಹೊಂದಿಕೆಯಲ್ಲಿ ಸನದಿಯವರು ಮಾನವೀಯ ಸೌಂದರ್ಯವನ್ನೇ ಕಂಡದ್ದು ಕೌತುಕಪೂರ್ಣವಾಗಿದೆ. 'ಚೈತ್ರೋದಯ'. ಇಬ್ಬನಿಯ ಹಾಡು'. 'ಗುಲಾಬಿಮುಳ್ಳು', 'ನೆಲಸಂಪಿಗೆ', 'ಚದುರಂಗಿ'ಯಂಥ ಪುಟವಿಟ್ಟ ಪುಟ್ಟ ಕುಂದಣಗಳಲ್ಲಿಯೇ ಅವರು ಪ್ರಕೃತಿಯ ಸಾಕ್ಷಾತ್ಕಾರವನ್ನು ಪಡೆದರು. ಅಂದರೆ ಸತ್ಯ ಮತ್ತು ಸೌಂದರ್ಯಗಳನ್ನು ಈ ನೆಲೆಯಲ್ಲಿ ಅವರು ಅವಿನಾಭಾವದಿಂದ ನೋಡಿದರು. ಜನಜೀವನದೊಂದಿಗೆ ಹಾಸುಹೊಕ್ಕಾಗ ಪ್ರಕೃತಿಯ ಸೊಬಗು ಸನದಿಯವರ ವಿವಿಧ ಕವನಗಳಲ್ಲಿ ಮೈದೋರಿದೆ. 'ಸೌಂದರ್ಯ ಸಂಚಯದಿ ಸವಿಯನುಭವದೊಡನೆ ಸೃಷ್ಟಿಯ ಸುಂದರ ಮಂದಿರದಲಿ ಮನ ಸವಿಗನಸಿನ ಛವಿಯನುಭವಿಸಿ'ದಾಗಲೂ ಕವಿ ಜನರ ಜಡತನ-ಬಡತನ ಮರೆಯುವುದಿಲ್ಲ! ಇದಕ್ಕೊಂದು ಅಪವಾದವೆಂಬಂತೆ ಕವಿಯು 'ಜೀವನದಿ', ಕವನದಲ್ಲಿ 'ಬಯಲು ಸೀಮೆಯ ಸೇರಿ ಸರಸವಾಡಿ ಸಾಗರ ಸೇರಲು' ಹೊರಟ ನದಿಯೊಂದು ಬವಣೆಯನ್ನು ಬಣ್ಣಿಸಿದ್ದಾರೆ. ಆದರೆ ಇಲ್ಲಿಯೂ ಕವಿ ಬೆಟ್ಟ-ಕೊಳ್ಳ-ನದಿಗಳ ರೂಪಕಗಳ ಮೂಲಕ ಹೆಣ್ಣಿನ ಶೋಷಣೆಯ ಸೂಕ್ಷ್ಮ ಚಿತ್ರವನ್ನೇ ಬಿಡಿಸಿಟ್ಟಿದ್ದಾರೆ.

ಕವಿ ಸನದಿಯವರು ಮೂಲತಃ ಪ್ರಕೃತಿ ಕಾವ್ಯದ ಕೈವಾರಿಗಳು. ತನ್ನ ಪರಿಸರದಿಂದ ದೂರ ಸರಿದು ಅದರ ಸೊಬಗನ್ನು ನೆನಪಿನ ಕಣಜದಿಂದ ಎತ್ತಿಕೊಂಡು ಬರೆಯುವುದು ಕೆಲವರ ವಿಧಾನ. ಆದರೆ ಸನದಿ ಅವರ ಕಾವ್ಯವು "ಪ್ರಕೃತಿಯಲ್ಲೇ ಮಾನವೀಯ ಗುಣಗಳ ಸತ್ವ ನೆಲೆಸಿದೆಯೆಂಬುದಕ್ಕೆ ಅವರ ಅನೇಕ ಪದ್ಯಗಳೇ ಸಾಕ್ಷಿಯಾಗಿವೆ. ಪ್ರಕೃತಿಯ ಸೌಂದರ್ಯದ ಸ್ಪರ್ಶಕ್ಕೆ ಮಾನವ ಜೀವನ ಹೊಸ ಕಳೆಯನ್ನು ಪಡೆಯಬಲ್ಲದು." ಎಂಬುದು ಕವಿಯ ಆಶಯ. ವಿಶ್ವಾಸ. ಪ್ರಕೃತಿಯ ಎಲ್ಲ ಋತುಗಳಲ್ಲೂ. ಎಲ್ಲ ಎಡೆಗಳಲ್ಲೂ ತನ್ನ ಚೆಲುವನ್ನು ನೀಡಲು. ಸಂತಸ ನೀಡಲು ಆ ಕಾರ್ಯವನ್ನೇ ಕವಿಯೂ ಮಾಡುತ್ತಾನೆ. ಜೀವನದ ಸುಖ ಸಂತೋಷಗಳು ಸಮೃದ್ಧವಾಗಲೂ ನೆರವಾಗುವ ಸೌಂದರ್ಯ ಮಿಕ್ಕ ಸೌಂದರ್ಯಕ್ಕಿಂತ ಮಿಗಿಲೆಂದು ಇನ್ನೊಂದು ಕಡೆ ಹೇಳುತ್ತಾರೆ. 'ಚಲನ' ಕವನದಲ್ಲಿ ಕವಿಯು ಮುಗಿಲಿನ ಮೋಡಗಳು ಸಾಲನ್ನು ಕಂಡು ನವಿಲು ರೋಮಾಂಚಿತವಾಗಿ ಕುಣಿಯುತ್ತದೆ. ಮೋಡಗಳು ತಮ್ಮ ಮಳೆಯನ್ನೆಲ್ಲ ಸುರಿದಾಗ ಹೇಗಿರುತ್ತದೆಂದು ತಿಳಿಸಿದ್ದಾರೆ.

"ಮುಗಿಲ ಬರಿದಾಗೆ, ಬಯಲು

ಹಸಿರುಟ್ಟು ಕುಣಿಯುವುದು ಅದಕು ಮಿಗಿಲು।"

ಬೆಳಕು ಹೇಗೆ ಜೀವನದ ಹೊಸತನದ ಸಂಕೇತವೋ ಹಾಗೆ ಮಧು ಕೂಡ ಜೀವನದ ಪ್ರೀತಿಯ ಸಂಕೇತವೆನಿಸಿದ ಮಧು ಮಾಧವಿಯಲಿ ತುಂಬಿದ ಮಧುವನ್ನು ಪ್ರಸ್ತಾಪಿಸುತ್ತ ಕವಿ ಈ ರೀತಿ ಬರೆದಿದ್ದಾರೆ.

"ಜೀವನದಲಿ ಮಧುವಿದೆಯೆಂದೇ

ಜೀವಿ ಜೀವಿಗಳ ಸಮ್ಮಿಲನ"

ಪ್ರಕೃತಿಯಿಂದ ನಾವು ಹಲವಾರು ಸಂಗತಿಗಳನ್ನು ಕಲಿತುಕೊಳ್ಳಬಹುದಾಗಿದೆ. ನಿಸರ್ಗ ನೀಡಿದ ನೀತಿಯೊಂದನ್ನು ಕವಿ ಸನದಿ ತಿಳಿಸಿದ್ದಾರೆ. 'ಮರವಾಗಿ ನೂರು ವರ್ಷ ಬಾಳುವುದಕ್ಕಿಂತ, ಮಲ್ಲಿಗೆಯಾಗಿ ಒಂದು ದಿನ ಅರಳುವುದು ಒಳ್ಳೆಯದು'.[೪] ಬೆನ್‌ಜಾನ್ಸನ್‌ನ ಪದ್ಯವೊಂದರ ಸಮರ್ಥ ಅನುವಾದ ಇದಾಗಿದ್ದು ಕಿರಿದರಲ್ಲೆ ಜೀವನವು ಒಮ್ಮೊಮ್ಮೆ ಸಾರ್ಥಕವಾಗುವುದು ಎಂದು ಈ ಪ್ರಕೃತಿ ನಮಗೆ ಮಲ್ಲಿಗೆಯ ಮೂಲಕ ತಿಳಿಸುತ್ತದೆ.

ಒಂದು ಉಚಿತ ರೂಪಕವನ್ನು ವಿವರಪೂರ್ಣವಾಗಿ ರೂಪಿಸಿದ ಕವಿಯ ಕಲಾಸಿದ್ಧಿ ಹೃದ್ಯವೇ ಆಗಿದೆ. ಪ್ರಣಯ ಮಿಲನದ, ಸರಸ-ವಿರಸದ ಮಾನವೀಯ ಭಾವವೇಶವನ್ನು ಪ್ರಕೃತಿ ಸೌಂದರ್ಯದ ಒಂದು ದೃಶ್ಯದೊಡನೆ ಸಂಯೋಜಿಸಿದ್ದು ಗಮನಾರ್ಹವಾಗಿದೆ. ಅದರಂತೆಯೇ "ದುರಂತ" ಕವನದಲ್ಲಿ ದುರ್ಬಲ ಜೀವಿಗಳ ಮೇಲೆ ನಡೆಯುವ ದೌರ್ಜನ್ಯವನ್ನು ಚಿತ್ರಿಸಲು ಪ್ರಾಕೃತಿಕ ರೂಪಕ ಮಾಲೆಯೊಂದನ್ನು ಬಳಸಿಕೊಳ್ಳಲಾಗಿದೆ.

ಊರ ಹೊರಗಿನ ಜಂಟಿ ಮುಳ್ಳುಗಂಟೆಯ ಮೇಲೆ ಅರಳಿ ನಿಂತ "ಚದುರಂಗಿ" ಹೂವನ್ನು ಕುರಿತು ಹೃದಯ ತುಂಬಿ ಹಾಡಿಕೊಂಡರೂ ಕವಿಯ ಮನದಲ್ಲೊಂದು ಸಾಮಾಜಿಕ ಕಳಕಳಿಯ ಪ್ರಶ್ನೆ ಮೂಡಿಯೇ ಮೂಡುತ್ತದೆ. ಅದು ಹೀಗಿದೆ:

"ನಿನ್ನೀ ಪಾಡನ್ನು ನೋಡುತಲಾನು

ಜಗದೆದುರೀ ಮಾತೆತ್ತುವನು:

ಬಿದ್ದವರೆತ್ತುವ ಚೇತನೆ ಬಿತ್ತುವ

ಕೆಲಸಕ್ಕೆ ಕೈಯಿಡೆ ತಪ್ಪೇನು?"

ಊರಾಚೆಗಿರುವ ಬೇಲಿಯ ಮೇಲಿನ "ಚದುರಂಗಿ"ಯೇ ಆಗಲಿ ಇವರ ಕವನ-ಪವನದ ನಡುನಡುವೆ ಅರಳಿನಿಲ್ಲುವ ಮಲ್ಲಿಗೆ, ಗುಲಾಬಿ, ಸಂಪಿಗೆ, ಸೂರ್ಯಪಾನಗಳಾಗಲೀ ಮನುಷ್ಯ ಜೀವನದ ವಿಕಾಸ-ವಿಸ್ತಾರಗಳ ಸಂಕೇತಗಳಾಗಿಯೇ ಮೂಡಿ ನಿಲ್ಲುತ್ತವಲ್ಲದೆ ಕವಿಮನವನ್ನು ಸಮಾಜ ವಿಮುಖತೆಗೆ ಪ್ರೇರೇಪಿಸುವ ಪ್ರಕೃತಿಯ ಪ್ರತೀಕಗಳಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

He is a Lyrical Poet of No ordinary ability ಎಂಬ ಪ್ರೋ. ರಾಘವೇಂದ್ರರಾಯರ ಬಣ್ಣನೆಗೆ ಪಾತ್ರವಾದ ಸನದಿಯವರ "ನೈನಿತಾಲ" ಕವನದಲ್ಲಂತೂ ಸುಂದರ ಪ್ರಕೃತಿ ಸೌಂದರ್ಯದ ಉಲ್ಲಾಸದೊಡನೆ ಮನುಷ್ಯ ಸ್ವಭಾವದ ವಿಪರ್ಯಾಸವನ್ನೆತ್ತಿ ತೋರಿಸದೆ ಈ ಕವಿ ವಿರಮಿಸಲಾರ. ಸುತ್ತಲೂ ಮೈಚಾಚಿದೆ ಪ್ರಾಕೃತಿಕ ಪರಿಸರ. ನಿಜ ಅದನ್ನು ಸವಿಯುವ ಈ ಕವಿ ಮನವೂ ವಿವೇಕದಾಗರವಾಗಿ ತೋರುತ್ತದೆ. ನೈನಿತಾಲ ಎತ್ತರ ಪ್ರದೇಶದಲ್ಲಿರುವ ಒಂದು ಸುಂದರ ಗಿರಿಧಾಮ. ಅಲ್ಲಿಯ ಪ್ರಾಕೃತಿಯ ಪರಿಸರವನ್ನು ಕಣ್ಣಿಗೆ ಕಟ್ಟುವಂತೆ ಲಾಲಿತ್ಯ ಪೂರ್ವವಾಗಿ ಬಣ್ಣಿಸುವ ಮೊದಲೇ ಕವಿ ಕೊಡುವ ಎಚ್ಚರಿಕೆ ಅವರ ಸೌಂದರ್ಯ ಪ್ರಜ್ಞೆಯ ಅಂಚಿನಲ್ಲಿರುವ ಮಾನವೀಯ ಕಾಳಜಿಗೆ ಕನ್ನಡಿ ಹಿಡಿಯುತ್ತದೆ.

"ಇಲ್ಲಿ ಒಂದೊಂದು ಮುಖ
ಒಂದೊಂದು ಸುಖ
ಹೂ ನೋಡಿ
ಹೂವಿನೊಲು ಹೃದಯ ಹಗರಾಗಿಸಲು
ಯಾಕೆ ವಿಮುಖ?
ಹೂಂ ಅಷ್ಟೇ ಸಾಕು ಕಣಯ್ಯ
ನಿನ್ನ ದೃಷ್ಟಿಗೆ ಸೋತು
ತಪ್ಪಿ ಮುನ್ನುಡಿಯಿಟ್ಟೆಯೋ
ಎದುರಿಗೇ ಕಂದರವು!
ಹೆಜ್ಜೆ ತಪ್ಪಿದ ರೊಮ್ಮೆ
ಮೇಲೆದ್ದು ಬರುವುದಕ್ಕೆ ಬಾರದಯ್ಯ!
ಇಲ್ಲಿ ಬರಬಾರದಯ್ಯ"

ಆರಂಭದ ಘಟ್ಟದಲ್ಲಿ ಬೇಂದ್ರೆ ಅವರ ಜಾಡಿನಲ್ಲಿ ನಡೆದ ಈ ಕವಿ, ವರ್ಷಾಕಾಲವನ್ನು ಕಾವ್ಯ ಸ್ಫೂರ್ತಿಗೆ ಬಳಸಿಕೊಂಡಿದ್ದಾರೆ. ಕಾವ್ಯದ ಉದಯಕ್ಕಾಗಿ ಕವಿಯ ಕುತೂಹಲ ಕೆರಳುತ್ತದೆ. ದೈವೀಕೃಪೆ, ಅವಿರತ ಸಾಧನೆ, ಬದುಕಿನ ಸಂಘರ್ಷ, ಬಡತನ, ದಲಿತಾನುಕಂಪನ, ಈ ಒಂದೊಂದು ಧ್ವನಿಗಳಲ್ಲಿ ನಿಸರ್ಗವೂ ಒಂದು ಮಾರ್ದನಿಯಾಗಿ ತನ್ನ ಸ್ವರವನ್ನು ಕೆರಳಿಸುತ್ತದೆ.

ಪ್ರಕೃತಿ ಮಾನವ ಬದುಕಿಗೆ ತನ್ನದೇ ಆದ ಸಂಸ್ಕಾರವನ್ನುಂಟು ಮಾಡಬಲ್ಲುದು. ವರ್ಷಾವತರಣ ಭೂಖಂಡದ ಮೇಲಾಗುವ ಅತ್ಯಪೂರ್ವ ಸಂಸ್ಕಾರವೆಂಬ ಭಾವನೆ ಕವಿಯಲ್ಲಿದೆ. ಇದು ಸನದಿಯವರ ಕವಿ-ಕೃತು-ದರ್ಶನಗಳಲ್ಲೊಂದಾಗಿದೆ.[3] ಬಾಹ್ಯ ಪ್ರಕೃತಿ ಹಾಗೂ ಅಂತರಂಗ ಪ್ರಕೃತಿಗಳೆರಡರ ಅನ್ಯೋನ್ಯ ಪ್ರಭಾವ ಕವಿತೆಯಲ್ಲಿದೆ. ಈ ಲೋಕದಿಂದಲೇ ಆ ಲೋಕಕ್ಕೆ ಮೋಡ

ಪಯಣಿಸುತ್ತದೆ. ಈ ಜಲವರ್ತನೆ ಕ್ರಿಯೆಯನ್ನು ನವ್ಯಶೈಲಿ, ನವೋಪಮೆಗಳಲ್ಲಿ ವರ್ಣಿಸಿದ ರೀತಿ ಹೀಗಿದೆ:

"ಕದಲ ಕೈಕುಲುಕಿ ಬಿಸಿಲ ಕೋಲ್
ಆಕಾಶದಾ-ದೇಶಗಳ ದಾರಿ ಹಿಡಿದಿತ್ತು.
ಮೋಡಗಳ ಮಾಲು"

ಮೋಡಗಳು ಇಲ್ಲಿಂದ ಸಾಗಾಟಗೊಳಸಲಾದ ಒಂದು ಸರಕು. ಆ ಸರಕೇ ಮತ್ತೆ ಈ ಲೋಕದ ಗ್ರಾಹಕನಿಗೆ ಮಳೆಯ ರೂಪದಲ್ಲಿ ಬಂದು ಪ್ರಾಪ್ತಿಸುತ್ತದೆ. ಕವಿ ಸನದಿಯವರಿಗೆ ಸೂರ್ಯ, ಸೂರ್ಯೋದಯಗಳೆಂದರೆ ತುಂಬ ಪ್ರೀತಿ. ಇಂದು ಮೂಡಿದ ಸೂರ್ಯ, ಇಡೀ ಪ್ರಪಂಚದ ಬದುಕಿಗೆ ಹೊಸ ಸೂರ್ಯನಾಗಿದ್ದಾನೆ. ಏಕೆಂದರೆ ಈ ಬೆಳಕಿನೊಂದಿಗೆ ಹೊಸ ದಿನವೊಂದನ್ನು ಅವನು ಅರಳಿಸಿದ್ದಾನೆ. ಈ ಚೈತ್ರೋದಯವು ಪ್ರಕೃತಿಗೆ ಹೇಗೋ ಹಾಗೆ ಜೀವನಕ್ಕೂ ಹೊಸತವನ್ನು ತಂದು ತುಂಬಬೇಕೆಂದು ಕವಿ ಹಾರೈಸುತ್ತಾನೆ. ಕವಿಯು ಪ್ರಕೃತಿಯ ಇಂಥ ರಸಚಿತ್ರಗಳನ್ನು ನೀಡುವುದರ ಉದ್ದೇಶವೇನು? ಎಂದು ಯಾರಿಗಾದರೂ ಅನಿಸಬಹುದು. ಅದಕ್ಕೆ ಕವಿಯೇ ಈ ರೀತಿ ಉತ್ತರಿಸಿದ್ದಾನೆ.

"ಸೌಂದರ್ಯ ಸಂಚಯದೀ ಸವಿ ಅನುಭವ
ಸೋಗವೀಯುತ್ತಿರೆ ಮನ್ಮನಕೆ,
ಜಗವೀ ಸೊಗವುಣಲದೆ ಹೊಸ ಕಳೆಯನು
ಬೆಳೆಯದೆ ಮಾನವ ಜೀವನಕೆ?"

ಈ ಸೌಂದರ್ಯದ ಸ್ಪರ್ಶಕ್ಕೆ ಮಾನವ ಜೀವನ, ಹೊಸ ಕಳೆಯನ್ನು ಪಡೆಯಬಲ್ಲುದು ಎಂದು ಕವಿಯ ವಿಶ್ವಾಸ. ಪ್ರಕೃತಿಯ ಎಲ್ಲ ಋತುಗಳಲ್ಲೂ ಎಲ್ಲ ಎಡೆಗಳಲ್ಲೂ ತನ್ನ ಚೆಲುವನ್ನು ಅರಳಿಸುವುದು ಈ ಮಾನವನ ಬದುಕಿಗೆ ಹೊಸತನ ನೀಡಲು ಸಂತಸ ನೀಡಲು ಆ ಕಾರ್ಯವನ್ನೇ ಕವಿಯು ಮಾಡುತ್ತಾನೆ. ಧ್ರುವಬಿಂದುವಿನಲ್ಲಿ ಕವಿ ಪ್ರಕೃತಿಯನ್ನೂ, ಜೀವನದ ಧ್ರುವಸ್ವಪ್ನಗಳನ್ನೂ ಬಣ್ಣಿಸುತ್ತ, ಸೌಂದರ್ಯದ ತಾತ್ವಿಕ ಅನ್ವೇಷಣೆಯನ್ನು ಕೈಗೊಂಡಿದ್ದಾರೆ. ಪ್ರಕೃತಿ ವರ್ಣನೆಯ ಮಾನವೀಯ ಆಯಾಮವನ್ನು ಪ್ರಸ್ತಾಪಿಸಿದ ಪದ್ಯಗಳಲ್ಲಿ, ಕವಿ ಸನದಿ, ತಮ್ಮ ಕಾವ್ಯ ಪ್ರತಿಭೆಯ ಭಾವಗೀತಾತ್ಮಕ ಗುಣಾಂಶವನ್ನು ಅಭಿವ್ಯಕ್ತಿಸಿದ್ದಾರೆ. "ಇಬ್ಬನಿಯ ಹಾಡು" ಇನ್ನೊಂದು ಸುಂದರ ಪ್ರಕೃತಿ ಪದ್ಯ. ಹಸಿರು ಹುಲ್ಲಿನ ಮೇಲೆ ಎಸಳು ಎಸಳಿನ ಬೆರಳಿಗೂ ಹರಳಿನುಂಗುರವಿಟ್ಟಿದೆ ಇಬ್ಬನಿ. ರವಿ ಇದರ ಎದೆಯೊಳಾಸರೆ ಪಡೆಯಲು ತವಕಿಸಿದ್ದಾನೆ. ತನಗೆ ಬಣ್ಣದ ಬದುಕು ಬೇಡವೆಂದರೂ ತನ್ನಲ್ಲಿ ಇಂದ್ರಚಾಪವೇ ಶರಣು ಬಂದಿದೆ. ಕವಿ ಸನದಿ ಅವರು ತಮ್ಮ ಕೆಲವು ಚಿತ್ರ ಪದ್ಯಗಳಲ್ಲಿ ಪ್ರಕೃತಿಯ ಸಂಗತಿಗಳನ್ನು ಜೀವನದ-ರಸಕ್ಷಣಗಳ ದಾಖಲೆಗಳನ್ನಾಗಿ ಪರಿವರ್ತಿಸುತ್ತಾರೆ.

"ಕುಕ್ಕರ ಹಳ್ಳಿ ಕೆರೆ" ಯೆಂಬ ಕವನದಲ್ಲಿ ಒಂದು ನಿಸರ್ಗ ಚಿತ್ರವನ್ನೇ ಕವಿ ಬರೆದಿದ್ದಾರೆ. ಒಬ್ಬ ಕಲಾವಿದನ ಕುಂಚವು ಹಲವು ಬಣ್ಣಗಳಲ್ಲಿ ಮೂಡಿಸಿ Landscape ನಂತಿದೆ ಈ ಕವಿತೆ. ಕೆರೆಯ ಮೇಲಿನ ಹಸಿರು ಬಳ್ಳಿ, ಮುಗ್ಧ ಮಗುವಿನ ತಲೆಗೆ ಹೊದಿಸಿದ ಕುಂಚಿಕೆಯಂತಿದೆ. ಆ ಕೆರೆಯ ಬಳಿ ವಿಹಾರಕ್ಕೆ ಬಗೆ ಬಗೆಯ ಜನರು ಬರುತ್ತಾರೆ. ಮಕ್ಕಳು ಜಗವನೆ ಮರೆತು ಕೇಕೆ ಹಾಕುವರು. ಇಲ್ಲಿ ಚೆಲುವು ಹಾಗೂ ಒಲುವು ಮೇಳೈಸಿವೆ. ಕ್ರಮೇಣ ಕವಿಯ ಮನಸ್ಸು ಮಿಡಿದದ್ದು ಅಲ್ಲಿ ಬಂದು ಹೋದವರ ಭಗ್ನ ಮನೋರಥದ ಉದ್ವಿಗ್ನತೆಗೆ ಹೊರತು, ಬರಿ ಅಲ್ಲಿಯ ನಿಸರ್ಗ ಸೌಂದರ್ಯಕ್ಕೆ ಅಲ್ಲ!

ನಮ್ಮ ಇಂದಿನ ಕವಿಗಳಲ್ಲಿ ಪ್ರಸ್ತುತ ಸಾಮಾಜಿಕ ಸಂದರ್ಭಗಳಲ್ಲೂ ಸಮಶ್ರುತಿ ಹೊಂದಿದ ನಿಸರ್ಗದ ಚಿತ್ರಗಳನ್ನು ಸನದಿ ಅವರಂತೆ ಕಲಾತ್ಮಕವಾಗಿ ನೀಡಿದವರು ವಿರಳ. ನಿಸರ್ಗದ ಜಡಜಡವೂ ಜೀವ ಪಡೆದು ಸಂಭ್ರಮಿಸುವಾಗ, ಜೀವನಗಳು ಜಡಗೊಳ್ಳುತ್ತಿರುವುದು ಮಾತ್ರ ದೌರ್ಭಾಗ್ಯದ ಕುರುಹಾಗಿದೆ. ನಿಸರ್ಗಾನುಭೂತಿಯಿಂದ ಕಾವ್ಯರಚನೆಗೆ ತೊಡಗಿದ್ದ ಕವಿಯೇ ಇಲ್ಲಿ ಕವಿತೆಯ ತಿರುಳಿಗೆ ಕೇವಲ ಬೆಳಕು-ಬೈಗು, ಸಾಗರ, ಗಿರಿಪಂಕ್ತಿ, ಮೇಘಮಾಲೆ, ಮಿಂಚು, ಕಾಮನಬಿಲ್ಲುಗಳು ವಸ್ತುವಾಗುವವೇ? ಎಂದು ಪ್ರಶಸ್ನಿಸುತ್ತಾನೆ. ಕವಿಯ ವಾಸ್ತವ ದೃಷ್ಟಿಯ ವಿಸ್ತಾರಕ್ಕೆ ಹಲವಾರು ಕವನಗಳು ಸಮರ್ಥನೆಯನ್ನು ನೀಡುತ್ತವೆ.

ಈ ಕವಿಗೆ "ಚೆಲುವಿಗಿಂತೆನಗಧಿಕತರವೀ ಬದುಕಿನೊಲವೆ" ಎಂಬ ಛಲ. ಇದಕ್ಕೆ ಕಾರಣ ಕವಿಯು ತನ್ನ ಅನುಭವದಿಂದಲೇ ಕಲಿತ ಪಾಠವೇ ಸಾಕ್ಷಿಯಾಗಿದೆ.

ಹಾಗೆಯೇ ಜೀವಹಾನಿಯಿಂದ ಈ ಕವಿ ತಳಮಳಗೊಳ್ಳುವ ಪರಿಯನ್ನು ಇವರ 'ನೆಲಸಂಪಿಗೆ'ಯ 'ಬಾಃ ಸಾಕ್ಷಿ'ಯಲ್ಲೂ ವಿವರಪೂರ್ಣವಾಗಿ ಚಿತ್ರಿಸಲಾಗಿದೆ. ಇಂಥ ಮಾನವೀಯ ಕಾಳಜಿಯುಳ್ಳ ಕವಿಗೆ ಪ್ರಕೃತಿಯಲ್ಲೂ ವಿಕೃತಿಗಳು ಕಂಡು ಬರುವುದು ಆಶ್ಚರ್ಯಕರವೇನಲ್ಲ. ಗಾಳಿಯೊಡದ ತೊಟ್ಟಿಲು ತೂಗುತ್ತಿದ್ದಾಗ ಬೆಟ್ಟಗಳೆದ್ದು ಅಡ್ಡಗೋಡೆ ಕಟ್ಟಿದಂತೆ, ನಿದ್ದೆಯಲ್ಲಿದ್ದ ಶಾಂತವಾಗಿರುವ ಸಾಗರದ ಶಿಶುವಿಗೆ ಗುಡುಗು ಪೀಡೆಯ ಕೊಟ್ಟು ಕಾಡಿಸಿದಂತೆ, ಗುಡ್ಡವು ಮೋಡಗಳನ್ನು ಕೆಣಕೆಣಕಿ ಕಣ್ಣೀರು ಸುರಿಸುವ ಹಾಗೆ ಮಾಡುವಂತೆ ಈ ಕವಿಗೆ ಕಾಣುತ್ತದೆ.

ಈ ಕವಿಗೆ ಆಕಾಶದ ಕರುಣೆಯಂತೆ ನೆಲದಾಳದ ತೇವಿನ ಸಂಸ್ಮರಣೆಯೂ ಪ್ರೀಯವಾದದ್ದಾಗಿದೆ. ಈ ನೆಲದೊಲವಿಗಾಜ್ಞೆ ತೋರಿಸಿ ಆಗಸದಾಚೆಗೆ ದಿಟ್ಟಿ ತೂರುವ ವ್ಯಾಮೋಹ ಮಾತ್ರ ಇವನಿಗೆ ಸೇರದ್ದು. ಪ್ರಕೃತಿ ಪ್ರೇಮದ 'ಹಸಿರು ಭಾವನೆಯಲ್ಲಿ ಕೆಂಪು ಕಲ್ಪನೆ'ಯರಳಿಸುವ ದೃಷ್ಟಿ ಈ ಕವಿಯ ಜೀವದ್ದು. ಸನದಿಯವರ ಕಾವ್ಯದಲ್ಲಿ ಪ್ರಕೃತಿಯ ರಮಣೀಯ, ರೌದ್ರತೆಯ ನಡುವೆಯೂ ಜನ ಜೀವನದ ಯಾತನೆ ಯೋಚನೆಗಳ ನೆನಪು ಮರೆಯಾಗುವುದಿಲ್ಲವೆಂಬ ಸಂಗತಿ ಗಮನಾರ್ಹವಾಗಿದೆ. ಇವರು ಪ್ರಕೃತಿಯ ಕುರಿತು ಬರೆದ ಬಹುತೇಕ ಕವನಗಳ ಅಂತರಾಳದಲ್ಲೂ ಸಾಮಾಜಿಕ ಚಿಂತನೆಯ ಲಹರಿಯೊಂದು ಹರಿಯುತ್ತಲೇ ಇರುತ್ತದೆ. ಸನದಿಯವರ 'ಪರಿಸರ'ಕ್ಕೆ

ಬಹಳ ವಿಶಾಲವಾದ ಅರ್ಥವಿದೆ. ಪ್ರಾಕೃತಿಕ ಪರಿಸರ ಅದರ ಅಂಗ ಮಾತ್ರ. ಸರ್ವಾಂಗೀಣವಾದ ಪರಿಸರವನ್ನು ನೆಲ ಮುಗಿಲುಗಳನ್ನು ಅಳೆಯುವ ಅನಂತ ಅವಕಾಶದಲ್ಲಿ ವ್ಯಾಪಿಸಿರುವ ವಿಶ್ವರೂಪಿಯಾಗಿ ಅವರು ಕಂಡುಕೊಳ್ಳುತ್ತಾರೆ. ಮೂರ್ತವಾಗಿರುವ ಭೌಗೋಳಿಕ ಪರಿಸರವನ್ನು ಆಶ್ರಯಿಸಿಯೇ ಮನುಷ್ಯನ ಭಾವನಾತ್ಮಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಬೌದ್ಧಿಕ ಪರಿಸರವು ಪುಷ್ಟಿಗೊಳ್ಳುತ್ತದೆ. ಇಲ್ಲಿ ಪೋಷಣೆ ಕಾಣದೆ ಬಲಹೀನವಾಗುತ್ತದೆ ಎನ್ನುವ ಸ್ವಸ್ಥ ಮನೋಭಾವವು ಅವರ ಪ್ರಕೃತಿ ಪ್ರಧಾನ ಕವನಗಳ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿರುವುದನ್ನು ಕಾಣುತ್ತಿದ್ದೇನೆ.

೪:೪ ನಗರ ಕಾಳಜಿ.

ಬಿ.ಎ. ಸನದಿಯವರು ಅಸಾಮಾನ್ಯರಲ್ಲಿ ಸೇರಿಹೋದ ಸಾಮಾನ್ಯರಲ್ಲ, ಸಮಾನ್ಯರಿಗಿಂತ ಮಿಗಿಲಾದ ವಿಶೇಷತೆಯುಳ್ಳ ಗುಣ ವಿಶಿಷ್ಟರಾಗಿದ್ದಾರೆ.

"ನಾನೇನೋ ಸಾ

ಮಾನ್ಯ ಪ್ರಜೆ

ಅಸಾಮಾನ್ಯರ ಸಾಲಿನಲ್ಲಿ ನಿಲ್ಲುವಂಥವನಲ್ಲ".

ಸನದಿಯವರು ತಮ್ಮ ಸಮಗ್ರ ಕಾವ್ಯದಲ್ಲಿ ನಮ್ಮನ್ನೇ ನಾವು ಗುರುತಿಸಿಕೊಳ್ಳುವಂತೆ True measure of ourselves ಧಾರಾಳವಾಗಿ ನೀಡಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಬೆಳೆದ ಕವಿ ತಮ್ಮ ವೃತ್ತಿ ಜೀವನದಿಂದಾಗಿ ಹಲವು ನಗರಗಳಲ್ಲಿ ತಮ್ಮ ಬದುಕನ್ನು ಕಳೆಯಬೇಕಾಗಿ ಬಂದಾಗ, ಅದರಲ್ಲಿಯೂ ಮುಂಬೈಯಂಥ ಮಹಾನಗರಕ್ಕೆ ಬಂದಾಗ ಸಹಜವಾಗಿಯೇ ಅವರ ಮನದಲ್ಲಿ ಬೇರು ಬಿಟ್ಟಿದ್ದ ಹಳ್ಳಿಯ ಸಂವೇದನೆಗಳು ದಿಗ್ಭ್ರಮೆಯನ್ನು ಎದುರಿಸಬೇಕಾಗುತ್ತದೆ. ಅದರ ಫಲವಾಗಿ ಅವರು ಅನುಭವಿಸಿದ ತಲ್ಲಣಗಳೇ ಅವರ 'ಮುಂಬೈ ಮಳೆ', 'ಸೀಮಾಂತರ' ಮುಂತಾದ ಕವನ ಸಂಕಲನಗಳಲ್ಲಿ ಮೈದಳೆದಿವೆ.

ಮುಂಬಯಿಯಂಥ ಮಹಾಸಿಂಧುವಿನಲ್ಲಿ ಬಿಂದುವಾಗಿ, ಅಸ್ತಿತ್ವವನ್ನೇ ಕಳೆದುಕೊಳ್ಳುವ ಭಯದ ನೆರಳಿನಲ್ಲಿ ಬದುಕುವ ಪ್ರತಿ ಜೀವಿಯೂ ಅಸಹಾಯಕತೆ, ಭಾವದಾರಿದ್ರ್ಯ, ಒಂಟಿತನ, ರಸಾರ್ದ್ರ, ಕಾತರಗಳನ್ನು ಸಹಜವಾಗಿಯೇ ಅನುಭವಿಸುತ್ತಾನೆ. ಇಂಥ ಗಾಢವಾದ ನಗರ ಪ್ರಜ್ಞೆಯನ್ನು ಸನದಿಯವರ ಕಾವ್ಯ ಕೆಲವೊಮ್ಮೆ ನೇರವಾಗಿ ಒಪ್ಪಿಕೊಳ್ಳುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಅದರ ದಟ್ಟ ಛಾಯೆಯು ಕವನಗಳುದ್ದಕ್ಕೂ ಹರಡಿಕೊಂಡು ಸಂಕೀರ್ಣ ಪ್ರಪಂಚವೊಂದನ್ನು ಸೃಷ್ಟಿಸುತ್ತದೆ. ಮಹಾನಗರದ ಅಲ್ಲಿನ ರಾಜಕಾರಣದಲ್ಲಿ ಜನರ ಗೋಸುಂಬೆತನವನ್ನು ಅವರ 'ಗೋಸುಂಬೆ' ಕವನ ಚಿತ್ರಿಸುತ್ತದೆ.

ಹೀಗೆ ನಗರ ಪ್ರಜ್ಞೆ ಅದರ ಪ್ರತಿಯೊಂದು ಕೃತಕ ಆವರಣವನ್ನು ಗುರುತಿಸುತ್ತ ಅದನ್ನು ಕಳಚುವ ಪ್ರಯತ್ನದಲ್ಲಿ ತೊಡಗುತ್ತದೆ. ಇಂದಿನ ಬದುಕಿನಲ್ಲಿ ನಷ್ಟವಾಗುತ್ತಿರುವ ಜೀವಂತಿಕೆ

ತೀವ್ರವಾಗಿ ಕಾಡುವ ಇಬ್ಬಂದಿತನ ಹಾಗೂ ನಮ್ಮ ಕಾಲಿನ ಕೆಳಗೆ ಗಮನವೇ ಇಲ್ಲದ ಅವಜ್ಞೆಗಳು ಇವರ ಕವಿತೆಗಳಲ್ಲಿ ಮಾರ್ದನಿಗೊಳ್ಳುತ್ತದೆ ಎನ್ನುವ 'ಡಾ॥ ತಾಳ್ತಜೆ ವಸಂತಕುಮಾರ'ರ ಮಾತುಗಳು ಸನದಿಯವರ ಕವಿತೆಗಳಲ್ಲಿನ ನಗರ ಪ್ರಜ್ಞೆಗೆ ಕನ್ನಡಿ ಹಿಡಿಯುತ್ತವೆ.[6] ಆದ್ದರಿಂದ ತಮ್ಮ ಕಾವ್ಯ ಜೀವನದ ಮೊದಲ ಘಟ್ಟದಲ್ಲೇ ತಮ್ಮ ಮನದನ್ನೆಗೆ ತಮ್ಮ ಹಳ್ಳದ ಹೊಲದ ಸೊಬಗನ್ನು ತೋರಿಸುತ್ತ ಇಂದು ನಗರದೊಳಿದ್ದು ಹೊತ್ತು ಬಂದರೆ ನಾಳೆ ಈ ನೆಲಕೆ ಹಣೆ ಹಚ್ಚಿ ದುಡಿವ ಪಣಗೈವುದು ಅವಮಾನವಲ್ಲ ಎಂದು ಮರಳಿ ಮಣ್ಣಿಗೆ ಬರುವ ನಿಲುವನ್ನು ತಳೆದಿರುತ್ತಾರೆ.

ಹೊಸ ಕ್ಷಿತಿಜ ಕರೆದತ್ತ ಕೈಬೀಸಿ ನಡೆಯುವ ಕವಿ ಬದುಕಿಗೆ ವಿಮುಖನಾಗಿ ಪಲಾಯನ ಮಾಡುವವನಲ್ಲ. ಅವರ ಜನಾನುರಾಗ ಅಪಾರ. ಜೀವನಾನುರಾಗ ಅದಮ್ಯ. ಆದರೆ ಮನುಷ್ಯ-ಮನುಷ್ಯನನ್ನು ಗುರುತಿಸಲಾಗದ ನಗರ ಜೀವನವೆಂದರೆ ಕವಿಗೆ ಬೇಸರ. ನಗರದ ಉಸಿರುಗಟ್ಟುವ ವಾತಾವರಣದಲ್ಲಿರುವಾಗ ಅವರಿಗೆ ಗ್ರಾಮಾಂತರ ಜೀವನದ ಸ್ಮರಣೆಯೇ ಹೊಸ ಕ್ಷಿತಿಜ ಸಂಕೇತವಾಗಿ ನಿಲ್ಲುತ್ತದೆ. ಇವರ 'ಯಾವ ಮೋಹನ ಮುರಳಿ ಕರೆಯಿತೋ', ಎಂಥಬದುಕು', 'ನಿರ್ಗಮನ', 'ಬೊಂಬಾಯಿ ಬೆಂಕಿ', 'ಸಾಕು', ಸಂಬಂಧಗಳು', 'ಗಾಂಧಿ ರಸ್ತೆಯ ಬದಿಗೆ', 'ಎಲಾ ಶ್ರಾವಣದ ಮೋಡ', ಇತ್ಯಾದಿ ಕವನಗಳಲ್ಲಿ ಈ ಕವಿಯ ನಗರ ಪ್ರಜ್ಞೆಯ ವಿವಿಧ ಆಯಾಮಗಳನ್ನು ಗುರುತಿಸಬಹುದಾಗಿದೆ.

'ನಗರ ನಿನಗೆ ಗರ ಹೊಡೆದಿಹುದೆ?' ಎಂದು ಪ್ರಶ್ನಿಸುವ 'ನಿರ್ಗಮನ' ಎಂಬ ಕವನ ಹೃದಯ ಸ್ಪರ್ಶಿಯಾಗಿದೆ. ಇಂಥ ನಗರ ಜೀವನಕ್ಕೆ ಬೇಸತ್ತು ಗ್ರಾಮಾಳಿಗೆ ಹೊರಟ ಕವಿ ಮತ್ತೆ ನಗರವನ್ನೇ ಸೇರಬೇಕಾದ ಪ್ರಸಂಗ ಬಂದಾಗ ಮಾಡುವುದೇನು? ಕವಿ ಮುಂಬಯಿ ನಗರದಲ್ಲಿ ಕಂಡುಂಡ ಅನುಭವಗಳನ್ನು 'ಮುಂಬೈ ಮಳೆ'ಯ ಹನಿಗಳಲ್ಲಿ ಬಲು ಕಲಾತ್ಮಕವಾಗಿ ಹಿಡಿದಿಟ್ಟಿದ್ದಾರೆ. ಇವರ 'ಸಂಬಂಧಗಳು' ಕವನದಲ್ಲೂ ನಗರದ ಚಿತ್ರ-ವಿಚಿತ್ರ ಯಂತ್ರ ವ್ಯವಸ್ಥೆಯ ಕುರಿತಾದ ಕಳವಳವನ್ನು ಪ್ರಕಟಪಡಿಸಿದ್ದಾರೆ.

ಮನುಷ್ಯರು ನಟ್ಟು-ಬೋಲ್ಟುಗಳಿಂದ ಜೋಡಿಸಲ್ಪಟ್ಟ ಮಷಿನುಗಳಂತೆ ಚಲಿಸುವ ಜೀವನವೊಂದು ಜೀವನವೆ! ಹೊತ್ತುಗೊತ್ತು ಯಾವುದೂ ಗೊತ್ತಿಲ್ಲದಂತೆ ಧಾವಿಸುತ್ತಲೇ ಇರುವ ಇಲ್ಲಿಯ ಬದುಕಿನ ಬಂಡಿಗೆ ಬ್ರೇಕೂ ಇಲ್ಲ. ಬೋಲ್ಟೂ ಇಲ್ಲ ಎಂಬ ಅಭಿಪ್ರಾಯವನ್ನು ಕವಿ ವ್ಯಕ್ತಪಡಿಸಿದ್ದಾರೆ.

ನಗರ ಜೀವನದ ವೇಗ-ಆವೇಗಗಳ ಸಂಕ್ಷಿಪ್ತ ಚಿತ್ರ. ಮೈ-ಮನಗಳು. ರುಂಡ-ಮುಂಡಗಳು ಪರಸ್ಪರ ತಪ್ಪಿಕೊಂಡು ಪರಸ್ಪರ ಹಿಂದೆ ತಮಗರಿಯದಂತೆಯೇ ಧಾವಿಸುತ್ತಿರುವ ಧಾವತಿಯ ಬದುಕು ಇವರ ಅನೇಕ ಕವನಗಳಿಗೆ ಗ್ರಾಸವೊದಗಿಸಿದೆ. 'ನಿರ್ಗಮನ' ದತ್ತ ಮತ್ತಷ್ಟು ಗಮನ ಹರಿಸಿದರೆ ನಗರದ ಬಣ್ಣದ ಬದುಕಿನ ಪದರು-ಪದರುಗಳು ನಮ್ಮ ಕಣ್ಣೆದುರು ಕಟ್ಟುತ್ತವೆ. ಕವಿ ಇದಕ್ಕೆ 'ನಗರವೆಂಬುವ ನಾಡು' ಎಂದು ಕರೆದಿದ್ದಾರೆ. ನೂರಾರು ಮಾದರಿಯ ಸಂಕೇತಗಳಿಂದ ನಗರದ

ರುಕ್ಷ. ಹೃದಯಹೀನ ಬದುಕನ್ನು ಕವಿಯು ಎದೆ ಬಿಚ್ಚಿ ದಾಖಲಿಸುತ್ತಾನೆ. ನಗರದ ವೈಫಲ್ಯ ಹಾಗೂ ವೈವಿಧ್ಯದಲ್ಲೂ ಕವಿಗೊಂದು ಬಗೆಯ ಕೊರತೆಯ ಕಳವಳ! ಎಂಬುದನ್ನು ನಾವಿಲ್ಲಿ ಅರಿಯುತ್ತೇವೆ.

ಅನುಭವ ನೇರವಾದ ಅಭಿವ್ಯಕ್ತಿಯನ್ನು ಕಂಡುಕೊಂಡೆತೆಯೇ ಸನದಿಯವರಲ್ಲಿ ತೀವ್ರವಾಗಿರುವ ನಗರ ಪ್ರಜ್ಞೆಯಿಂದ ಪ್ರೇರಿತವಾದ, ಹದಗೆಡುತ್ತಿರುವ ಮಾನವೀಯ ಸಂಬಂಧಗಳ ಬಗೆಗಿನ ಖೇದವಾಗಿ ಪರೋಕ್ಷ ನೆಲೆಯಲ್ಲೂ ವ್ಯಕ್ತವಾಗುತ್ತದೆ. ಆ ಕೊಂಡಿಗಳನ್ನು ಬೆಸೆಯಬೇಕಾದ ಅಗತ್ಯಕ್ಕೆ ಭಾಷ್ಯ ಬರೆಯುವ ಕೆಲವು ಉದಾಹರಣೆ ಸನದಿಯವರ ಕಾವ್ಯ ಕೊಡುತ್ತದೆ.

ಈ ನಗರದ ಬದುಕಿನ ಪ್ರೀತಿರಾಹಿತ್ಯದ, ವಿಕೃತಿಯ ಪರಿಣಾಮ ಹಲವಾರು ರೀತಿಗಳಲ್ಲಿ ಹೊರಹರಿವು ಪಡೆಯಬಹುದು. ಅವುಗಳಲ್ಲಿ ಒಂದು ವ್ಯಕ್ತಿಗೆ ತನ್ನ ಬೇರುಗಳೆಡೆಗೆ ತವಕವಾಗಿ ವ್ಯಕ್ತಿಗತವಾಗುತ್ತದೆ. ಈ ಮೂಲ ನೆಲೆಯ ಆಕರ್ಷಣೆಗೆ ಒಳಗಾಗಿ ನಗರದ ಎಲ್ಲ ವೈರುದ್ಯಗಳಿಗೆ ವಿದಾಯ ಕೋರುತ್ತಾ ಸನದಿಯವರು ಬರೆಯುತ್ತಾರೆ.

"ನಗರವೆಂಬುವ ನಾಡೆ

ನಾಗರಿಕ ಜೀವನದ ಕಟ್ಟುಪಾಡೆ..

ಲೋಕಾಂತರದೊಳಗಿದ್ದರೂ ಒಂದು ತರದೇಕಾಂತ

ನಗರ ಜೀವನ ನಿನಗೆ ನನ್ನ ನಮನ

ಕೊನೆಯ ನಮನ"

ಈ ನಗರ ಪ್ರಜ್ಞೆಯ ವೈವಿಧ್ಯಗಳು ಸನದಿಯವರ ಹಲವು ಕವನಗಳಲ್ಲಿ ಢಾಳಾಗಿರುವುದನ್ನು ಕಾಣುತ್ತೇವೆ. ಮುಂಬೈಯಂತಹ ಮಾಯಾಲೋಕದ ನಗರದಲ್ಲಿ ಮನುಷ್ಯ-ಮನುಷ್ಯನಾಗಿ ಉಳಿಯುವುದೇ ಕಷ್ಟ. ಯಾವಾಗ ಹೇಗೆ ಕ್ರಮೇಣ ಜನ ಬಣ್ಣ ಬಣ್ಣದ ಬೊಂಬೆಗಳಾಗುತ್ತಾರೋ, ರಾಕ್ಷಸ, ಮುಖವಾಡವನ್ನು ಧರಿಸುತ್ತಾರೋ, ಮಾನವ ರೂಪದಲ್ಲಿ ಶವಗಳಂತೆ ಓಡಾಡುತ್ತಾರೋ ಗ್ರಹಿಸುವುದು ಬಹು ಕಷ್ಟದ ಕೆಲಸ. ಇಂಥ ಭಯಂಕರ ಪರಿಸರದಲ್ಲೂ ಅವರು ತಮ್ಮ ತನವನ್ನು ಸ್ವಂತ ಸಹಜತೆಯನ್ನು ಕಾಪಾಡಿಕೊಳ್ಳುವ ಕನವರಿಕೆಯ ಬಗ್ಗೆ ಸಹ ಹೇಳುತ್ತಾರೆ.

ಮನುಜ ಸಹಜ ಪ್ರೀತಿಯನ್ನು ಸಂಕೇತಿಸುವ ಈ ಮುಗುಳು ನಗೆ ಛತ್ತರಿಗೆ ಎಲ್ಲಿಯೋ ಉಳಿದು ಹೋಗಿದೆ. ಯಾವಾಗ, ಎಲ್ಲಿ ಹೇಗೆ ತಿಳಿಯದು, ಎಲ್ಲಿ ಉಳಿದು ಹೋಯಿತು ನೆನಪು ಮಾಡಿಕೊಳ್ಳುವುದು ಕಷ್ಟ. ಇತ್ತೀಚೆಗೆ ಕವಿಯ ಮುಗ್ಧತೆ ಕ್ರಮೇಣ ಮಾಯವಾಗುತ್ತಿರುವ ಬಗ್ಗೆ ಅವರಿಗೆ ಒಂದು ಕಡೆ ದುಃಖ, ಮತ್ತೊಂದು ಕಡೆ ಆ ತಮ್ಮ ಸಹಜ ಸರಳ, ಮುಗ್ಧ ಪ್ರೀತಿಯ ಆಸ್ತಿ. ಮಾನವೀಯ ನಂಟುತನಕ್ಕೆ ನಾಂದಿಯಾದ ನಿಷ್ಕಲ್ಮಶ ಮನದ ಮುಗುಳುನಗೆ ಏತಕ್ಕೊ ತಮ್ಮಿಂದ ದೂರವಾಗುತ್ತಿರುವ ಬಗ್ಗೆ ಅಥವಾ ಹತ್ತಿರದವರ ಮಧ್ಯದಲ್ಲಿ ಕಾಣದಿರುವ ಬಗ್ಗೆ ಕಳವಳ, ಆ ನಗೆ ಅಂತಿಂಥ ನಗೆಯಲ್ಲ. ತಮ್ಮ ಜೀವನದ ಒಳ ಹೊರ ಉರಿಬಿಸಿನಲ್ಲೂ ಕಂಪು ನೀಡಿದ್ದ ಯಾವುದೋ ಬಾಬಾಗಳ ಅಂಧ ಶ್ರದ್ಧೆಯ, ವ್ಯವಸಾಯೀ ಕೃಪೆಯಿಂದ ದೊರೆತ ನಗೆಯಲ್ಲ. ಕೇವಲ ತಾತ್ಕಾಲಿಕ

ಉದ್ದೇಶ ಸಾಧನೆಗಾಗಿ ನಾಗರೀಕ ಲೋಕದ ನಗೆಯೂ ಅಲ್ಲ. ಅದು ಅತ್ಯಂತ ಪ್ರೀತಿಯ, ಸರಳ ಸಂಪನ್ನ ಮನುಷ್ಯ ಮನುಷ್ಯನನ್ನು ಬೆಸೆಯುವ ನಿರ್ಮಲ ನಗೆ.

ಯಂತ್ರ ಸಂಸ್ಕೃತಿಯನ್ನು ನಗರದ ನಾಗರೀಕತೆಯನ್ನು ವಿರೋಧಿಸಿದ ಗಾಂಧೀಜಿಯವರ ಮನೋಭಾವ, ದೃಷ್ಟಿಕೋನವೇ ಕವಿ ಸನದಿಯವರ ಕೆಲವು ಕವಿತೆಗಳಲ್ಲಿ ಸ್ಫುಟವಾಗಿ ಮೂಡಿ ಬಂದಿದೆ. ಅವರ 'ಸಂಭವ ' ಸಂಕಲನದ 'ಸಂಬಂಧಗಳು' ಕವಿತೆಯಲ್ಲಿ ನಗರದ ಜೀವನದ ಅಸಹ್ಯ ಯಾಂತ್ರಿಕತೆ ಸ್ಪಷ್ಟವಾಗಿ ಪರಿಣಾಮಕಾರಿಯಾಗಿ ದನಿಗೊಂಡಿದೆ.

ನಗರ ಪ್ರದೇಶದ ಯಂತ್ರ ನಾಗರೀಕತೆಯಲ್ಲಿ ಮಾನವೀಯತೆ ಹೇಗೆ ಮಾಯವಾಗುತ್ತದೆ, ನಾಶವಾಗುತ್ತದೆ, ಹಾಗೂ ಮಾನವೀಯ ಸಂಬಂಧಗಳು ಹೇಗೆ ಕಳಚಿ ಬೀಳುತ್ತವೆ ಎಂಬುದನ್ನು ಮಾನನೀಯವಾಗಿ ಹೇಳುತ್ತಾರೆ. ಈ ಮನೋಭಾವ ಮತ್ತು ದೃಷ್ಟಿಕೋನವೂ ಶ್ರೀ ಸನದಿಯವರ ಈ ಕವಿತೆಯಲ್ಲಿ ಧ್ವನಿತವಾಗಿದೆ. ಉದಾ: ಬೆವರ ಹಾಡು, ಹೊಗೆ ಇತ್ಯಾದಿ ಕವನಗಳು ಇದಕ್ಕೆ ಸಾಕ್ಷಿಯಾಗಿವೆ.

ಡಾ॥ ತಾಳ್ತಜೆ ವಸಂತ ಕುಮಾರ ಹೇಳಿದಂತೆ, "ಸನದಿ ಅವರ ಕಾವ್ಯ ವರ್ತಮಾನ ಭವಿಷ್ಯಗಳ ಬೆಸುಗೆಯ ಗೆರೆಯಲ್ಲೂ ಮಾನವೀಯ ಸಂವೇದನೆಗಳಿಂದ ಮೃದುಗೊಂಡಿದೆ. ಇವರು ಕಾವ್ಯದಲ್ಲಿ ನಗರ ಪ್ರಜ್ಞೆ ಅಲ್ಲಿಯ ಬದುಕಿನಲ್ಲಿ ಎಲ್ಲವನ್ನೂ ಚಿತ್ರಿಸಿದ್ದಾರೆ. ಇವರ ಕಾವ್ಯದ ಸ್ನಿಗ್ಧ ಶೈಲಿ, ಸಮಕಾಲೀನ ಜೀವನದ ತುಡಿತಗಳನ್ನು ಪ್ರಭಾವಿಯಾಗಿ ಅಭಿವ್ಯಕ್ತಿಸಿದೆ."[2]

'ಧ್ರುವಬಿಂದು'ವಿನಲ್ಲಿ ನಗರ ಜೀವನದ ಯಾಂತ್ರಿಕವಾದ ನರಕ ಸದೃಶ ಬದುಕನ್ನು ಚಿತ್ರಿಸುತ್ತಾರೆ. ವ್ಯಕ್ತಿ ವಿಶೇಷವನ್ನು ಹಾಳುಮಾಡುವ ನಗರ ಬದುಕಿನ ದುರಂತ ಚಿತ್ರಣ ದೊರೆಯುತ್ತದೆ. 'ಕಲೆ' ಎಂಬ ಕವನವು ಸನದಿಯವರ ಒಂದು ಸಾರ್ಥಕ ಕವನಗಳಲ್ಲೊಂದು. ಕಲೆ ಎಂಬ ಶಬ್ದವನ್ನು ಶ್ಲೇಷೆಯಲ್ಲಿ ಬಳಸುವ ಕವಿ ಹಳ್ಳಿಯ ಸಂಸ್ಕೃತಿ ಹಾಗೂ ನಗರ ಸಂಸ್ಕೃತಿಯನ್ನು ಮುಖಾಮುಖಿಯಾಗಿಸಿ ಅದರ ಸಾಧಕ ಬಾಧಕದತ್ತ ನಮ್ಮ ಗಮನ ಸೆಳೆಯುತ್ತಾರೆ.

'ನಗರ-ನಾಗರೀಕತೆಯ ಮೊಗಕೆ ಕಲೆಯು!' ಎಂಬ ಸಾಲುಗಳಲ್ಲಿ ನಗರ ನಾಗರೀಕತೆ ಹಳ್ಳಿಯ ಸಂಸ್ಕೃತಿಗಿಂತ ಭಿನ್ನವಾದುದು. ನಗರ ನಾಗರೀಕತೆ ಎದ್ದು ಕಾಣವಂತಹುದು. ಅಲ್ಲಿ ಒಳಗಿನ ಅದಕ್ಕಿಂತ ಹೊರಗಿನ ಥಳುಕು ಬಳುಕು ಹೆಚ್ಚು ಮುಖ್ಯವಾದದ್ದು. ಹಳ್ಳಿಯ ಸಂಸ್ಕೃತಿ ಬಾಹ್ಯಾಡಂಬರವಿಲ್ಲದ್ದು. ಅಲ್ಲಿ ಪ್ರದರ್ಶಕ ಕಡಿಮೆ. ಅಲ್ಲಿ ಬಡತನ, ಸಿರಿತನಗಳ ನಡುವೆ ಒಂದು ಬಗೆಯ ಹೊಂದಾಣಿಕೆ ಅಥವಾ ಸ್ವೀಕೃತಿ ಇದೆ. ಆದರೆ ನಗರ ನಾಗರೀಕತೆಯಲ್ಲಿ ಶ್ರೀಮಂತಿಕೆ, ಬಡತನ ಇವೆಲ್ಲ ಭೂತಗನ್ನಡಿಯಲ್ಲಿ ಕಂಡಂತೆ ಹಿರಿದಾಗುತ್ತಾ ಹೋಗುತ್ತದೆ. ಇಲ್ಲಿಯ ಈ ದರಿದ್ರರ ಬದುಕಿಗೆ ನೆಮ್ಮದಿಯ ಬೆಳಕು ದೊರೆಯುವಂತೆ ನಾಗರೀಕರು ನೆರವಾಗದಿದ್ದರೆ ಅದೊಂದು ಅಳಿಸಲಾಗದ ಕಲೆಯೆನಿಸಿದಂತೆಯೇ ಎಂದು ಸನದಿಯವರು ಹೇಳುತ್ತಾರೆ.

ಡಾ॥ ಜಿ.ಎಸ್. ಶಿವರುದ್ರಪ್ಪನವರು ಇವರ ಕಾವ್ಯದ ಕುರಿತು. ಇವರ ಕಾವ್ಯದಲ್ಲಿ ಸುಧಾರಕತನದ ಧೀರೋದಾತ್ತತೆಯ ಸೋಗುಗಳಿಲ್ಲ. ಬದುಕಿನ ಅಸಾಂಗತ್ಯಗಳ ಕುರಿತು ಏರುದನಿ, ಕೀರುದನಿಯ ಆಕ್ರೋಶಗಳಿಲ್ಲ. ಇವರ ನಗರ ಪ್ರಜ್ಞೆಯ ಕವನಗಳನ್ನು ಈ ದೃಷ್ಟಿಯಿಂದ ಅವಲೋಕಿಸಬಹುದು. ಒಂದು ಕವನದಲ್ಲಿ ಕವಿಯ ಮನ ನಾಲ್ಕು ಗೋಡೆಯ ಮೇಲೆ ನರಳುತ್ತ ಮಲಗಿರುವ ಚಪ್ಪರದ ಮನೆಯಾಗಿ ಬಣ್ಣನೆ ಪಡೆಯುತ್ತದೆ. ಅಸ್ಥಿರ ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿಸಿರುವ ನಮ್ಮ ಸಾಮಾಜಿಕ ವ್ಯವಸ್ಥೆಯ ದುರವಸ್ಥೆಯನ್ನು ಇದು ಸಂಕೇತಿಸುತ್ತದೆ"[೮] ಎಂದಿದ್ದಾರೆ.

'ರೈಲಿನಲ್ಲಿ ಬರೆದ ಸವಾಲುಗಳು' ಆವೇಶ ಭರಿತವಾಗಿ ಹೊರಹೊಮ್ಮಿದೆ. ಈ ಕವಿತೆಯಲ್ಲಿ ಕವಿ ತನ್ನೆಲ್ಲ ಜೀವನೋತ್ಸಾಹವನ್ನೂ ಗ್ರಾಮಾಂತರ ಪರಿಸರದ ಪ್ರೀತಿಯನ್ನೂ ಸೂರೆಗೊಂಡಂತಿದೆ. ವಾತಾವರಣವನ್ನು ಮಲೀನಗೊಳಿಸುವಿಕೆ ನಗರದ ಮಹಾ ಸಮಸ್ಯೆಗಳಲ್ಲಿ ಒಂದಾಗಿದೆ. ಇದಕ್ಕೆ ಕಾರಣವಾಗುವ ಕಾರ್ಖಾನೆಗಳ ಮೇಲೆ ತಮ್ಮ ಕಿಡಿಯನ್ನು ಹೊಗೆ ಎನ್ನುವ ಕವಿತೆಯ ಮೂಲಕ ಕಾರಿರುವ ರೀತಿ ಹೀಗಿದೆ:

"ಬನ ಬೆಳಕಿನ ಮೊಗಕೆ
ಕಪ್ಪು ಹೊಗೆಯನ್ನುಗುಳಿ
ಗಹಗಹಿಸಿ ನಗುವ ಗಿರನಿಗಳ ನೋಡಿ
ನನ್ನೊಡಲಿನಲ್ಲಿ ಧಗೆ"

ಈ ಕವಿತೆಯ ಸಾಲುಗಳು ನಗರದ ಗಿರಣಿ-ಕಾರ್ಖಾನೆಗಳು ಮಾಡುವ ವಾಯು ಮಾಲಿನ್ಯವನ್ನು ಪರಿಣಾಮಕಾರಿಯಾಗಿ ಹೇಳುತ್ತವೆ. ಇಲ್ಲಿಯ 'ಧಗೆ' ಕವಿಯೊಡಲಿನ ಧಗೆ ಮಾತ್ರವಲ್ಲ. ಬದುಕಿನಲ್ಲಿ ನೆಮ್ಮದಿಯರಸುವ ಪ್ರತಿಯೊಬ್ಬರದೂ, ಅಂತೆಯೇ ಸಮಾಜದ್ದೂ. ಈ ಒಂದೇ ಕವಿತೆಯಲ್ಲಿನ ಮೊದಲ ಭಾಗ ಗಿರಣಿಗಳು ಉಂಟು ಮಾಡುವ ಮಾಲಿನ್ಯವನ್ನು ಎರಡನೇಯ ಭಾಗ ಅಲ್ಲಿನ ಮಾಲಿನ್ಯವನ್ನು, ಮೂರನೆಯ ಭಾಗ ಅಲ್ಲಿನ ಮಾಲೀಕರು ಬಡ ಕಾರ್ಮಿಕರನ್ನು ಶೋಷಿಸುವುದನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಹೀಗೆ ಮಹಾನಗರದ ವಿಲಕ್ಷಣ ರಾಜಕಾರಣ ಹಾಗೂ ಲೋಕ ಕಾರಣಗಳ ವಿಚಿತ್ರ ಸಂಕಿರಣದಲ್ಲಿ ಹುಟ್ಟಿಕೊಳ್ಳುವ ಹಲವೊಂದು ದ್ವಂದ್ವಗಳ ನಡುವೆಯೂ ಸಿಮೆಂಟು ಗೋಡೆಯ ಬಿರುಕಿನಲ್ಲೂ ಚಿಗುರೊಡೆಯುವ ಹಸಿರು ಹುಲ್ಲಿನಂತೆ ಮಾನವತೆ ನಳನಳಿಸುವುದನ್ನು ಕವಿ ಗುರುತಿಸುತ್ತಾರೆ.

ಸನದಿಯವರ ಕಾವ್ಯದಲ್ಲಿರುವ ನಗರ ಪ್ರಜ್ಞೆ ಸೂಕ್ಷ್ಮವಾದದ್ದು. ಅದು ಅವರ ವೃತ್ತಿ ಜೀವನದ ಅನಿವಾರ್ಯ ಅಂಗವಾಗಿ ಮೈದಳೆದಿದ್ದರೂ ಸಾಮೂಹಿಕ ಮೌಲ್ಯಗಳಲ್ಲಿ ಬೇರು ಬಿಟ್ಟದ್ದು. ಮಾನವೀಯ ಪ್ರಜ್ಞೆ ಜೀವನದ ಆರೋಗ್ಯಕರ ನಿಲುವುಗಳನ್ನು ಪ್ರಕಟಿಸುವಂತಹದಾಗಿದೆ.

ಆದ್ದರಿಂದಲೇ ಸೂಕ್ಷ್ಮವಾಗಿ ನಗರಜೀವನದ ವಿಭಿನ್ನ ಮುಖಗಳನ್ನು ಚಿತ್ರಿಸುವಾಗಲೂ ಅದರ ಅನಿಷ್ಟಗಳನ್ನು ಅವರು ಪ್ರತಿಭಟಿಸುತ್ತಲೇ ಬಂದಿದ್ದಾರೆ ಎಂಬುದನ್ನು ಗಮನಿಸಿದಾಗ, ಕನ್ನಡದ ಸಾಹಿತ್ಯದಲ್ಲಿ ನಗರಪ್ರಜ್ಞೆಯ ಕೆಲವೇ ಕವಿಗಳಲ್ಲಿ ಇವರೂ ಒಬ್ಬರು ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಿಕೊಳ್ಳುತ್ತಿದ್ದೇನೆ.

೪:೫ ರಾಷ್ಟ್ರೀಯತೆಯ ಕಾಳಜಿ.

ತಾಯ್ನಾಡಿನ ಪ್ರೇಮ, ಅಭಿಮಾನವನ್ನು ವ್ಯಕ್ತಪಡಿಸುವ ಕವಿತೆಗಳು ಸನದಿಯವರ ಹಲವಾರು ಕವನ ಸಂಗ್ರಹಗಳಲ್ಲಿ ಗಮನಿಸಬಹುದಾಗಿದೆ. ೧೯೬೨ರಲ್ಲಿ ಚೀನಾ ದೇಶವು ಭಾರತದ ಮೇಲೆ ಆಕ್ರಮಣ ಮಾಡಿದಾಗ ನಾಡಿನ ಜನರಲ್ಲಿ ರಾಷ್ಟ್ರೀಯತೆ ಜಾಗೃತಗೊಳಿಸುವ ಕಾರ್ಯ ಇವರ ಕವನ ಮಾಡಿವೆ. "ಹಿಮಗಿರಿಯ ಮುಡಿಯಲ್ಲಿ"ಯ ಇಪ್ಪತ್ತೆರಡು ಕವನಗಳ ಸಾಲು-ಸಾಲಿನಲ್ಲಿಯೂ, ಶಬ್ದ-ಶಬ್ದಗಳಲ್ಲಿಯೂ ರಾಷ್ಟ್ರೀಯತೆಯ ನಿನಾದ ಕೇಳಿಬರುತ್ತದೆ. ಮೊದಲು ಬರುವ 'ಚಂದನ' ಎಂಬ ಪುಟ್ಟ ಕವನದ ಧಾಟಿ ಹೀಗಿದೆ:

"ಮಿತ್ರರಾಗಿ ಬರುವ ಜನಕೆ
ನಮ್ಮ ಪ್ರೀತಿ ಚಂದನ.
ಮಿತ್ರದ್ರೋಹಿ ಶತ್ರುಗಳಿಗೂ
ಅದುವೆ ರಕ್ತ ಲೇಪನ".

'ದೀಕ್ಷೆ ಕೊಡು' ಎಂಬ ಕವನದಲ್ಲಿ ಸನದಿಯವರು ಎಲ್ಲ ಭಾರತೀಯರಿಗೂ ದೇಶ ಪ್ರೇಮದ-ಆತ್ಮಾಭಿಮಾನದ ದೀಕ್ಷೆಯನ್ನೇ ಕೊಟ್ಟಿದ್ದಾರೆ.

"ಸೀಮಾಂತರ" ಸನದಿಯವರ ಇನ್ನೊಂದು ಮಹತ್ವದ ಕೃತಿ ಇದರಲ್ಲಿಯ ಅನೇಕ ಕವನಗಳು ರಾಷ್ಟ್ರ-ಚಿಂತನಪರವಾದ ವೈಚಾರಿಕತೆಯನ್ನು ಎತ್ತಿಹಿಡಿಯುವ ಮಹತ್ವದ ಕೃತಿಗಳು! ಇಲ್ಲಿಯ 'ಘೇರಾವೋ' ಈ ಕವನ ಸಂಕಲನದ ಪ್ರಾತಿನಿಧಿಕ ಕವನ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಾವಿಂದು ಕಾಣುತ್ತಿರುವ ಅನುಭವಿಸುತ್ತಿರುವ ಹಳವಂಡದ ದಾರುಣ ಚಿತ್ರವನ್ನು ವ್ಯಂಗ್ಯದಾಟಿಯಲ್ಲಿ ಈ ಕವನ ಹಿಡಿದಿಟ್ಟಿದೆ. ಗಾಂಧೀಜಿಯವರು ಸತ್ಯಾಗ್ರಹವನ್ನು ಹೂಡಿದ್ದರೆ ನಾವಿಂದು ನಿಂತಲ್ಲಿ ಕುಳಿತಲ್ಲಿ ಕಾರಣವಿದ್ದೋ ಕಾರಣವಿಲ್ಲದೆಯೋ ಮುಷ್ಕರ-ಘೇರಾವೋಗಳ ಭಕ್ತರಾಗಿದ್ದೇವೆಲ್ಲಾ ಎಂದು ಕವಿ ಕೊರಗಿದಂತಿದೆ.

"ಘೇರಾವೋ ಘೇರಾವೋ ನಾಡತುಂಬ
ಯಾಕೆ ಏನೆಂಬುದಕೆ ಹೊತ್ತಿಲ್ಲ ಗೊತ್ತಿಲ್ಲ
ಮಾತು ಮೃತಿಗೆ ಸಟೆದು ಪುಟಿದು ನಿಲ್ಲುವ ಜಂಬ

ನಾಡಿಗರ ನೆಮ್ಮದಿಯ ಹುಲ್ಲು ಬಣವೆಯ ಸುಟ್ಟು
ಬೂದಿ ಮಾಡುವ ಮೊದಲೇ
ಮಿತಿವಚಿತರೆಂಬುವರು ಮಾಡಬಾರದ ಕೂಡಿ
ಈ ಸ್ವೇಚ್ಛೆಯಾಟಕ್ಕೆ ಸನ್ಮತಿಯ ಫೇರಾವೋ"?

ನಮ್ಮ ರಾಷ್ಟ್ರ ಜೀವನದಲ್ಲಿ ಬುದ್ಧಿಜೀವಿಗಳು ಸಕ್ರಿಯವಾಗಿ ಶಾಮೀಲಾಗದಿರುವ ಬಗ್ಗೆ ಕವಿಯಲ್ಲಿ ಅಸಮಾಧಾನವೂ ಅವರ ಕವನಗಳಲ್ಲಿ ಅಡಕವಾಗಿದೆ. 'ಸೀಮಾಂತರ' ಕವನ ಸಂಕಲನದ ಮಹತ್ವದ ಕವನ ಈಶ್ವರ-ಅಲ್ಲಾ ಅಹಮದಾಬಾದಿನಲ್ಲಿ ಜಾತೀಯ ಗಲಭೆಯಾದಾಗ ಬರೆದ ಪದ್ಯ ಇದು. ಎಲ್ಲ ಧರ್ಮಗಳು ಒಂದೇ ಭಾರತೀಯರು ನಾವೆಲ್ಲ ಒಂದೇ-ಯಾಕೆ ಈ ನಿರರ್ಥಕವಾದ ವಾದ-ವಿವಾದ. ಜಗಳ-ಕ್ಷೋಭೆ ಎಂಬ ಸರ್ವಧರ್ಮ ಸಹಿಷ್ಣುತೆಯನ್ನು ಮನಮುಟ್ಟುವಂತೆ ನಿವೇದಿಸುವ ಕವನ ಇದು! ಜಾತಿ ಧರ್ಮಗಳ ಹೆಸರಿನಲ್ಲಿ ದೇಶವನ್ನೇ ಧ್ವಂಸಗೊಳಿಸಲು ಹೊರಟಿರುವ ಪಾಶವೀ ಶಕ್ತಿಗಳಿಂದ ದೇಶದ ಎಲ್ಲ ಬಾಂಧವರೂ ದೂರವಿರುವಂತೆ ಎಚ್ಚರಿಸುವ ಈ ಕವನ ನಮ್ಮ ದೇಶದ ಈಗಿನ ಸಂದರ್ಭದಲ್ಲಿ ತುಂಬ ಪ್ರಾಸಂಗಿಕವಾದ ಪ್ರಾಶಸ್ತವಾದ ಕವನವಾಗಿದೆ.

ಭಾರತದ ಇಂದಿನ ಜನಜೀನವದ ತುರ್ತುಪರಿಸ್ಥಿತಿಗೆ ಇದು ಕವಿಯ ಜೀವಂತ ಸ್ಪಂದನ! ಈ ಸಂಕಲನದ ಇನ್ನೊಂದು ಕವನ 'ವಿಚಿತ್ರ' ತುಂಬ ಧ್ವನಿಪೂರ್ಣವಾಗಿ ಇಂದಿನ ನಮ್ಮ ನಾಡಿನ, ವಿಶ್ವದ ದುರ್ದೆಸೆಯ ಬಗೆಗೆ ಹಳಹಳಿಸುವ ಕವನ!

"ಚಿತ್ರ ಬರೆಯಲು ಹೋಗಿ ವಿಚಿತ್ರವಾಗುತಿದೆಯಲ್ಲ
ಅಣುಬಾಂಬುಗಳ ಮೇಲೆ ಶಾಂತಿ ಮುದ್ರೆಯನ್ನೊತ್ತಿ
ಮನೆಯ ಹಿತ್ತಲದಲ್ಲಿ ಹೂಳಡುವ ಮಸಲತ್ತು
ಅಲ್ಲಲ್ಲಿ ನಡೆವುದನು ನೆನೆದಂತೆ ವಿಚಿತ್ರವಾಗುತಿದೆಯಲ್ಲ!
ವೇದ ಪುರಾಣಕುರಾಣ ಬಾಯಿಬಲ್ಲ ಭಾಯಿಗಳು
ತಡವರಿಸುತ್ತಿವೆ, ಅವಕೆ ಹೊಸದೇನು ಗೋತ್ತು?
ಹೃದಯ ಹೃದಯದಿ ಬೇಗೆ, ಹೊತ್ತಿರುವ ಹೊತ್ತಿನಲಿ
ವಿಶ್ವಶಾಂತಿಯ ಕನಸುಗಳಗೇನು ಕಿಮ್ಮತ್ತು?..."

ಕವಿ ಹೇಳುವ ಈ ಮೂಲಭೂತ ಪ್ರಶ್ನೆ ಸಮಕಾಲೀನರಿಗೆಲ್ಲ ಒಂದು ಸರ್ವಕಾಲಿಕವಾದ ಸವಾಲು! 'ಮನೆಗೆದ್ದು ಮಾರುಗೆಲ್ಲು' ಎಂಬ ನಮ್ಮ ಕನ್ನಡಿಗರ ನಾಣ್ಣುಡಿಯನ್ನು ನಮಗೆ ನೆನಪು ತರುವ ಈ ಕವನ ವಿವೇಕದ ವಾಣಿ!

'ವೀರಕಂಕಣ' ಸನದಿಯವರ ರಾಷ್ಟ್ರಾಭಿಮಾನಕ್ಕೆ ಮತ್ತೊಂದು ಉದಾಹರಣೆಯಾಗಿದೆ. 'ವೀರಕಂಕಣ' ಎಂಬ ಕವನ ಚೀನಾದ ಆಕ್ರಮಣವನ್ನು ಪ್ರತಿಭಟಿಸಿ ಬರೆದ ಕೆಲವು ಸಮರ ಗೀತೆಗಳು ಇದರಲ್ಲಿದೆ. ವೀರಕಂಕಣದ ಸ್ವಾಭಿಮಾನಚರಿತ ಸಾಲುಗಳ ವೈಖರಿ ಇಂತಿದೆ.

"ನಮ್ಮ ಸತ್ವದ ಕೆಣಕುವಾಟಕೆ

ಭೀತಿಯೇತಕ್ಕೆ ಏಳಿರೋ।

ತತ್ವಹೀನರ ಹೆಣಕೆ ಸತ್ಯದ ಹೂವನೇರಿಸಿ ಹೂಳಿರೋ।"

ಸನದಿಯವರ ಕಾವ್ಯದಲ್ಲಿ ದೇಶ ಪ್ರೇಮ ಭಕ್ತಿಯ ಭಾವನೆಗಳು ಹಾಸು ಹೊಕ್ಕಾಗಿ ಅವರ ಕವನಗಳಿಗೆ ತುಂಬ ಕಳೆಕೊಟ್ಟಿವೆಯೆಂದು ಅರಿಯಬಹುದಾಗಿದೆ. ಆದರ್ಶವಾದ ಹಾಗೂ ಉದಾತ್ತ ಕಾವ್ಯವೂ ಉದಾತ್ತದತ್ತಲೇ ಮುನ್ನಡೆದಿದೆ । ಇದೇ ಸಂಕಲನದ ಪುಟ್ಟ ಕವನ "ಜಯದಾಣಿ" ಈ ಮಾರ್ಗದಲ್ಲಿ ಮುನ್ನಡೆದ ಇನ್ನೊಂದು ಅರ್ಥಪೂರ್ಣವಾದ ಕವನವಾಗಿದೆ.

"ಮನೆಯ ಮುಂದೆ ಕಸಬಿದ್ದರದನು ಗುಡಿಸುವೆವು ನಸುಕಿನಲ್ಲಿ

ಮನೆಯನಾರೊ ಕಬಳಿಸಲು ಬರಲು ಮಲಗುವುದೆ ಮುಸುಕಿನಲ್ಲೆ?

ಮಾನವುಂಟು ಅಭಿಮಾನವುಂಟು ಅವಮಾನ ಸಹಿಸಲೇಕೆ!

ಜಾಣ-ಜಾಣೆ ಜಯದಾಣೆ ಮಾಡಿ ಕೈ ಹಚ್ಚಲುಂಟು ರಥಕೆ।".

ಎಂಬ ಈ ಸಾಲುಗಳಲ್ಲಿ ಉದಾತ್ತ ದೇಶ-ಭಕ್ತಿ-ಅಭಿಮಾನಗಳನ್ನು ಪುಟಗೊಳಿಸುವ, ಪ್ರೇರೇಪಿಸಿವ ಭಾವನೆಗಳಿವೆ. ರಾಷ್ಟ್ರಭಾವನೆ ದೇಶದ ಸಾಮುದಾಯಿಕ ಆಸಕ್ತಿಯ ಒಂದು ಸಂಘಟಿತ ಸ್ವರೂಪ. ಆದರೆ ದೇಶಭಕ್ತಿ ನಿರ್ವಾಜ್ಯವೂ ನಿರ್ಮಲವೂ ಆದ ಮಾತೃಭಕ್ತಿ ಜನರನ್ನೂ ಜನ್ಮಭೂಮಿಯನ್ನೂ ಒಂದಾಗಿಯೇ ನೋಡುವ ಅತ್ಯಂತ ಸಾತ್ವಿಕ ಪ್ರವೃತ್ತಿ. ಸನದಿಯವರ ಅನೇಕ ಕವನಗಳಲ್ಲಿ ಅದು ಸ್ಫುರಿಸುತ್ತದೆ. ಈ ಸಂದರ್ಭದಲ್ಲಿ ಅವರ 'ಹಿಮಗಿರಿಯ ಮುಡಿಯಲ್ಲಿ' ಹಾಗೂ 'ವೀರ ಕಂಕಣ'ಗಳಲ್ಲಿ ಸೇರ್ಪಡೆಯಾದ ಕವನಗಳೂ ಪ್ರಸ್ತುತವೆನಿಸುತ್ತದೆ.

ಈ ಕವಿಗೆ ಹಿಮಗಿರಿಯ ಬಲವಾಗಲೀ, ಭಾರತೀಯರು ಮುನ್ನಡೆವ ಛಲವಾಗಲೀ, ಅವರ ಬೆವರಿನ ಫಲವಾಗಲೀ-ಒಂದಕ್ಕೊಂದು ಬೇರೆಯಲ್ಲ. ಮನುಷ್ಯ ಜೀವನದ ನೆಮ್ಮದಿಯ ನೆಲೆಗಾಗಿ ಈ ಕವಿ ಜೀವ ಹಾರೈಸುತ್ತದೆ, ಹಂಬಲಿಸುತ್ತದೆ. ಸಮರದ ಸಂದರ್ಭವಿರಲಿ, ಶಾಂತಿ ಸಮಯವಾಗಿರಲಿ ಮನುಷ್ಯ ಗೌರವಯುತವಾಗಿ ತಲೆಯೆತ್ತಿ ನಿಲ್ಲಬೇಕು; ಹೊರವೈರಿಗಳಂತೆ ತನ್ನ ಒಳವೈರಿಗಳನ್ನೂ ಗೆಲ್ಲಬೇಕೆಂದೇ ಕವಿ ನಿರೀಕ್ಷಿಸುತ್ತಾರೆ.

"ನಾವು ಪೂರಾ ಸತ್ತಿಲ್ಲ, ಸತ್ತಂತಿದ್ದೇವೆ. ಪೂರಾ ಮಲಗಿಲ್ಲ, ಮಲಗಿದವರಂತ್ತಿದ್ದೇವೆ. ಶ್ರೀ ಸನದಿಯವರ ಅಥವಾ ಇತರ ಕವಿಗಳ ಇಂತಹ ಗೀತೆಗಳು, ಕವಿತೆಗಳು ಬರೀ ಕಾಗದದ ಮೇಲಿನ ಕವಿತೆಗಳಾಗಿ, ಪುಸ್ತಕದ ಪುಟಗಳಾಗಿ, ಕೇವಲ ಹಾಡುಗೀತೆಗಳಾಗಿ ಉಳಿಯಬಾರದು, ಸತ್ತಂತಿರುವ (ರಾಷ್ಟ್ರಕವಿ ಕುವೆಂಪುರವರ ಗೀತೆಗಳನ್ನು ನೆನೆದು) ನಮ್ಮೆಲ್ಲರನ್ನು, ಭಾರತೀಯರೆಲ್ಲರನ್ನು ಬಡಿದು ಎಚ್ಚರಗೊಳಿಸುವ ಕ್ರಾಂತಿಗೀತೆಗಳಾಗಬೇಕು ಇವರ ಕವಿತೆಗಳಲ್ಲಿರುವ ಅಂಶಗಳು ನಮ್ಮೆಲ್ಲರ, ಭಾರತೀಯರೆಲ್ಲರ ಉಸಿರಾಗಬೇಕು. ಅದರಂತೆ ನಾವು ಕ್ರಿಯಾಶೀಲರಾಗಬೇಕು ಆಗ ಮಾತ್ರ ಈಗಿರುವ ನಿರಾಶಾವಾತಾವರಣ ತಪ್ಪಿಸಿ, ನಮ್ಮ ದೇಶದ ಭವ್ಯ

ಭವಿಷ್ಯತ್ತಿನ ಬಗ್ಗೆ ಪೂಜ್ಯ ರಾಷ್ಟ್ರಪಿತ ಗಾಂಧೀಜಿಯವರು ಕಂಡ ಕನಸಿನ ಭಾರತದೇಶವನ್ನು ನನಸು ಮಾಡಲು ಸಾಧ್ಯವಾಗುವಂತೆ ಇವರ ಕವಿತೆಗಳು ಆಶಾವಾದದ ಕುರುವಾಗಿವೆ." ಎಂಬಂಶ ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ."

೪.೬ ಜನಪರ ಕಾಳಜಿ

ಈ ಕವಿ ನಿಶ್ಚಿತವಾಗಿಯೂ ಜನಪರ. ಮೊದಲಿನಿಂದಲೂ ಅವರದ್ದು ಜನಪರ ಕಾವ್ಯ; ಜೀವನಪರ ಕಾವ್ಯ. ಅವರ 'ಬದುಕಿನೊಲವು' ಎಂಬ ಸಂಗೀತದಲ್ಲಿ 'ಚೆಲುವಿಗಿಂತನಗಧಿಕತರದೀ ಬದುಕಿನೊಲವ' ಎಂದು ಕವಿ ಹೇಳಿದ್ದನ್ನಿಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಇಲ್ಲಿ ಬದುಕು ಬಾಳಿಗಿಂತ ಹೆಚ್ಚು ವ್ಯಾಪಕ ಬಾಳು ಕೇವಲ ವ್ಯಕ್ತಿಗತ. ಬದುಕಿನಲ್ಲಿ ಸಾಮಾಜಿಕ ಆಯಾಮವೂ ಅಡಕವಾಗಿರುತ್ತದೆ. ಕವಿ ಬದುಕಿನ ಎಳೆ ಎಳೆ ಹಿಂಜಿ ಮೂಲವರಸುವ ಬಯಕೆ ಈ ಕವಿಗೆ. ಏಕೆಂದರೆ ಅದು ಹುಟ್ಟು ಸಾವಿನ ನಡುವೆ ಸೇತುವೆ ಹಾಕಿರುವುದು. ಈ ಸೇತುವೆ ದಾಟಿ ಹೊಸ ದಾರಿ ಹಿಡಿದು ಮುಂದೆ ಮುಂದಕ್ಕೆ ನಡೆವುದೇ ಈ ಕವಿಯ ಮುಖ್ಯಗುರಿಯಾಗಿದೆ.

"ಎಲ್ಲಿ ಹುಟ್ಟಿತೋ ಎಲ್ಲಿ ಮುಟ್ಟಿತೋ
ಈ ಅನಂತ ದಾರಿ
ಬಂದರು ಅಡೆತಡೆ ಇದಕೇತರ ಭಿಡ
ನಡೆಯುವುದೊಂದೆ ಗುರಿ॥."

ಈ ಬದುಕಿನ ದಾರಿಯ ಮೇಲೆ ತನ್ನಂತೆಯೇ ಇತರ ಅಸಂಖ್ಯ ಜನರೂ ನಡೆಯುತ್ತಾರೆಂಬ ಅರಿವು ಕವಿಗಿದೆ. ಆದರೆ ಲಕ್ಷಲಕ್ಷ ಜನಗಳ ಅದಕ್ಷ ನಡೆ-ನುಡಿಗಳಿಂದ ಈ ದಾರಿಯ ನಡು ನಡುವೆ ಎಂಥೆಂಥ ಅನಾಹುತಗಳು ನಡೆದು ಹೋಗುತ್ತವಲ್ಲಾ ಎಂದು ಕವಿಗೆ ಕಳವಳ. ಒಂದೇ ಬಾರಿಗೆ ಬರುವ ಮನುಷ್ಯ ಜೀವನದವಕಾಶವನ್ನು ವಿವೇಕಪೂರ್ಣವಾಗಿ ಸಮರ್ಥವಾಗಿ ವಿನಿಯೋಗಿಸಬೇಕೆಂದು ಕವಿಯ ದಾರಿ ಮೊರೆಯಿಡುತ್ತದೆ.

ಸನದಿಯವರ 'ಸಂಭವ' ಕವನ ಸಂಕಲನದ ಹಲವೊಂದು ಯಶಸ್ವೀ ಕವನಗಳಲ್ಲಿ 'ಶಬ್ದಗಳು' ಎಂಬುದೂ ಒಂದು. ಈ ಕವನವನ್ನು ಸನದಿಯವರು ಹುಬ್ಬಳ್ಳಿಯಲ್ಲಿ ೧೯೯೦ರಲ್ಲಿ ನಡೆದ ೬೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾವ್ಯಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಕವಿ ಓದಿದ ಈ ಕವನ ರಸಿಕರ ಮೆಚ್ಚುಗೆಗೆ ಪಾತ್ರವಾದದ್ದು.

"ತುಂಟ ಹುಡುಗರಂತೆ
ಬೀದಿಗುಂಟ ಸಿಳ್ಳ ಹಾಕುತ್ತಲೆವ ಶಬ್ದ
ಗಳಿಗೆ ಶಿಸ್ತು ಕಲಿಸುವುದು
ಬಹು ಕಷ್ಟದ ಕೆಲಸ".

ಕವನ ಹೀಗೆಯೆ ಮುಂದುವರಿದು ಶಬ್ದವೊಂದು ಸಿಡಿಬಾಂಬೂ ಆಗಬಲ್ಲುದು, ನಾಳಿನ ಹೆಣ್ಣಿಗೆ ಭರವಸೆಯ ತುಂಬು ಆಗಬಲ್ಲುದೆಂಬ ಸೂಚನೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಶಬ್ದಗಳ ಕುರಿತು ವಿವರವಾಗಿ ಚಿಂತಿಸಿದ ಕನ್ನಡ ಕವಿಗಳೇ ವಿರಳ. ಈ ಕವಿಯ ಪ್ರಕಾರ 'ಶಬ್ದಗಳೋ, ಸ್ವಭಾವತಃ ಅಪ್ರಬುದ್ಧ, ಪೋಲಿಗಳು..' ಅವುಗಳಿಗೆ ಶಿಸ್ತು ಕಲಿಸುವುದು ಬಲು ಕಷ್ಟದ ಕೆಲಸ. ಆದರೆ ಸನದಿಯವರು ತಮ್ಮ ಸಾಧನೆಯುದ್ಧಕ್ಕೂ ಅವುಗಳಿಗೆ ನಿತ್ಯ ಕವಾಯಿತು ಕಲಿಸಿ, ತರಬೇತುಗೊಳಿಸಿ ಮನುಜನೆದೆ ಗೆಲ್ಲಲು ಹಾಗೂ ಮಾನವ್ಯತೆಯ ನಿರಂತರ ಉಪಾಸನೆಗೆ ನಿಲ್ಲಲು ಸಜ್ಜುಗೊಳಿಸಬಲ್ಲರೆಂಬುದಕ್ಕೆ ಅವರ ಕವನಗಳೇ ಸಾಕ್ಷಿಯಾಗಿವೆ.

'ಜನಪರ' ಸಂವೇದನೆಯು ಕಾವ್ಯದ ಮುಖ್ಯ ವಾಣಿಯೆನಿಸಿದೆ. ಸನದಿಯವರ ಸಮಗ್ರ ಕಾವ್ಯ ಸಂಕಲನ 'ಸೂರ್ಯಪಾನ'. ಇದು ಸೂರ್ಯನನ್ನೇ ಮಾಡಲು ಹಾರಿ ಹೊರಟ ಹನುಮಪ್ಪನ ಹುಚ್ಚು ಹವ್ಯಾಸವಲ್ಲ, ನೆಲದ ಮೇಲೆ ದೃಢವಾಗಿ ನಿಂತು ಸೂರ್ಯನತ್ತ ಮೊಗವರಳಿಸಿ ಬೆಳಕು ಬಿಸಿಲುಗಳನ್ನು ಮನದಣಿಯೇ ಹೀರಲು ಹಾತೊರೆಯುವ ಹೂವಿನ ಒಡಲಾಸೆ.

"ಸೃಷ್ಟಿಯಲಿ ನಡೆಯುವೀ ಸೃಷ್ಟಿ ಕ್ರಿಯೆಗಳಗೆಲ್ಲ
ಸೂರ್ಯಚೇತನವುಳಿದು ಬೇರೆ ಗತಿಯಿಲ್ಲ ।"

ಮೂಡು ಮುಳುಗುಗಳನ್ನರಿಯದ ಸತ್ಯ ಪ್ರಕಾಶಕ್ಕಾಗಿ ಹಾತೊರೆಯುವ ಕವಿ ಜೀವ ತನ್ನ ನೆತ್ತ ಮೇಲುರಿಯುವ ಸೂರ್ಯನ ಬಿಸಿಲಿನಿಂದ ತಾನು ಪಡೆದುಕೊಳ್ಳುವ ಕಾವನ್ನು ತನ್ನಂಥ ಇತರ ಜೀವಿಗಳಿಗೂ ಉಣಬಡಿಸುತ್ತ ಗಮನ ಹರಿಸುತ್ತದೆ. ಇದೇ ನಿಜವಾದ ಜನಪರ ದೃಷ್ಟಿ, ಸನದಿಯವರ ಪ್ರಮುಖ ಸಂಕಲನಗಳ ಪುಟಪುಟದಲ್ಲೂ ಎಂಬಂತೆ ಸ್ಫೋಟವಾಗಿ ಈ ಜನಪರ ಅಂದರೆ ಜನಜೀವನಕ್ಕೆ ಆಳವಾಗಿ ಮಿಡಿಯುವ ಭಾವ-ವಿಚಾರಗಳು ಸಹಜವಾಗಿ ಸ್ವಚ್ಛಂದವಾಗಿ ಕಳಕಳಿಯಿಂದ ಸ್ಪಂದಿಸಿರುವುದನ್ನು ಕಾಣಬಹುದಾಗಿದೆ.

'ಸಂಭವ' ಕವನ ಸಂಕಲನದ 'ನಿರ್ಲಕ್ಷಿತರು' ಕವಿತೆಯಲ್ಲಿ ನಮ್ಮ ದೇಶದಲ್ಲಿ ಅತ್ಯಂತ ಕೆಳಮಟ್ಟದಲ್ಲಿದ್ದು, ಎಲ್ಲರ ನಿರ್ಲಕ್ಷ್ಯಕ್ಕೊಳಗಾಗಿ ತಿರಸ್ಕರಿಸಲ್ಪಟ್ಟ, ಜನರ ಬಗೆಗೆ ಕವಿ ಮಾನವೀಯ ಅಂತಃಕರಣದಿಂದ ಮರುಗಿದ್ದಾರೆ, ಕೊರಗಿದ್ದಾರೆ, ಕನಲಿದ್ದಾರೆ.

ನಿರ್ಲಕ್ಷಿತ ಕುಲದ ಜನರ, ದೀನದಲಿತರ ಅಸ್ಪೃಶ್ಯರ ಉದ್ಧಾರಕ್ಕಾಗಿಯೇ, ಮಹಾತ್ಮ ಗಾಂಧೀಜಿಯವರು ತಮ್ಮ ಜೀವನವಿಡೀ ಶ್ರಮಿಸಿದುದು, ಹೋರಾಡಿದುದು. ಅಂತಹ ಜನರಿಗೆ ಆಗ 'ಹರಿಜನ' ಎಂದು ಹೆಸರಿಟ್ಟುದು ಅಂತಹ ಜನರಿಗೊಂದು ಗಣನೀಯ ಸ್ಥಾನ ಕಲ್ಪಿಸಿದ ಗಾಂಧೀಜಿಯವರ ಪ್ರತಿ ತಮ್ಮಲ್ಲಿರುವ ಗಾಂಧೀ ಮನೋಭಾವವನ್ನು ಅಪರೋಕ್ಷವಾಗಿ ಮೆರೆದಿದ್ದಾರೆ. ನಿರ್ಲಕ್ಷಿತ ಜನರ ಬಗ್ಗೆ ಹೆಚ್ಚಿನ ಕಾಳಜಿ ತೋರಿದ್ದಾರೆ.

ಸನದಿಯವರ ಪ್ರತಿಯೊಂದು ಕವನವು ಜನಪರ ದೃಷ್ಟಿಯನ್ನುಳ್ಳದ್ದಾಗಿದೆ. ವ್ಯಕ್ತಿಗತಕ್ಕಿಂತ ಸಮಷ್ಟಿ ಪ್ರಜ್ಞೆಯೇ ಸನದಿಯವರಿಗೆ ಪ್ರಿಯವಾದುದು. ಪ್ರಕೃತಿಯ ರಂಗುರಂಗಿನ ವಿನ್ಯಾಸಗಳಿಗಿಂತ

ಜನರೊಡನೆ ಇರುವುದು ಮತ್ತು ಬರೆವುದು ಇಷ್ಟ. ಇಂಥ ಸಮುದಾಯದ ಯಾತನೆಗಳಿಗೆ ಅಭಿವ್ಯಕ್ತಿ ಕೊಡುವ ಪ್ರಯತ್ನವನ್ನು ಅವರು ಹೆಚ್ಚು ಕಾಳಜಿಯಿಂದ ಮಾಡುತ್ತಾರೆ. ಚೆಲುವಿನ ಬೆನ್ನು ಹತ್ತಿ ಲೋಲುಪತೆಯಲ್ಲಿ ಕಳೆದು ಹೋಗುವುದಕ್ಕಿಂತ 'ಬದುಕಿನೆಳೆಯಳಿ ಹಿಂಜಿ ಮೂಲವರಸುವ ಬಯಕೆ' ಅವರದ್ದು. ಆದ್ದರಿಂದ ಅವರಿಗೆ ಚೆಲುವಿಗಿಂತೆನಗಧಿಕತರವೀ ಬದುಕಿನೊಲವು'. ಸನದಿಯವರ ಕಾವ್ಯ ಕೃಷಿಯ ಆರಂಭಿಕ ಹಂತದ ಸುನೀತಗಳಲ್ಲೇ ಅವರ ಜನಪರ ಒಲವು ಮೂಡಿಕೊಂಡದ್ದು ಮಹತ್ವದ ಸಂಗತಿಯಾಗಿದೆ. ಈ ಕವಿಯ ಅಭಿಪ್ರಾಯದಲ್ಲಿ ಸೃಷ್ಟಿಗಿಂತ ಮಾನವ ದೃಷ್ಟಿಗೇ ಹೆಚ್ಚು ಮಹತ್ವವಿದೆ.

ಜನಪರ ಕವಿ ಸನದಿಯವರನ್ನು Committed Poet ಸಮಾಜವಾದಿ ಕವಿ ಎಂದು ಕರೆಯಬಹುದೇ? ಎಂದು ಚಿಂತಿಸಿದರೆ. ಘೋಷಿತ ಸಮಾಜವಾದಿ ಕವಿಗಳ ಹಾಗೆ ಸನದಿಯವರ ಕಾವ್ಯ ಯಾವುದೇ ರಾಜಕೀಯ ಸಾಮಾಜಿಕ ಸಿದ್ಧಾಂತವನ್ನು ಸಮರ್ಥಿಸಿ ಪ್ರಚಾರ ಪಡಿಸುವ ಉದ್ದೇಶ ಹೊಂದಿಲ್ಲ. ಅವರ ಕಾವ್ಯಕ್ಕೆ ಸಾಹಿತ್ಯಿಕ ಉದ್ದೇಶ ಮಾತ್ರ ಇದ್ದಂತಿದೆ. ಜನರ ಬಗೆಗಿನ ಅವರ ಕಳಕಳ ಒಂದು ಸಿದ್ಧಾಂತ ಜನ್ಯವಲ್ಲ: ಅನುಭವ ಜನ್ಯ: ಮನುಷ್ಯ-ಮನುಷ್ಯನಾಗಿ ಅನುಭವಿಸುವ ತುಡಿತ ಇದು. ವರ್ತಮಾನದ ಬಗ್ಗೆ ಅತೃಪ್ತಿ ಇರುವಾಗಲೂ ದ್ವೇಷ-ರೋಷ, ಆವೇಗ ಉದ್ವೇಗ ಕ್ರೋಧಾಕೋಶಗಳು ಅದರ ಸ್ಥಾಯಿಯಲ್ಲ. ಇದ್ದುದೆಲ್ಲವನ್ನೂ ನಿರಾಕರಿಸುವ, ತಿರಸ್ಕರಿಸುವ ಜಾಯಮಾನ ಇವರ ಕಾವ್ಯದ್ದಲ್ಲ. ವರ್ತಮಾನದ ಗರ್ಭದಿಂದಲೇ ಮಾನವ್ಯತೆ ತೆರೆಯಬೇಕು, ತೆರೆದೀತು ಎಂಬ ಅದಮ್ಯ ನಂಬಿಕೆ ಅವರ ಕಾವ್ಯದುದ್ದಕ್ಕೂ ಒಮ್ಮೊಮ್ಮೆ ವ್ಯಕ್ತವಾಗಿ ಇನ್ನೊಮ್ಮೆ ಸುಪ್ತವಾಗಿ ಪ್ರವಹಿಸುತ್ತಿರುತ್ತದೆ. ಯಾವುದೇ ಸಿದ್ಧಾಂತಕ್ಕಿಂತ ಮನುಷ್ಯನ ಅಪಾರ ಸಾಧ್ಯತೆಯಲ್ಲಿ ಕವಿಗೆ ವಿಶ್ವಾಸವಿದೆ. ಮನುಷ್ಯ ಪ್ರೀತಿಯಿಂದಲೇ ನವ ಸಮಾಜದ ನಿರ್ಮಿತ ಇದು ಸನದಿಯವರ ಕಾವ್ಯದ ನಿರಂತರ ಶ್ರುತಿ.

ಬದುಕಿನ ಕಟುವಾಸ್ತವ ಮತ್ತು ಜನವಿರೋಧಿ ಶಕ್ತಿಗಳ ಎದಿರು ವ್ಯಕ್ತಿಯ ಅಸಹಾಯಕತೆಯ ಪೂರ್ಣ ಅರಿವಿದ್ದೂ ಸನದಿಯವರ ಕಾಯ ಹತಾಶೆ, ಜಿಗುಪ್ಸೆಗಳಿಂದ ಪೂರ್ಣ ಮುಕ್ತವಾಗಿ ಜೀವನ ಶ್ರದ್ಧೆ ಮತ್ತು ಮಾನವೀಯತೆಯನ್ನೇ ಪ್ರತಿಪಾದಿಸುತ್ತಿರುವುದು ಗಮನಾರ್ಹ ಅಂಶವಾಗಿದೆ.

ಸನದಿಯವರ ಕಾವ್ಯ ಜನಪರ, ಜೀವನ ಪರ ಎಂದು ಈಗಾಗಲೇ ಗುರುತಿಸಲಾಗಿದೆ. ಎಲ್ಲ ಕಾವ್ಯ ಸಾಹಿತ್ಯ ಜೀವನಪರವೇ ಅಲ್ಲವೇ? ಆದರೂ ಸನದಿಯವರ ಕಾವ್ಯವನ್ನು ಜೀವನಪರ, ಜನಪರ ಎಂದು ವಿಶೇಷವಾಗಿ ಗುರುತಿಸಿದರಲ್ಲಿ ಅರ್ಥವಿಲ್ಲದಿಲ್ಲ. ಅವರು ಯಾವುದರ ಕುರಿತೇ ಕವನ ರಚಿಸಲಿ ಅದರ ಹಿಂದಿನ ಸಂವೇದನೆ ಮಾನವೀಯವಾದದ್ದು ಮತ್ತು ಅದರ ಗುರಿ ಜನಪರವಾದದ್ದು. ಕವನದ ವಸ್ತು ಸಾಮಾಜಿಕವಾಗಿರಬಹುದು. ರಾಜಕೀಯವಿರಬಹುದು, ಇಲ್ಲವೇ ನಿಸರ್ಗವೇ ಇರಬಹುದು. ಏನೇ ಇದ್ದರೂ ಮಾನವೀಯ ಅಂತಃಕರಣದ ಮಿಡಿತ ಎಲ್ಲೆಲ್ಲೂ ನಮ್ಮ ಅನುಭವಕ್ಕೆ ಬರುತ್ತದೆ. ಇಂಥ ಆತ್ಮ ನಿರೀಕ್ಷೆ ಆತ್ಮವಿಶ್ವಾಸ ಸನದಿಯವರ ಕಾವ್ಯದಲ್ಲಿ ನಾನು ಕಂಡಿದ್ದೇನೆ.

೪.೭ ಮಾನವೀಯ ಕಾಳಜಿ.

ನಮ್ಮ ಇಡೀ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಅನನ್ಯತೆ ಇರುವುದು ಮುಖ್ಯವಾಗಿ ಧರ್ಮ ದೊಡ್ಡದಲ್ಲ ಮಾನವ ಸಂಬಂಧ ದೊಡ್ಡದು ಎಂದು ಹೇಳುವಲ್ಲಿ ಪಂಪನಿಂದ ಹಿಡಿದು ಕುವೆಂಪು ತನಕ, ಕುಮಾರವ್ಯಾಸನಿಂದ ಹಿಡಿದು ಬೇಂದ್ರೆಯ ತನಕ, ಅಲ್ಲಮಪ್ರಭುವಿನಿಂದ ಹಿಡಿದು ಕಂಬಾರರ ತನಕ ಹಾಗೂ ನಮ್ಮ ಸಮಕಾಲೀನ ಅನೇಕ ಲೇಖಕರ ತನಕ ಈ ದರ್ಶನ ಅತ್ಯಂತ ಗಾಢವಾಗಿ ಮೂಡಿಬಂದಿದೆ. ಹತ್ತನೇಯ ಶತಮಾನದಲ್ಲಿಯೇ ಪಂಪ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಹೇಳಿದ್ದು, ಮಾನವ ಕುಲಕ್ಕೆ ಆತ ನೀಡಿದ ಬಹುದ್ದೊಡ್ಡ ಸಂದೇಶ. "ಜೀವನದಲ್ಲಿ ಕುಲದ ಬೆನ್ನಹತ್ತಬೇಡಿ, ಛಲದ ಬೆನ್ನುಹತ್ತಿ ದೊಡ್ಡದನ್ನು ಸಾಧಿಸಿ"[೬] ಎಂದು ಹೇಳಿದ ಪಂಪನ ಮಾತು ದೊಡ್ಡದು. ಪಂಪ ತನ್ನ ಕಾವ್ಯದಲ್ಲಿ ಧರ್ಮ ಮತ್ತು ಕಾವ್ಯ ಎರಡನ್ನೂ ಚಿತ್ರಿಸುತ್ತೇನೆಂದು ಹೇಳಿದ್ದರು. ಧರ್ಮ ಮೇಲುಗೈ ಸಾಧಿಸುವುದಕ್ಕೆ ಆತ ಬಿಟ್ಟು ಕೊಟ್ಟಿಲ್ಲ. ಇದು ಆತನ ಪ್ರತಿಭೆಯ ದೊಡ್ಡ ಸಾಧನೆ ಕಾವ್ಯವೇ ಆತನಲ್ಲಿ ಮೇಲುಗೈ ಸಾಧಿಸುತ್ತದೆ.

ಮನುಷ್ಯನೇ ತನ್ನ ಕಾಯಕದ ಮೂಲಕ ದೈವತ್ವಕ್ಕೇರುವ ಸ್ಥಿತಿ. ಮನುಷ್ಯನೇ ನಡೆದಾಡುವ ದೇವರು, ಧರ್ಮ ದೇವಾಲಯ ಆಗುವ ಸ್ಥಿತಿ. ವಚನಕಾರರು ಇದನ್ನು ನಡೆದಾಡುವ ದೇವಾಲಯ ಎಂದು ಕರೆದರು. ಕನ್ನಡ ಸಾಹಿತಿಗಳು ತಮ್ಮ ಕಾವ್ಯದಲ್ಲಿ ಧರ್ಮ ಮೇಲುಗೈ ಸಾಧಿಸಲು ಬಿಟ್ಟಿಲ್ಲ. "ನೂರು ದೇವರುಗಳ ನೂಕಾಚೆ ದೂರ, ಸತ್ತ ಕಲ್ಲುಗಳ ಮುಂದೆ ಅತ್ತು ಕರೆದುದು ಸಾಕು" ಆ ಮತ ಈ ಮತ ಸಾಕಿನ್ನು ಬನ್ನಿ ಮನುಜ ಮತಕ್ಕೆ – ವಿಶ್ವಪಥಕ್ಕೆ" ಹೀಗೆ ಜಾತಿ, ಮತ, ಧರ್ಮ ಮೌಢ್ಯವನ್ನು ಕುವೆಂಪು ಉಗ್ರವಾಗಿ ವಿರೋಧಿಸಿದ್ದಾರೆ. ಕುವೆಂಪು ಕೂಡ ಎಲ್ಲಾ ಸಾಂಸ್ಥಿಕ ಸ್ವರೂಪದ ದೇವರು, ಧರ್ಮ ದೇವಾಲಯಗಳನ್ನು ವಿರೋಧಿಸಿ ಮನುಷ್ಯನ ಅಸ್ತಿತ್ವ ಹಾಗೂ ನಿಸರ್ಗದ ಚೈತನ್ಯವೇ ದೊಡ್ಡದು ಎಂಬ ತಾತ್ವಿಕ ದರ್ಶನಕ್ಕೆ ಬಂದು ನಿಂತರು. ಹೀಗೆ ಯಾವುದೇ ಸಾಂಸ್ಥಿಕ ಧರ್ಮ ದೇವರು, ದೇವಾಲಯಕ್ಕಿಂತ ಮಿಗಿಲಾದುದು ಮನುಷ್ಯರ ನಡುವಿನ ಅದಮ್ಯ ಮಾನವ ಪ್ರೀತಿ ಎಂಬುದು.

ಸನದಿಯವರು ವಚನಕಾರರ ತಾತ್ವಿಕ ಅನುಭಾವ ಮತ್ತು ನವೋದಯ ಕವಿಗಳ ಆದರ್ಶವಾದ ರಮ್ಯತೆಯು ಅವರ ಕಾವ್ಯಪರಂಪರೆಗೆ ಬಳುವಳಿ ಕೂಡ ಅವರಿಗೆ ಮಾನವೋದಯದ ಕಾವ್ಯದ ಚಿಂತನೆ ಕೊರೆಯುತ್ತಲೇ ಇತ್ತು. ಹೀಗಾಗಿ ಅವರು ಸಮಕಾಲೀನ ಬದುಕಿನ, ಸಾಮಾಜಿಕ ಸಾಂಸ್ಕೃತಿಕ ಪರಿಸರದ ಹಿನ್ನಲೆಯಲ್ಲಿ ತನ್ನ ಕಾವ್ಯವನ್ನು ಅತ್ಯಂತ ಗಂಭೀರವಾದ ಇಕ್ಕಳದ ಸಮಸ್ಯೆಗಳಿಂದ ಬಿಡಿಸಿಕೊಳ್ಳಬೇಕಿತ್ತು. ಸನದಿಯವರು ನವೋದಯ ಜೀವೋತ್ಸಾಹ, ರಸೋತ್ಸಾಹ, ನಿಸರ್ಗಪ್ರೀತಿಯನ್ನೂ, ನವ್ಯದ ಅಭಿವ್ಯಕ್ತಿ ಸಹಜತೆ, ವಾಸ್ತವದ ನಿರೂಪಣೆಯನ್ನೂ ಹಾಗೂ ಪಡೆದದ್ದನ್ನು ನಿರಾಕರಿಸದೆ ಕಂಡದ್ದನ್ನು ಕಾಣುವಂತೆ ಹೇಳುವ ಕೌಶಲ್ಯವನ್ನು ಬೆಳೆಸಿಕೊಂಡವರು.

ಇಂಥ ಕಾವ್ಯವನ್ನೇ 'ಮಾನವ್ಯ ಕಾವ್ಯ'ವೆಂದು ಡಾ॥ ಗೌರೀಶ ಕಾಯ್ಕಿಣಿ ಕರೆದಿದ್ದಾರೆ. ಇಂಥ ಮಾನವ್ಯದ ಕಾವ್ಯವನ್ನೇ ಕವಿ ಸನದಿ ನಮಗೆ ನೀಡಿದ್ದಾರೆ. ಈ ಕಾವ್ಯದ ಪ್ರಮುಖ ಅಂಶವೆಂದರೆ ಅದರಲ್ಲಿಯ ಗಾಂಭೀರ್ಯ ಆಶಾವಾದ ಹಾಗೂ ಸ್ವಂತಿಕೆಯ ಸ್ಪಂದನ.

"ಬದುಕಿನ ಹೊಸತನದಾಸೆ ಭಾಷೆಗಳ

ಧ್ವನಿಯಾಗಿಳಿಯಿತು ಈ ಗೀತೆ।"

ಎಂದು ತಮ್ಮ ಕಾವ್ಯ ಸಂಕಲ್ಪವನ್ನು ಸನದಿ ವಿವರಿಸಿದ್ದಾರೆ. ಮನುಷ್ಯ-ಮನುಷ್ಯನನ್ನು ಗುರುತಿಸುವ ಹೃದಯವಂತಿಕೆಯನ್ನು ಕವಿಯ ಕವಿತೆಗಳು ಮೂಡಿಸುತ್ತವೆ. ಇಂಥ ಹೃದಯವಂತಿಕೆಯ ಚಿಲುಮೆ ಅವರಲ್ಲಿ ಎಂದಿಗೂ ಬತ್ತಿಲ್ಲ.

ಸನದಿಯವರ ಸಮಗ್ರ ಕಾವ್ಯದಲ್ಲಿ ವಿಡಂಬನೆಗಿಂತ ವಿಚಾರವಂತಿಕೆಯ ಅಂಶ ವಿಫುಲವಾಗಿದೆ. ಅಂತೆಯೇ ಅವರ ಕಾವ್ಯದಲ್ಲಿ ಪ್ರಾಬಲ್ಯತೆಯೂ ಹೆಚ್ಚು ಆಳವುಳ್ಳದ್ದು; ದುರ್ವಿಧಿಯ ಪ್ರತಿಭಟನೆಯಲ್ಲಿ ತೊಡಗಿದ ಅವರ ಧೀಮಂತಿಕೆ ಮುಖ್ಯವಾಗಿ ಮಾನವೀಯ ನೆಲೆಯದು; ಇಲ್ಲಿ ದೈವವಾದಕ್ಕಾಗಲೀ, ದೇವಭಕ್ತಿಗಾಗಲೀ, ಸಂಪ್ರದಾಯ ಪ್ರಿಯತೆಗಾಗಲೀ ವಿಶೇಷವಾಗಿ ನಂಬಿಲ್ಲ. ಈ ನಿಟ್ಟಿನಲ್ಲಿ ಈ ಕವಿಯು ಅಪ್ಪಟ ಮಾನವತಾವಾದದೊಡನೆ ಅಪ್ಪಟ ಲೌಕಿಕತೆ ಹಾಗೂ ಜಾತ್ಯಾತೀತ (Secular) ಜೀವನಶ್ರದ್ಧೆಯುಳ್ಳವರು. ಮನುಷ್ಯನನ್ನು ಮನುಷ್ಯತ್ವವನ್ನೂ ಗಾಢವಾಗಿ ಪ್ರೀತಿಸುವವರು. ಇವರ 'ಸಂಭವ' ದಲ್ಲಿಯ 'ನಾನಾರನೂ ದ್ವೇಷಿಸುವುದಿಲ್ಲ' ಎಂಬ ಕವನ ದೃಷ್ಟಿಯಿಂದ ತುಂಬಾ ಔಚಿತ್ಯಪೂರ್ಣವಾಗಿದೆಯೆಂದೇ ಅನಿಸುತ್ತದೆ. ಅದರ ಕೆಲವು ಸಾಲುಗಳು ಹೀಗಿವೆ:

"ಯಾರು ನಂಬಲಿ ಬಿಡಲಿ

ಯಾರೆಲ್ಲರ ಖುಷಿಗಾಗಿ

ಸುಮ್ಮ ಸುಮ್ಮನೆ ನಾನಾರನೂ ದ್ವೇಷಿಸುವುದಿಲ್ಲ."

'ನಾನಾರನೂ ದ್ವೇಷಿಸುವುದಿಲ್ಲ' ಕವನ ಸನದಿಯವರ ಧನಾತ್ಮಕ, ಜೀವನಾಭಿಮುಖ ನಿಲುವಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಬದುಕಿನ ಸಮೃದ್ಧಿ, ಸಾಫಲ್ಯ ದ್ವೇಷದಲ್ಲಿಲ್ಲ, ಪ್ರೀತಿಯಲ್ಲಿದೆ. ಎಂಬ ಕವಿಯ ನಂಬಿಕೆ ಇಲ್ಲಿ ವ್ಯಕ್ತವಾಗಿದೆ. ಮಾನವ್ಯತೆಯ ವಿಕಸನ ಮತ್ತು ದ್ವೇಷ ಮುಕ್ತವಾದ ಹೊಸ ಬದುಕನ್ನು ಕಾಣುವ ಅಭೀಪ್ಸೆ ಇವು ಸನದಿಯವರ ಕವನಗಳಲ್ಲಿ ತಿರುತಿರುಗಿ ಬರುವ ಸಂಗತಿಗಳೇ ಆಗಿವೆ.

ಪ್ರಿಯ ಬಾಂಧವರನ್ನು ಉದ್ದೇಶಿಸಿ ಕವಿ ಇಂದಿನ ಸಮಾಜದ ಶಾಪವಾದ ದ್ವೇಷದ ಬಗ್ಗೆ ಮಾತನಾಡುತ್ತಾರೆ. ತಾನು ಹೇಳಿದ್ದನ್ನು ಜನರು ನಂಬಲೇಕೆಂಬ ಹಟ ಕವಿಗಿಲ್ಲ. ನಂಬಲಿ ಬಿಡಲಿ ತನಗನ್ನಿಸಿದ್ದನ್ನು ಹೇಳಲು ಧೈರ್ಯವಿದೆ. 'ಯಾರೆಲ್ಲರ ಖುಷಿಗಾಗಿ ಸುಮ್ಮಸುಮ್ಮನೆ ನಾನಾರನೂ ದ್ವೇಷಿಸುವುದಿಲ್ಲ'. ಈ ಸಾಲು ಇಂದು ನಾವು ಕಾಣುವ ದ್ವೇಷದ ಸ್ವರೂಪ, ಲಕ್ಷಣಗಳನ್ನು ಸೂಚ್ಯವಾಗಿ ವ್ಯಾಖ್ಯಾನಿಸುತ್ತದೆ. ನಿಷ್ಕಾರಣ ವೈರ ಎಂದೂ ಸಲ್ಲ. ಆದರೆ ಇಂದು ದ್ವೇಷಕ್ಕೆ ಸಮರ್ಥನೀಯ ಕಾರಣ

ಇರುವುದಿಲ್ಲ. ಬೇಕಾಗಿಯೂ ಇಲ್ಲ. ರಾಜಕೀಯ–ಧಾರ್ಮಿಕ ನೆವಗಳು, ಜಾತಿ–ಮತ–ಧರ್ಮ–ಭಾಷೆ ಇವೆಲ್ಲ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿವೆ. ಇದು ಯಾರದೊ ಖುಷಿಗಾಗಿ, ಯಾವುದೇ ಸ್ವಾರ್ಥಕ್ಕಾಗಿ ಭುಗಿಲೇಳುವ. ದ್ವೇಷ. ದ್ವೇಷಕ್ಕಾಗಿ ದ್ವೇಷ ಅಷ್ಟೇ. ದ್ವೇಷಿಸುವವರಿಗಾಗಲೀ ದ್ವೇಷಕ್ಕೆ ಒಳಗಾಗುವರಿಗಾಗಲೀ ಕಾರಣ ಗೊತ್ತಿರುವುದಿಲ್ಲ. ಇಂಥ ನಿಷ್ಕಾರಣ, ಅವಿವೇಕಿ ದ್ವೇಷ ಸಮಾಜಕ್ಕೊಂದು ಶಾಪಷಾಗುತ್ತದೆ ಎಂದಿದ್ದಾರೆ.

ದ್ವೇಷದಿಂದಾಗುವ ಅನಾಹುತವನ್ನು ಸೂಚಿಸುತ್ತದೆ. ದ್ವೇಷದಿಂದ ದ್ವೇಷ. ದ್ವೇಷದಿಂದ ಎಂದೂ ಶಾಂತಿ–ಪ್ರೇಮ ನೆಲೆಗೊಳ್ಳಲಾರದು. ಪ್ರತಿಯೊಬ್ಬನು 'ಅವರಿವರ ಕೈತವಕೆ ಸಿಲುಕಿ'ದುದರಿಂದ ವ್ಯವಸ್ಥೆಯಿಂದ ಪ್ರತ್ಯೇಕಿಸಿ ವೈಯಕ್ತಿಕ ನೆಲೆಯಲ್ಲಿ ಯಾರನ್ನು ದ್ವೇಷಿಸುವುದೂ ನಿರರ್ಥಕವೆಂಬುದೇ ಇಲ್ಲಿಯ ಸಂಜ್ಞೆ. ಸನದಿಯವರೇ ತನ್ನ 'ಸಂಭವ' ಸಂಕಲನದ ನಿರೀಕ್ಷೆಯ ನುಡಿಯಲ್ಲಿ ಹೇಳಿದಂತೆ, "ನಾಳಿನ ನವ ಸಂಭವಕ್ಕಾಗಿ ಪರಿತಪಿಸುತ್ತಿರುವ ಇಂದಿನ ಮನುಷ್ಯನ ಕಳಕಳವನ್ನು ಕನ್ನಡಿಸುವ ಕವನಗಳವು".[೧೦] ಎಂದು ತಮ್ಮ ಕವನಗಳ ಆಶಯವನ್ನು ತಿಳಿಸಿದ್ದಾರೆ.

'ಮನೆ ಮನೆಗೆ ಬೇಲಿ' ಎಂಬುದು ನಮ್ಮ ಜೀವನದಲ್ಲಿನ ಸಂಕುಚಿತತೆಯನ್ನು ಎತ್ತಿ ತೋರಿಸುತ್ತದೆ. ಮನೆಮನೆಗೆ ಬೇಲಿ ಮನಮನಕೆ ಬೇಲಿ ಹೀಗೆ ಈ ಕವನದ ಪ್ರಾರಂಭ ನೀತಿ ನಿಯಮಾವಳಿಯ ಸೂತ್ರಗಳ ಬೇಲಿ. ಇಲ್ಲಿ ಬದುಕಿದ್ದವರ ಹೊಲ ಘುನೆಗೆ ಬೇಲಿ ಹೀಗೆ ನಾನಾ ವಿಧವಾಗಿ ನಾವು ನಮಗೆಲ್ಲರಿಗೂ ಬೇಲಿ ಹಾಕಿಕೊಂಡಿದ್ದೇವೆ ಎಂಬುದನ್ನು ಹೇಳಿದಾಗ ಇಂತಹ ಸಂಕುಚಿತತೆಯೇ ನಮ್ಮ ನಿತ್ಯದ ಜೀವನದ ಅನ್ಯೋನ್ಯತೆಗೆ ಘಾತುಕವೆಂಬ ನೀತಿಯನ್ನು ಸಾರುತ್ತಾರೆ. ನಮ್ಮ ನಾಡಿನ ಬದುಕು ಆಗಾಗ ಅಲ್ಲೋಲ ಕಲ್ಲೋಲವಾಗಲು ಇಂಥ ವಿಚಾರಗಳೇ ಮುಖ್ಯ ಕಾರಣವೆಂಬ ಧ್ವನಿ ಮಿಡಿಯುತ್ತದೆ. ಅದಕ್ಕೆ ಸಾಕ್ಷಿಯಾಗಿ ಒಂದು ಕವನ ಹೀಗಿದೆ:

"ಮನದಿಂದ ಮನೆಮನೆಗೆ
ಮನೆಯಿಂದ ಮಸಣಕ್ಕೆ
ಏಸೊಂದು ಏಸೊಂದು ಏಸೊಂದು ಬೇಲಿ."

ಇಲ್ಲಿ ಬೇಲಿಯನ್ನು ಕವಿಲೋಕದ ದೃಷ್ಟಿಯಿಂದಲೂ ನೋಡಿದ್ದಾರೆ. ತನ್ನ ಕಾವ್ಯದೃಷ್ಟಿಯಿಂದಲೂ ನೋಡಿದ್ದಾರೆ. ಇದನ್ನು ಕಿತ್ತೊಗೆಯಬೇಕು ಎಂದು ಕವಿ ಆಕ್ರೋಶದಿಂದ ಹೇಳುವುದಿಲ್ಲ. ಆದರೆ ಅವುಗಳು ಎಲ್ಲಿ ಬೇಕು, ಎಷ್ಟರ ಮಟ್ಟಿಗೆ ಬೇಕು ಎಂಬುದನ್ನು ಯೋಚಿಸಿದ್ದೇವೆಯೇ ಎಂದು ನಮ್ಮನ್ನು ಕೆದಕಿದ್ದಾರೆ.

ಕಟುವಾಸ್ತವವನ್ನು ಕುರಿತು ಚಿಂತಿಸಿದ ಕನ್ನಡ ಕವಿ ಸನದಿಯವರು ಭಾರತೀಯ ಜನಜೀವನದಲ್ಲಿ ಹೆಜ್ಜೆ ಹೆಜ್ಜೆಗೆ ಬೇಲಿಗಳು ನಿರ್ಮಾಣವಾಗಿ ಮನುಷ್ಯನ ನೆಮ್ಮದಿಗೆ ಮಾರಕವಾಗಿವುದನ್ನು ನೋವಿನಿಂದ ತಮ್ಮ 'ಮನೆಮನೆಗೆ ಬೇಲಿ' ಎಂಬ ಕವನದಲ್ಲಿ ದಾಖಲಿಸಿದ್ದಾರೆ. ಬೇಲಿಯರಿಯದ ಮುಗಿಲ ಮಂಟಪದಡಿಗೆ ಮನೆಮನೆಗೆ ಬೇಲಿ ಬೇಕೆ? ಮನಮನಕ್ಕೆ ಬೇಲೆ ಬೇಕೆ?

"ಯುಕ್ತ ಬದುಕಿನ ಕೀಲಿ।
ಆಗ ಬೇಕೇತಕ್ಕೆ
ಬೇಲಿಯರಿಯದ ಮುಗಿಲ ಮಂಟಪದಡಿಗೆ
ಮನೆಮನೆಗೆ ಬೇಲಿ
ಮನೆಮನೆಕೆ ಬೇಲಿ"

ಮನುಷ್ಯನ ಘನತೆಗೂ ಅವನ ನೆಮ್ಮದಿಯ ಬದುಕಿಗೂ ಆತಂಕವೊಡ್ಡುವ ಪರಂಪರೆಯ ಪೊರೆಗಳನ್ನು ತರತರದ ಬೇಲಿಗಳನ್ನೂ ಬುಡಸಹಿತ ಕಿತ್ತು ಹಾಕುವ ಹಾಗೂ ಮುಗಿಲ ಮಂಟಪದಡಿಗೆ ಹಾಯಾಗಿ ಉಸಿರಾಡುವ ಹೊಸ ಮನುಷ್ಯನನ್ನು ಕಾಣುವ ತವಕ ಸನದಿಯವರದಾಗಿದೆ. 'ಮನೆಮನೆಗೆ ಬೇಲಿ' ಕವನ ಮಾನಸಿಕ ಪ್ರತ್ಯೇಕತೆಯನ್ನೂ ಅದರಿಂದ ಹುಟ್ಟುವ ವಿಷಾದ ಭಾವವನ್ನು ಬಿಂಬಿಸುತ್ತದೆ. ತನ್ನ ಸುತ್ತಲೂ ವರ್ತುಲವೊಂದನ್ನೆಳೆದುಕೊಂಡು ಅದರೊಳಗೇ ಸುತ್ತುವ ಸ್ವಕೇಂದ್ರಿತ ಪ್ರಜ್ಞೆಯನ್ನು ಇದು ವಿಡಂಬಿಸುತ್ತದೆ.

ಈ ಕವಿ ಮುಖ್ಯವಾಗಿ ಮಾನವತೆಯ ಉಪಾಸಕರು. ಈ ಕವಿಯೇ ತಮ್ಮ 'ಜನಕಾವ್ಯದೃಷ್ಟಿ'ಯಲ್ಲಿ ಹೇಳಿಕೊಂಡಂತೆ, "ನಿಜವಾದ ಸಾಹಿತ್ಯ ಅಥವಾ ಕಾವ್ಯರಚನೆಗೆ ಮೂಲಕೇಂದ್ರ ಬಿಂದು ಮನುಷ್ಯ: ಮನುಷ್ಯ ಜೀವನ. ಆದರೆ ಈ ಮನುಷ್ಯ ಸಮಾಜ ಜೀವಿಯಾದುದರಿಂದ ಆಯಾ ಕಲಾಸೃಷ್ಟಿಯ ಕೇಂದ್ರಬಿಂದುವಾಗಿ ನಿಲ್ಲುತ್ತಾನೆ. ಅಂತೆಯೇ ಒಂದು ಸಾಮಾಜಿಕ ಪರಿವರ್ತನೆ ಸಂಭವಿಸಬೇಕಾದರೆ ಮುಖ್ಯತಃ ಮನುಷ್ಯನ ಮನಸ್ಸಿನಲ್ಲಿ ಪರಿವರ್ತನೆ ಸಂಭವಿಸಬೇಕು. ಕ್ರಿಯೆಗೆ ಆಯಾ ಕಾಲದ ಸಾಹಿತ್ಯವೊಂದು ಸಚೇತಕ ಶಕ್ತಿಯೂ ಹೌದು; ಸಂವಾಚಕ ಶಕ್ತಿಯೂ ಹೌದು" ಕವಿ ಸನದಿಯವರು ಎಲ್ಲಿದ್ದರೂ, ಎಂತಿದ್ದರೂ ಮಾನವೀಯ ಸಂಬಂಧಗಳ ಬಗೆಗಿನ ತಮ್ಮ ಅದಮ್ಯವಾದ ಶ್ರದ್ಧೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದವರಾಗಿದ್ದಾರೆ.

ವಿಶ್ವ ದೇಶದ ಯಾವುದೇ ಒಂದು ಪ್ರದೇಶದಲ್ಲಿ ಮತೀಯ ಗಲಭೆಗಳಾದಾಗ ಧರ್ಮದ ಹೆಸರಿನಲ್ಲಿ ದಂಗೆಗಳೆದ್ದಾಗ ಹಾನಿಯಾಗುವುದು ಯಾವ ಮತಕ್ಕಲ್ಲ, ಧರ್ಮಕ್ಕಲ್ಲ, ಮನುಷ್ಯನಿಗೆ, ಮನುಷ್ಯ ಜೀವನಕ್ಕೆ! ಉದಾ: ೧೯೬೯ರಲ್ಲಿ ಸನದಿಯವರು ಅಹಮ್ಮದಾಬಾದ್‌ನಲ್ಲಿದ್ದಾಗ ನಡೆದ ಮತೀಯ ಗಲಭೆಗಳಿಂದಾದ ಕಷ್ಟ-ನಷ್ಟಗಳ ಹಿನ್ನೆಲೆಯಲ್ಲಿ ಈ ಕವಿಮನ ಕಳವಳ ಕಕ್ಕುಲಾತಿಯಿಂದ ಒಡಮೂಡಿದ ಪರಿ ಹೀಗಿದೆ:

"ಈಶ್ವರ ಅಲ್ಲಾ ತೇರೇ ನಾಮ್
ಸಬ್‌ಕೋ ಸನ್ಮತಿ ದೇ ಭಗವಾನ್
....
ಗೀತ ಬರೆವುದು ಕಷ್ಟ

ಓದಿ ನಡೆವುದು ಕಷ್ಟ

ಅಣಕ ಮಾಡುವುದೇನು ಮಹಾಕಷ್ಟಸ್ವಾಮಿ।

ಈಶ್ವರ-ಅಲ್ಲಾ ತೇರೆ ನಾಮ್

ಗಲೀಗಲೀಮೇ ಕರೇ ಬದನಾಮ್

ಕುರಿಯ ಹಿಂಡಿಗೆ ಇಂಥ ಅಣಕವಾಡನು ಕಲಿಸಿ

ಬೀದಿಗಿಳಿಸಿದ ಬಳಿಕ ಕೇಳಬೇಕೇ

ನೆಲದಿಮದ ಆಕಾಶ ತುಂಬುವೊಲು ಕಿರುಚುವವು".

ಇಲ್ಲಿ ಅವರು ಇವರು ಎಂಬ ಭೇದದ ಗೆರೆಯಿಲ್ಲ, ಬರೆಯಿಲ್ಲ.

ಇಂದಿನ ಆಧುನಿಕ ಜಗತ್ತಿನಲ್ಲಿ ಮನುಷ್ಯ ಸಹಜ ಮಾನವೀಯ ಗುಣಗಳನ್ನು ಕಳಚಿಕೊಳ್ಳುತ್ತಿರುವುದನ್ನು ಗಮನಿಸಿದ ಕವಿಯು ತನ್ನ ಕಾವ್ಯದ ಮೂಲದ ತನ್ನ ಮನದಲ್ಲಿರುವ ವೇದನೆಯನ್ನು ಈ ರೀತಿ ಅಭಿವ್ಯಕ್ತಿಸಿದ್ದಾರೆ.

ಸನದಿಯವರು ನಮ್ಮ ಸಮಾಜದ ಒಂದು ಜ್ವಲಂತ ಸಮಸ್ಯೆ, ನಮ್ಮ ಜಾತ್ಯಾತೀತ ಸಾಮಾಜಿಕ ವ್ಯವಸ್ಥೆಗೆ ಸವಾಲಾಗಿರುವ ಮಾನವೀಯ ದ್ವೇಷದ ಬಗ್ಗೆ ವ್ಯಗ್ರತೆಯಿಂದ ಸಮಸ್ಯೆಯ ಸಾಂಸ್ಕೃತಿಕ ಆಯಾಮವನ್ನು ತಡೆದು ತೋರುವ ಪ್ರಯತ್ನ ಮಾಡಿದ್ದಾರೆ. ಒಬ್ಬ ಬಂಡಾಯಗಾರನ ಸ್ಲೋಗನ್ ಆಗಲಿ, ಕ್ರಾಂತಿಕಾರನ ಸೋಗಾಗಲೀ ಇಲ್ಲಿ ಇರದಿರುವುದರಿಂದಲೇ ಅದು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಹಾಗಂತ ಒಬ್ಬ ದೈವವಾದಿಯ ಶರಣಾಗತಿಯೂ ಇದಲ್ಲ, ಚಾರಿತ್ರಿಕ ಪ್ರಜ್ಞೆಯುಳ್ಳ ಜಾತ್ಯಾತೀತ ಮಾನವತಾವಾದಿಯ ಸಂವೇದನೆ ಇವರ ಕಾವ್ಯದಲ್ಲಿ ಸಮರ್ಥವಾಗಿದೆ.

೪.೨ ಸನದಿಯವರ ಕಾವ್ಯ, ಜೀವನ ಲೇಖನ, ವ್ಯಕ್ತಿತ್ವ ಕುರಿತ ಕವಿಗಳ ಅಭಿಪ್ರಾಯಗಳು

೧ ಆಶಾಕಿರಣ (೧೯೫೪-೫೭)

ಹೊಸಗನ್ನಡ ಕಾವ್ಯದ ಪ್ರವಾಹದಲ್ಲಿ ಪಡುವಣದಿಂದ ಬಂದು ಸೇರಿದ ತೊರೆಗಳಲ್ಲಿ ಸಾನೆಟ್ ಅಥವಾ ಸುನೀತ ಒಂದಾಗಿದೆ. 'ಮಲಾರ'ದಂತೆ ಅದಕ್ಕೆ ಮೀಸಲಾದ ಸಂಗ್ರಹಗಳು ಪ್ರಕಟವಾಗಿವೆ. ಅವುಗಳಿಗೆ ಹೊಸ ಸೇರ್ಪಡೆಯೆಂದರೆ ಶ್ರೀ ಸನದಿಯವರ ಈ 'ಆಶಾಕಿರಣ'. ಈ ಸಂಗ್ರಹದಲ್ಲಿ ನಾಲ್ವತ್ತು ಸುನೀತಗಳಿರುತ್ತವೆ. ಬೇರೆ ಬೇರೆ ಸಂದರ್ಭ, ವಿಷಯ ಮನೋಲಹರಿ, ಶೈಲಿ ಇವುಗಳಲ್ಲಿ ಈ ಕವಿ ಬರೆದಿರುವುದಾದರೂ ಸುನೀತ ಛಂದೋಬಂಧವು ಇವುಗಳ ಒಂದುತನವನ್ನು ಸಲಿರುತ್ತದೆ.

'ಆಶಾಕಿರಣ'ದ ಒಳ್ಳೆಯ ಭಾಗಗಳಲ್ಲಿ ಸುನೀತದ ರಸಾನುಭವವನ್ನು ಪಡೆದು ನಾನು ಸಚಿತುಷ್ಟನಾಗಿದ್ದೇನೆ. ಕವಿಜೀವದ ಸರಳವಾದ, ಪ್ರಾಮಾಣಿಕವಾದ ಮೊರೆತ, ವಿಚಾರಧಾರೆ, ಅಂತಸ್ಸತ್ವ ಇವನ್ನು ಹಲವು ಸುನೀತಗಳು ಸರಿಯಾಗಿ ವ್ಯಕ್ತಗೊಳಿಸಿರುತ್ತವೆ. ಒಂದು ಸೂಕ್ಷ್ಮ ಸಂವೇದನೆ,

ಅಂತರ್ದೃಷ್ಟಿ. ಸಂಗ್ರಹ ಶಕ್ತಿ ಇವುಗಳಿಂದ ಸನದಿಯವರು ಸುನೀತದಲ್ಲಿ ತಮ್ಮ ಜೀವಾಳವನ್ನು ಎರಕ ಹೊಯ್ಯಬಲ್ಲರು ಎಂಬುದಕ್ಕೆ ಈ ಕವನಗಳು ಸಾಕ್ಷಿಯಾಗಿರುತ್ತವೆ.

ಶ್ರೀ ಸನದಿಯವರ ಕಾವ್ಯ ಶಕ್ತಿಗೆ ಸಾಕಷ್ಟು ಕಹಿಯಾದ. ಆದರೂ ಸಿಹಿಯನ್ನು ಕಳೆದುಕೊಳ್ಳದ ಅನುಭವದ ಹಿನ್ನೆಲೆಯಿದೆ. ಆಶಾವಾದಿಯಾದ ಮನೋಭೂಮಿಕೆಯಿದೆ. ಅವರ ಬವಣಿಗೆಗೆ ಒಂದು ಹದವಿದೆ. ಸವಿಯಿದೆ. ಅವರ ಅಭಿವ್ಯಕ್ತಿ ಸಚಿತತ ಧಾರೆಯಾಗಿ ಹರಿಯಲಿ ಎಂದು ನನ್ನ ಹಾರೈಕೆ.

– ರಂ.ಶ್ರೀ.ಮುಗಳಿ

(೨೪.೦೫.೧೯೫೭)

೨. ತಾಜಮಹಲು (೧೯೫೯–೬೨)

ಶ್ರೀ ಸನದಿಯವರು ತರುಣರು. ಮದುವೆಯಾಗಿ ಈಗ ತಾನೆ ಮೊದಲ ಮಗುವನ್ನು ಕಂಡಿದ್ದಾರೆ. ಅದಕ್ಕೂ ಮೊದಲು ಬಾಳನ್ನು ಬೆಳಗಬಂದ ತನ್ನವಳಿಗೆ 'ತಾಜಮಹಲ'ನ್ನು ಅರ್ಪಿಸಿದ್ದಾರೆ.ತಾಜಮಹಲು ನಾಲ್ವತ್ತೆರಡು ಭಾವಗೀತೆಗಳ ಸಂಗ್ರಹ – ಒಂದು ಬಗೆಯ ಖಂಡಕಾವ್ಯ ಎನ್ನಬಹುದು. ಮದುವೆಗೂ ಮೊದಲು ಕಂಡ ವಾತ್ಸಲ್ಯದ ಕೃತಜ್ಞತೆಯಲ್ಲಿ ಅಂಕುರಿಸಿದ 'ಪ್ರೀತಿ'- ಒಲವು. ಬಳ್ಳಿಗೆ– ಮಂಟಪ. ಮಂಟಪಕ್ಕೆ ಬಳ್ಳಿ ಎಂಬ ಅನ್ಯೋನ್ಯಾಶ್ರಯದಲ್ಲಿ ಮಂಡನಗೊಂಡು. ಹೂಗೊಂಡು. ಸಫಲತೆಯ ದಿಕಕಿಗೆ ಮುಖ ಮಾಡಿದಾಗ 'ಅಖಂಡಪ್ರೀತಿ' ಭಾವಗೀತಿಗಳ ಖಚಿಡ ಖಚಿಡ ಶರ್ಕರಾ ಪಿಂಡವಾಗಿ ರಾಶಿಗೊಂಡದ್ದು ಒಂದು ಕ್ಷೇಮ. ಒಂದು ಯೋಗ.

ಸನದಿಯವರ 'ತಾಜಮಹಲು' ಶಲೆ. ಕಾಲೇಜುಗಳಲ್ಲಿ ಕಟೆದ ಅಮೃತಶಿಲೆಗಳಿಂದ ಕಟ್ಟಿದ್ದು. ಸಲ್ಲದ ಒಯ್ಯಾರ. ಇಲ್ಲದ ಕೃತಕತೆ ಈ ಶಿಲ್ಪದಲ್ಲಿಲ್ಲ. ಅದು ಭಾವ-ಪ್ರಾಮಾಣಿಕತೆಗೆ ಮೀಸಲಾಗಿ. ಉಚಿಡ ಉಪ್ಪಿಗೆ. 'ಕಂಡ ತಪ್ಪಿಗೆ' ಅಖಂಡ ಲಾವಣ್ಯವನ್ನು ಪ್ರಕಟಿಸಿದೆ. ..ಹಸಿಯನ್ನು ಹದಗೆಡಿಸದೆ. ಬಿಸಿಯನ್ನು ಆರಗೊಡದೆ ಈ ತರುಣ ಕವಿ ಪ್ರೀತಿದೇವತೆಗೆ ಸಾಹಿತ್ಯಪಾಕದ ಎಡೆ ತೋರಿಸಿದ್ದಾಖುಎ. ಮೀಸಲು ಮುರಿದ ಮೇಲೆ ಪನಿವಾರ ಹಂಚುವದು ಸಭ್ಯನೀತಿ. 'ಸ್ನಿಗ್ಧಜನ ಸಂವಿಭಕ್ತ'-ಸುಖವು ರಸಿಕ್ಖರಿಗೆ ನೈವೇದ್ಯವಾಗಿ. ಸಹ್ಯವೇದನೀಯವಾಗಬೇಕು.

ಈ 'ಭಾವಗೀತಿ'ಗಳ ಉಕ್ತಿ ಸಂಪತ್ತು ಸ್ಪೃಹಣೀಯವಾಗಿದೆ. 'ಹಾಫಿಜ-ರೂಮಿ'ಗಳ ನೆನಪು ಮಿಚಿಚಿ ಮಾಯಾವಾಗುತ್ತದೆ. 'ಉಮರ'ನು ಬಿರುಗಾಳಿಯಾಗಿ ಬೀಸಿಲ್ಲ.

'ತಾಜಮಹಲು' ಹೃತಾತ್ಮತೆಯ ಸ್ಮಾರಕವಲ್ಲ. ಅಮೃತದ ಝರಿ. ಕಸರಿಲ್ಲದ ರಸವು. ರಸದಿಂದ ರಸಕ್ಕೆ ಹರಿಯಲಿ ಎಂದು ಹರಸಲಿ ಮುನ್ನುಡಿಯನ್ನು ಮುಗಿಸುತ್ತೇನೆ.

– ದ.ರಾ.ಬೇಂದ್ರೆ

(೨೪.೧೨.೧೯೬೨)

೩. ಧ್ರುವಬಿಂದು (೧೯೬೩-೬೫)

ನನ್ನ ತರುಣ ಮಿತ್ರರಾದ ಶ್ರೀ ಸನದಿಯವರ ಕಾವ್ಯ ಒಂದು ದಿಟ್ಟ ಹೆಜ್ಜೆಯನ್ನು ಮುಂದಿಟ್ಟಿದೆ. ಮಹಾವ್ಯಕ್ತಿಗಳ ಮರಣವನ್ನು ಕುರಿತು ಬರೆದ ಕವಿತೆಗಳೂ, ಚೀನದ ಆಕ್ರಮಣದ ಕಾಲಕ್ಕೆ ಬರೆದ ಕವಿತೆಗಳೂ ಸನದಿಯವರು ಮೊದಲಿಗೂ ಬರೆಯಬಹುದಾಗಿತ್ತು. ಆದರೆ ಅವರಸರ-ಅಪಪ್ರಸ್ವರ, ಸಲ್ಲದು, ಮೊದಲಾದ ಕವಿತೆಗಳಲ್ಲಿ ಕಟು ಅನುಭವದೊಡನೆ ಸಹಕರಿಸಬಲ್ಲ ಮೃದುತೆ, ನಗರ ಜೀವನವನ್ನು ಕುರಿತು ರಚಿಸಿದ ಅನೇಕ ಕವಿತೆಗಳ ರೌದ್ರದೊಡನೆ ಬೆರೆತುಕೊಂಡ ಹಾಸ್ಯ, 'ರೈಲಿನಲ್ಲಿ ಬರೆದ ಸಾಲುಗಳು' ಎಂಬ ಕವಿತೆಯ ಪ್ರಸನ್ನತೆ ಹಾಗೂ ಧ್ರುವಬಿಂದು ಎಂಬ ಕವಿತೆಯ ಸಂಕೀರ್ಣತೆ ಅವರ ಕಾವ್ಯದಲ್ಲಿ ನವೀನ ಪ್ರಸಾದ ಚಿನ್ಹೆಗಳಾಗಿವೆ. ಈ ಕವಿತೆಗಲ್ಲಲಿಯು ಶೈಲಿಯಲ್ಲಿಯೂ ಒಂದು ನವೀನತೆ ಕಾಣಿಸಿಕೊಂಡಿದೆ.

ಶ್ರೀ ಸನದಿಯವರ ಕಾವ್ಯದಲ್ಲಿ ಬುದ್ಧಿ-ಹೃದಯಗಳ ಸಮ್ಮಿಲನ ನಗರ ಜೀವನವನ್ನು ಕುರಿತ ಅವರ ಕವಿತೆಗಳಲ್ಲಿ ಕಾಣಿಸಿಕೊಂಡಿದೆ. 'ಧ್ರುವಬಿಂದು' ವಿನಲ್ಲಿಯೂ ಅದನ್ನು ನೋಡಬಹುದು. ಬಳಕೆಗನ್ನಡದ ಮೆರುಗೂ ಇಲ್ಲದೆ. ಈ ಕವಿತೆಗಳಲ್ಲಿ ಛಂದಸ್ಸು ಭಾವಕ್ಕೆ ತಕ್ಕಂತೆ ಬದಲಿಸುತ್ತದೆ. ರಚನಾ ಕ್ರಮದಲ್ಲಿಯೂ ಒಂದು ವಿವರಪೂರ್ಣ ಅವ್ಯಾಹತ ಕ್ರಮವಿದೆ. ಆದರೆ 'ಗುಪ್ತ ಸ್ಥೂಲಾರ್ಥ' ಹಾಗೂ 'ಪ್ರತಿಮಾ ವ್ಯಾಕರಣ'ಗಳು ಮಾತ್ರ ಅವರ ಕಾವ್ಯದಲ್ಲಿ ಸುಳಿದು ಅದನ್ನು ಕ್ಲಿಷ್ಟವಾಗಿ ಮಾಡಿಲ್ಲ.

ಶ್ರೀಮಾನ್ ಸನದಿಯವರ ಕಾವ್ಯ ತನ್ನ ಸತ್ವವನ್ನೂ ಪ್ರಯೋಗಶೀಲತೆಯನ್ನು ಕುಡಿಯೇ ಕಾಯ್ದುಕೊಳ್ಳಲಿ.

-ವಿ.ಕೃ.ಗೋಕಾಕ

(೧೬.೧೦.೧೯೬೫)

೪. ಪ್ರತಿಬಿಂಬ (೧೯೬೫-೬೭)

ಸನದಿಯವರು ತಮ್ಮ ಕಲೆಯಲ್ಲಿ ಪರಿಶ್ರಮಿಸಿ ಸಂತೋಷಗೊಳ್ಳುವ ಕವಿ. ಬಹುಶಃ ಪ್ರಣಯ ವಾತ್ಸಲ್ಯಗಳೆಂಬ ಆರ್ಷೆಯ ಭವಗಳು ಛಂದೋನುವರ್ತಿಗಳಾಗಿ ಬಾಳಲು ಇಷ್ಟಪುಡತ್ತವೋ ಏನೋ. ಪ್ರೇಮದ ಪೂರ್ವರಂಗ ಉತ್ತರರಂಗಗಳೆರಡರಲ್ಲೂ ಸರಳವೂ ಮಧುರವೂ ಪ್ರಕೃತಿ ಶೃತಿಲಯಬದ್ಧವೂ ಆದ ಭಾವಗಳನ್ನು ಕವಿ ಈ ಕವನಗಳ ಅಕೃತ್ರಿಮ ಸಂವಿಧನಗಳಲ್ಲಿ ಸಾಕ್ಷಾತ್ಕರಿಸಿರುವುದು ಅಭಿನಚಿದನೀಯವಾಗಿದೆ. ಶೃಂಗಾರ ಮತ್ತು ವಾತ್ಸಲ್ಯ ಭಾವಗಳನ್ನು ಕವನದಲ್ಲಿ ನವೋನವ. ನಿಜ ನಿಜ, ಎನಿಸುವುದು ತುಂಬ ಕಷ್ಟದ ಕೆಲಸ. ಇಲ್ಲಿಯ ಕೆಲವು ಕವನಗಳಲ್ಲಿ ಇವು ಸಿದ್ಧಿಸಿರುವಚಿತಿವೆ. ಇಂಥ ಕವನಗಳಿಗೆ ಯಾರ ಮುನ್ನುಡಿಯೂ ಅವಶ್ಯಕವೇ ಇಲ್ಲ. ಏಕೆಂದರೆ ಅವರೇ ಹೇಳಿರುವಚಿತೆ:

ನಾದಕೆ ಮೋದವು ತಾಳಿಯ ಕಟ್ಟಲು

ಮತ್ತೇತಕೆ ಹೊಸ ಆಭರಣ?

ಚಿಕ್ಕವಾದರೂ ಚೊಕ್ಕವಾದ ಈ ಕವನಗಳ ಸ್ವಾರಸ್ಯವನ್ನು ಅವರು ಇಬ್ಬನಿಯನ್ನು ಕುರಿತು ಬರೆದಿರುವ ಒಂದು ಕವಿತೆಯ ಸಾಲು ಬಹು ಚೆನ್ನಾಗಿ ನಿರೂಪಿಸುತ್ತದೆ.

ಈ ಕವಿಗೂ ಅವರ ಈ ಕೃತಿಗೂ ಸಹೃದಯರ ಒಲವನ್ನು ಮನಃಪೂರ್ವಕವಾಗಿ ಕೋರುತ್ತೇನೆ.

–ಡಾ.ಪು.ತಿ.ನರಸಿಂಹಾಚಾರ್

(೧೬.೧೨.೧೯೬೭)

೫. ಮನೆ ಮನೆಗೆ ಬೇಲಿ (೧೯೭೯–೮೧)

ಸನದಿಯವರು ; ಣ್ಣ ಕಥೆಗಳನ್ನು ಬರೆದಿದ್ದಾರೆ; ಗೀತರೂಪಕಗಳನ್ನು ರಚಿಸಿದ್ದಾರೆ; ಅನುವಾದ ಮಾಡಿದ್ದಾರೆ; ತಮ್ಮ ಕಾವ್ಯರಚನೆಯ ಪ್ರಾಂಭದಲ್ಲಿಯೇ ಶಿಶುಸಾಹಿತ್ಯಕ್ಕೆ ವಿಶೇಷವಾದ ಕೊಡುಗೆಯನ್ನು ನೀಡಿದ್ದಾರೆ. ಆದರೆ, ಇವೆಲ್ಲಕ್ಕಿಂತ ಹೆಚ್ಚಾಗಿ ಹಾಗೂ ಮುಖ್ಯವಾಗಿ ಕಾವ್ಯಕ್ಷೇತ್ರದಲ್ಲಿ ಅವರು ಮಾಡಿರುವ ಕೃಷಿ ಗಮನಾರ್ಹವಾದದ್ದು.. ಮುಕ್ತಮನಸ್ಸಿನ, ಸರಳ ಹಾಗೂ ಪ್ರಾಮಾಣಿಕ ಜೀವಕ್ಕೆ ತನ್ನ ಬದುಕಿನ ಮಿತಿಯಲ್ಲಿ ಏನೇನು ಕಾಣಬಹುದೊ, ಯಾವ ಯಾವ ಅನುಭವಗಳು ಬಂದೊದಗಬಹುದೊ, ಅವುಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ಆಯಾ ಕಾಲದ ಕಾವ್ಯರ್ಚನೆಯ ಒಲವು–ನಿಲವಿನೊಂದಿಗೆ ಇವರು ಮೂಡಿಸುತ್ತ ಬಂದಿದ್ದಾರೆ. ಸಾಮಾಜಿಕವಾಗಿ ಜನತೆಯೊಡನೆ ಎಲ್ಲ ಸನ್ನಿವೇಶಗಳಲ್ಲಿ ಒಂದಾಗಿ, ತಮ್ಮ ಸಾಮರ್ಥ್ಯಕ್ಕನುಸರಿಸಿ ಅದಕ್ಕೆ ನುಡಿಗೊಟ್ಟಿದ್ದಾರೆ. ಭಾವಗೀತೆಗೆ ಅವರು ಎತ್ತಿದ ಕೈಯಾದರೂ ಭಾವ ಬುದ್ಧಿಗಳನ್ನು ಮಿದ್ದಿ ಹದಗೊಳಿಸುವಲ್ಲಿ ಪ್ರಸಾದ ಗುಣವನ್ನೇ ತೋರಿದ್ದಾರೆ; ಜೊತೆಗೆ ವಿನೋದ ಗುಣವನ್ನೂ ಮೆರೆದಿದ್ದಾರೆ.

ಕಣಕದ ಸಣ್ಣ ಉರುಳಿಯನ್ನೇ ಹೊಸ ಹೊಸೆದು ಸೇವಿಗೆಯನ್ನು ಬಳ್ಳಿ ಬಳ್ಳಿಯಾಗಿ ತೋರಣ ಕಟ್ಟುವಚಿತೆ ಇಲ್ಲಿಯ ಕವನಗಳಲ್ಲಿ ವಸ್ತು ವಿನ್ಯಾಸಗೊಳ್ಳುತ್ತ ಹೋಗುತ್ತದೆ. 'ಮನೆಮನೆಗೆ ಬೇಲಿ' ಹೇಗೆ ವಿವಿಧ ರೂಪಗಳಲ್ಲಿ ಮನಮನದ ಬೇಲಿಯೂ ಆಗಿ ಪರಿಣಮಿಸಿದೆಯೆಂಬುದನ್ನು ಚಿತ್ರಿಸುತ್ತ ಅಲ್ಲಲ್ಲಿ ಅನುಭವದ ಬೇರೆ ಬೇರೆ ಮಗ್ಗಲುಗಳನ್ನೂ ತೆರೆಯುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಆಗೀಗ ಏಳುವ ಗೊಂದಲಗಳನ್ನು ತಲೆಗೆ ಹಚ್ಚಿಕೊಳ್ಳದೆ, ತಮ್ಮ ಅನುಭವ, ಅನಿಸಿಕೆಗಳನ್ನು ಕಾವ್ಯದ ಮೂಲಕ ನಿವೇದಿಸುತ್ತ, ಸ್ವಂತಿಕೆ ಹಾಗೂ ಸಹಜ ಬೆಳವಣಿಗೆಯ ದಾರಿಯಲ್ಲಿ ಸಾಗಿರುವ ಸನದಿಯವರ ಸಾಧನೆ ಮೆಚ್ಚುವಂತಹದು.

– ಚೆನ್ನವೀರ ಕಣವಿ

(೫.೫.೧೯೮೧)

೩. ಸಂಭವ (೧೯೮೪-೯೧)

ಶ್ರೀ ಸನದಿಯವರು ತಮ್ಮ ಕಾವ್ಯ ಸಂವಾದದ ಮೂಲಕವಾಗಿಯೇ ಒಂದು ಬಗೆಯ ಚಿತ್ತಸ್ವಾಸ್ಥ್ಯವನ್ನೂ ಆತ್ಮ ಪ್ರತ್ಯಯವನ್ನೂ ಗಳಿಸಿಕೊಂಡು, ಯಾವ ಸಾಹಿತ್ಯಕ ವಾಗ್ವಾದಗಳ ಸುಳಿಗಳಿಗೂ ಸಿಕ್ಕಿಕೊಳ್ಳದೆ ತಮ್ಮ ನಂಬಿಕೆಯ ನೆಲೆಯಲ್ಲಿ ನಿಂತು ತಮ್ಮ 'ಪಾಡಿಗೆ' ತಾವು ಬೆಳೆದು ಬಂದವರು. ಬದುಕಿನ ಬಗ್ಗೆ ಗಾಢವಾದ ಅನುರಕ್ತಿಯನ್ನೂ ಮಾನವೀಯ ಸಂಬಂಧಗಳ ಬಗ್ಗೆ ಅದಮ್ಯವಾದ ಶ್ರದ್ಧೆಯನ್ನೂ ಉಳಿಸಿಕೊಂಡು ಬಂದ ಸನದಿಯಂಥವರು ಸಾಹಿತ್ಯಕವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ನಮಗೆ ಮುಖ್ಯರಾಗುತ್ತಾರೆ. ದೂರದ ಮುಂಬೈನಲ್ಲಿದ್ದೂ ಸನದಿಯವರು ಕಳೆದ ಹಲವು ದಶಕಗಳ ಕಾಲಮಾನದಲ್ಲಿ ಕನ್ನಡ ಸಹೃದಯರ ಜತೆಗೆ ತಮ್ಮನ್ನು ಬೆಸೆದುಕೊಂಡಿರುವುದು ಈ ಬಗೆಯ ಮಾನವೀಯ ಪ್ರೀತಿಯ ಸಂಬಂಧಗಳಿಂದಲೇ.

ಗ್ರಾಮೀಣ ಪರಿಸರದ ಮುಗ್ಧತೆ ಹಾಗೂ ವಿಸ್ಮಯಗಳ ನೆನಪುಗಳನ್ನು ತಮ್ಮ ಮನಸ್ಸಿನ ತುಂಬ ತುಂಬಿಕೊಂಡು ಯಾಂತ್ರೀಕೃತ ನಗರ ಪರಿಸರಗಳಲ್ಲಿ ಬದುಕುವ ಅನಿವಾರ್ಯತೆಗೆ ಒಳಗಾಗಿ, ತಮ್ಮ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುವ ಇವತ್ತಿನ ಬಹುತೇಕ ಬರಹಗಾರರನ್ನು ಕಾಡುವ ಸಂಗತಿಯೆಂದರೆ ತಮಗೂ ತಾವು ಬೇರೂರಬೇಕಾದ ನೆಲಕ್ಕೂ ನಡುವೆ ಏರ್ಪಡುತ್ತಿರುವ ಸಂಬಂಧರಾಹಿತ್ಯದ ತಳಮಳ. ಈ ತಳಮಳ ತಮಗೂ, ತಮ್ಮ ಎಳೆಯಂದಿನ ರಮ್ಯನಿಸರ್ಗಕ್ಕೂ ನಡುವಣ ಅಂತರವನ್ನು ಮಾತ್ರ ಕುರಿತದ್ದಲ್ಲ; ಅದಕ್ಕಿಂತ ಮಿಗಿಲಾಗಿ ಮಾನವೀಯ ಸಂಬಂಧಗಳೊಂದಿಗೆ ಏರ್ಪಟ್ಟ ಸಂಬಂಧರಾಹಿತ್ಯದ ಏಕಾಕಿತನದ ವಿಷಾದಗಳನ್ನು ಕುರಿತದ್ದು. ಸನದಿಯವರ ಪ್ರಸ್ತುತ ಕವನ ಸಂಗ್ರಹ ಮುಖ್ಯವಾಗಿ ಪ್ರತಿಪಾದಿಸುವುದು ನಮಗೂ ಸಮೃದ್ಧವಾದ ಬದುಕಿಗೂ ಇರಬೇಕಾದ ಜೀವಚಿತ ಸಂಬಂಧಗಳನ್ನು ಕುರಿತಾದ ಸಾಂಸ್ಕೃತಿಕ ಕಾಳಜಿಗಳನ್ನು.

ಸನದಿಯವರು ತಮ್ಮ ಸಮಕಾಲೀನ ಬಿಕ್ಕಟ್ಟುಗಳನ್ನು ಕುರಿತು ಕಾವ್ಯ ಕೇಂದ್ರಿತವಾದ ತಮ್ಮ ಪ್ರತಿಕ್ರಿಯೆಗಳನ್ನು ದಾಖಲು ಮಾಡುವ ಕ್ರಮ ಕೂಡ ವಿಶಿಷ್ಟವಾಗಿದೆ. ಅವರ ಪ್ರತಿಪಾದನೆಯ ಕ್ರಮದಲ್ಲಿ ಬದುಕಿನ ಬಗ್ಗೆ ತಕ್ಕ ಪ್ರೀತಿ, ವಿನಯ ಹಾಗೂ ಶ್ರದ್ಧೆಗಳವೆಯೇ ವಿನಾ, ಯಾವುದೇ ಸುಧಾರಕತನದ ಧೀರೋದಾತ್ತತೆಯ ಸೋಗುಗಳಲ್ಲ. ಈ ಮನೋಧರ್ಮ ಮೂಲಭೂತವಾಗಿ ಸಾಂಸ್ಕೃತಿಕ ಕಾಳಜಿಗಳನ್ನುಳ್ಳ ಜನಪರ ಹಾಗೂ ಜೀವನಪರ ನಿಲುವಾಗಿದೆ.

-ಜಿ.ಎಸ್.ಶಿವರುದ್ರಪ್ಪ

(ಜನವರಿ, ೧೯೯೧)

೨. ಯಾವುದೇ ಕಾವ್ಯ ಕೃತಿಯ ಹಿಂದೆ ನಿರ್ದಿಷ್ಟವಾದ ಭಾವಲಯವೊಂದು ಕಾರ್ಯ ನಿರ್ವಹಿಸುತ್ತದೆ. ಸನದಿಯವರು ಅದನ್ನೇ ಪ್ರಧಾನವಾಗಿ ಪರಿಗಣಿಸಿ ತಮ್ಮ ಕಾವ್ಯ ಭಾವಜಡವಾಗದಂತೆ ಎಚ್ಚರವನ್ನು ವಹಿಸುತ್ತಾರೆ. ಆದುದರಿಂದ ಅವರ ಕಾವ್ಯಕ್ಕೆ ವೈಚಾರಿಕ

ಆಯಾಮವನ್ನು ಕಲ್ಪಿಸುವುದು ಸುಲಭವಾಗುತ್ತದೆ. ಲಯ, ಗೇಯ ಗುಣಗಳನ್ನು ಕಳೆದುಕೊಳ್ಳದೆಯೂ ಅವರು ತಮ್ಮ ಕವನಗಳಲ್ಲಿ ಚಿಂತನ ದ್ರವ್ಯವನ್ನು ಹುದುಗಿಸುತ್ತಾರೆ.

–ತಾಳ್ತಜೆ ವಸಂತಕುಮಾರ್

ಕವಿ ಸನದಿ, ಸಹಜ ಪ್ರತಿಭೆಯಿಂದ ವಿಜೃಂಬಿಸುತ್ತಿರುವ ಸರಳ ಹಾಗೂ ವಿರಳ ಜಾತಿಯ ಕವಿ. ಇವರ ಕವಿತೆಯಗಳು ಓದುಗರಿಗೆ, ಕೇಳುಗರಿಗೆ ತುಂಬ ಆತ್ಮೀಯವೂ ಆಪ್ಯಾಯಮಾನವೂ ಆಗಲು ಮುಖ್ಯ ಕಾರಣ, ನಾನು ತಿಳಿದುಕೊಂಡಂತೆ, ಅವು ಯಾವ ಬಿಂಕ – ಬಿನ್ನಾಣವೂ ಇಲ್ಲದೆ ನಿರಾಡಂಬರದಿಂದಲೇ ಮನಂಬುಗುವುದು. ಇದು ದೊಡ್ಡ ಸಾಧನೆ, ಇವರಿಗೆ ಮಾತ್ರ ಸಹಜವಾಗಿ ಕರಗತವಾದದ್ದು.

೮. ಶ್ರೀ ಸನದಿಯವರ ಜೀವನ–ಲೇಖನಗಳಲ್ಲಿ ಸದಾ ಎದ್ದು ಕಾಣುವ ಆತ್ಮೀಯತೆಯ ಭಾವನೆಗಳು, ಮಾನವೀಯ ಮೌಲ್ಯಗಳ ಸ್ಥಾಪನೆಗಳು, ಅವರನ್ನು ಯೋಗ್ಯ ವ್ಯಕ್ತಿಯಾಗಿ ರೂಪಿಸಿವೆ. ಅವರ ಜೀವನ ಶೈಲಿಯೂ, ಲೇಖನ ಶೈಲಿಯೂ ಅಭಿನ್ನವೆಂಬಂತೆ ಬೆಸೆದಿವೆ. ಅವೆರಡೂ ಅತ್ಯಂತ ಸಹಜವೂ, ಸುಂದರವೂ ಆಗಿವೆ.

–ಕಯ್ಯಾರ ಕಿಞ್ಞಣ್ಣರೈ.

೯. ಕವಿ ಸನದಿಯವರು ಐವತ್ತರ ದಶಕದಿಂದ ತೊಂಬತ್ತರ ದಶಕದವರೆಗೆ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಹದಿಮೂರು ಕವನ ಸಂಗ್ರಹಗಳನ್ನು (ಒಂದು ಸಂಕಲನವೂ ಸೇರಿದಂತೆ) ಪ್ರಕಟಿಸಿದ್ದಾರೆ. ಅಲ್ಲಲ್ಲಿ ಕವಿ–ಕಾವ್ಯ ಕುರಿತಂತೆ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದ್ದಾರೆ. ಐವತ್ತರ ದಶಕದಲ್ಲೆ ಕನ್ನಡ ಕಾವ್ಯ ಹೊರಳು ಹಾದಿಯಲ್ಲಿದ್ದಾಗಲೂ ಆ ಬಗ್ಗೆ ಮನ ಕದಡಿಕೊಳ್ಳದೆ ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ, ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ.

– ಎಂ.ಎಚ್.ಕೃಷ್ಣಯ್ಯ

೧೦. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಪ್ರೀತಿಸಿದ, ಬೋಧಿಸಿದ, ಆಚರಿಸಿದ ಉದಾತ್ತತತ್ತ್ವಗಳ ಅಗಾಧವಾದ ಪ್ರಭಾವ ಕವಿ ಶ್ರೀ ಸನದಿಯವರ ಮೇಲಾಗಿರುವುದು ಅವರ ಕವಿತೆಗಳಲ್ಲಿ ಬಹು ಸ್ಪುಟವಾಗಿ, ಸೊಗಸಾಗಿ ವ್ಯಕ್ತವಾಗಿರುವುದು ಕಂಡು ಬರುತ್ತದೆ. ಮೂಲಭೂತವಾದ ತತ್ತ್ವಗಳೆಂದರೆ, ಪೂಜ್ಯ ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾದ ಸಹಜತೆ, ಸರಳತೆ, ಸತ್ಯವಚಿತಿಕೆ, ನೈಜತೆ, ಅಕೃತ್ರಿಮತೆ, ನಿಷ್ಕಪಟತನ, ಸ್ವಂತಿಕೆ (ಸ್ವದೇಶಿ) ಸ್ವಾವಲಂಬನೆ, ಸಾಮಾನ್ಯತೆ, ಶ್ರೀ ಸಾಮಾನ್ಯನ ಬಗ್ಗೆ ಉದಾರವಾದ ಕಳಕಳ ಹಾಗೂ ಮಾನವೀಯ ಅನುಕಂಪ –

ಈ ಎಲ್ಲ ತತ್ತ್ವಗಳೂ ಇವರ ಕವಿತೆಗಳಲ್ಲಿ ಭಾವನಾತ್ಮಕವಾಗಿ ವೈವಿಧ್ಯಪೂರ್ಣವಾಗಿ ಮೂಡಿಬಂದಿವೆ. ಇವರ ವಿವಿಧ ಕವನ ಸಂಕಲನಗಳಲ್ಲಿ ಗಾಂಧೀ ಪ್ರಭಾವದ ಛಾಯೆ ಹರಡಿಕೊಂಡಿದೆ.

–ಎನ್.ಎಂ.ಕೆ.ಸೋಗಿ

೧೧. ಎಲ್ಲ ಕಾವ್ಯವೂ, ಸತ್ಯವನ್ನು ಸೌಂದರ್ಯದ ಮೂಲಕ, ಸೌಂದರ್ಯವನ್ನು ಸತ್ಯದ ಮೂಲಕ ನಡೆಸುವ ಹುಡುಕಾಟವಾಗಿರುತ್ತದೆ. ಕವಿಯ ಪ್ರತಿಭೆ ಹಾಗೂ ಒಲವುಗಳಗನುಗುಣವಾಗಿ, ಮೂರ್ತ ಮತ್ತು ಅಮೂರ್ತ, ಹೀಗೆ ಎರಡೂ ಲೋಕಗಳು ಅವನೆದುರು ತೆರೆದುಕೊಳ್ಳುತ್ತವೆ. ಕೀಟ್ಸ್, ಸ್ಪೆನ್ಸ್‌ರ, ಚಾಸರ್, ಪಂಪ, ಕುಮಾರವ್ಯಾಸ, ಲಕ್ಷ್ಮೀಶ ಅಂಥವರಿಗೆ, ದೇವದಾನವರ, ಯಕ್ಷಕಿನ್ನರ ಮಾಯಾಲೋಕಗಳು, ಪ್ರಕ್ಷುಬ್ಧ ಸಾಗರಗಳು, ಕಾಡುಗಳು, ಎಲ್ಲವೂ ಕಾಣಬಲ್ಲವು. ಇನ್ನು ಕೆಲವರ ಪಾಲಿಗೆ ವರ್ಡ್ಸ್‌ವರ್ಥ್, ಸ್ಯಾಂಡ್‌ಬರ್ಗ, ವಿಟ್‌ಮನ್, ಸರ್ವಜ್ಞ, ಬೇಂದ್ರೆ, ಕುವೆಂಪು ಅಂಥವರಿಗೆ, ಹುಲ್ಲು, ಹೂವು, ಬೆಟ್ಟ, ಕಣಿವೆ, ಮಾಗಿಗಳ ಪ್ರಪಂಚವೇ ಎಲ್ಲವನ್ನೂ ನೀಡಬಹುದು. ಇಂಥ ಮೂರ್ತಲೋಕದ ವಾಸ್ತವವನ್ನು ಮುಗ್ಧತೆ ಹಾಗೂ ವಿಸ್ಮಯಗಳೊಂದಿಗೆ ಬೆರೆಸಿ, ಪ್ರಕೃತಿ ಚಿತ್ರಗಳನ್ನು ನೀಡುವ ಕವಿ ಸನದಿಯವರ ಕುಶಲತೆ ಮೋಹಕವಾಗಿದೆ. ಅವರು ಸತ್ಯ ಹಾಗೂ ಸೌಂದರ್ಯಗಳ ಹೊಳೆಯಲ್ಲಿ ತಮ್ಮ ಕಾವ್ಯದ ನಾವೆ ತೇಲಿಸಿದ್ದಾರೆ. ಸಮಭಾವದ ಸಹಜೀವನದ ಬಯಲ ಬಾಗಿಲು ತೆರೆಯುವುದು ಅವರ ಹವ್ಯಾಸ.

–ಸು.ರಂ.ಎಕ್ಕುಂಡಿ

೧೨. ತಾನೊಬ್ಬ ಮುಸ್ಲಿಂ ಕವಿ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಆಹ್ವಾನಿಸಿಕೊಂಡು ಬರೆಯದೆ, ನಮ್ಮಲ್ಲೊಬ್ಬರಾಗಿ ನಿಜ ಪ್ರಜಾಪ್ರಭುತ್ವವಾದಿ ಕವಿಯಾಗಿ ಸನದಿ ಬರೆದಿದ್ದಾರೆ ಎನ್ನುವುದು ಇಂದಿನ ಸನ್ನಿವೇಶದಲ್ಲಿ ಮಹತ್ವದ್ದು. ಈ ಅಂಶದಿಂದ ಈ ಕವಿ ನಮಗೆಲ್ಲ ಹೆಚ್ಚು ಆತ್ಮೀಯರೂ ಆಗುತ್ತಾರೆ. ಕೇವಲ ಮನುಷ್ಯರಾಗಿ ಅನುಭವಿಸಿದ್ದನ್ನು ತನ್ನ ತಾಯ್ನಾಡಿಯಲ್ಲಿ ಇಡುವ ನಿಸ್ಪೃಹತೆ ಅಂಥ ಹಿರಿಮೆ ವ್ಯಕ್ತಿತ್ವದಲ್ಲಿದ್ದಾಗ ಮಾತ್ರ ಸಾಧ್ಯ. ಅಲ್ಲವೆ?

–ಡಾ.ಟಿ.ಜಿ.ಭಟ್ಟ

೧೩. ಸನದಿ ಅವರ ಜೀವನ ಸಾಧನೆ ಒಂದು ದೊಡ್ಡ ಸಾಹಸಗಾಥೆ. ಅವರು ಪಟ್ಟ ಪಾಡು ಕಾವ್ಯದಲ್ಲಿ ಹಾಡಾಗಿ ಹರಿದಿದೆ. ಆದರ್ಶ ಶಿಕ್ಷಕರಾಗಿ, ಕವಿಯಾಗಿ, ಕತೆಗಾರರಾಗಿ, ಅನುವಾದಕರಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ ಸಾಹಿತ್ಯ ಕ್ಷೇತ್ರದ ನಾನಾ ನೆಲೆಗಳಲ್ಲಿ ಸೇವೆ ಸಲ್ಲಿಸಿ ತಮ್ಮ ಬಹುಮುಖ ಪ್ರತಿಭೆಯನ್ನು ಅವರು ಮೆರೆದಿದ್ದಾರೆ. ವೃತ್ತಿಯಲ್ಲಿ ಸರಕಾರದ ವಿವಿಧ ಇಲಾಖೆಗಳಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದರೂ ಪ್ರವೃತ್ತಿಯಲ್ಲಿ ಅವರು ಕವಿ, ಸಾಹಿತಿ. ಅವರ ಸಾಹಿತ್ಯ ರಾಶಿ ವಿಪುಲವಾಗಿದೆ. ಅವರ ಸಾಹಿತ್ಯ ನಿರ್ಮಿತಿಯ ಹಾಸು ಬಲುವಿಸ್ತಾರ. ಸೃಜನಶೀಲ ಸೂಕ್ಷ್ಮ ಮನಸ್ಸಿಂದು ಹರಿಯಬಲ್ಲಲ್ಲೆಲ್ಲ ಅವರ ಲೇಖನಿ ಹರಿದಿದೆ. ಬದುಕನ್ನು ಒಳಹೊಕ್ಕು ಅನ್ವೇಷಿಸುವ

ತಾತ್ವಿಕತೆ ಅವರ ಸಾಹಿತ್ಯದಲ್ಲಿ ಪ್ರಧಾನವಾಗಿದೆ. ಆಳವಾದ ಚಿಂತನೆ ದರ್ಶನಗಳಿಂದ ವಿಚಾರ ವಿಮರ್ಶೆಗಳಿಂದ ಅವರ ಕೃತಿಗಳು ಮೇಲ್ತರಗಿಯವೆನ್ನಿಸಿವೆ. ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ದೂರದ ಮುಂಬೈಯಲ್ಲಿ ಇದ್ದುಕೊಂಡು ಕನ್ನಡ ಸಾಹಿತ್ಯದ ಕೃಷಿಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದ ಅವರದು ಬಹುಭಾಷಿಕ ಸಂವೇದನೆ. ಅವರ ಮನೆಮಾತು ಉರ್ದು, ಕಲಿತದ್ದು ಕನ್ನಡ ಮಾಧ್ಯಮದಲ್ಲಿ, ಮುಂದೆ ಇಂಗ್ಲೀಷ್‌ಗೆ ದಾಟು. ಮರಾಠಿ, ಹಿಂದಿ, ಗುಜರಾತಿ ಪರಿಸರದಲ್ಲಿ ಸೇವೆ ಸಲ್ಲಿಸುವ ಅವಕಾಶ. ಸಂಸ್ಕೃತದಲ್ಲಿಯೂ ಮುಂದೆ ವಿಶೇಷ ಅಧ್ಯಯನ. ಹೀಗೆ ನಮ್ಮಲ್ಲಿರಬೇಕಾದ ಸಾರಸ್ವತ ಮೈತ್ರಿಗೆ ಅವರು ಉತ್ತಮ ನಿದರ್ಶನ. "ಬಾಬಾಸಾಹೇಬ ಸನದಿ ಅವರು ಕರ್ನಾಟಕತ್ವವನ್ನು ಮೈಗೂಡಿಸಿಕೊಂಡು ಒಂದು ಮೂರ್ತಿಯಾದವರು. ಅವರು ಕರ್ನಾಟಕದವರೆಷ್ಟೋ, ಅಷ್ಟೇ ಭಾರತದವರೂ ಆಗಿದ್ದಾರೆ. ಜಾತಿಯ ಯಾವ ಸೋಂಕೂ ಇಲ್ಲದ ಅಪ್ಪಟ ರಾಷ್ಟ್ರವಾದಿ ಅವರು. ಒಬ್ಬ ಒಳ್ಳೆಯ ಮುಸ್ಲಿಂ, ಒಬ್ಬ ಒಳ್ಳೆಯ ಕನ್ನಡಿಗ, ಒಬ್ಬ ಒಳ್ಳೆಯ ಭಾರತೀಯ ಹೇಗೆ ಇರುತ್ತಾನೆಂದು ಕೇಳಿದರೆ ಈ ಸನದಿ ಅವರ ಕಡೆಗೆ ಬೆರಳೆತ್ತಿ ತೋರಿಸಬಹುದು" ಎಂದು ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ಅವರು ಸನದಿ ಅವರ ವ್ಯಕ್ತಿತ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ. ದೇಶ, ಭಾಷೆ, ಮತ, ಪಂಥಗಳನ್ನು ಮೀರಿದ ಮಾನವ ಸಂಸ್ಕೃತಿಯ ಪ್ರಜ್ಞೆಯನ್ನು ಗಾಢವಾಗಿ ಮೈಗೂಡಿಸಿಕೊಂಡ ಅವರು ಮಹಾಮಾನವತಾವಾದಿ.

–ಡಾ। ಜಿ.ಎನ್.ಉಪಾಧ್ಯ

೧೪. ಸನದಿ ಇದ್ದಲ್ಲಿ ಸಿನಿಕತನ ಇರುವುದಿಲ್ಲ. ಸಿಡುಕಿನ ಮುಖ ಇರುವುದಿಲ್ಲ. ಪ್ರಸನ್ನತೆ ಇರುತ್ತದೆ. ಮಾಧುರ್ಯ ಇರುತ್ತದೆ. ಅವರು ತಮ್ಮ ಹೃದಯವನ್ನು ಸರಿಯಾದ ಸ್ಥಾನದಲ್ಲಿ ಇರಿಸಿಕೊಂಡು ಬೆಳೆದಿದ್ದಾರೆ.

('ಪ್ರಪಂಚ'ದಲ್ಲಿ) –ಡಾ. ಪಾಟೀಲ ಪುಟ್ಟಪ್ಪ

೧೫. ಸನದಿಯವರು ನನಗೆ ಕಂಡ ಹಾಗೆ ಒಬ್ಬ ಕವಿ ಮಾತ್ರವಲ್ಲ, ಅವರೊಬ್ಬ ಮಹಾನ್ ತಪಸ್ವಿ. ಎಂಥಾ ಕಷ್ಟ ನಷ್ಟಗಳು ಬಂದರೂ ತಾನು ಆರಿಸಿಕೊಂಡ ಹಾದಿಯನ್ನು ಬಿಡದ ಧ್ಯೇಯವಾದಿ. ಎಲ್ಲರಲ್ಲೂ ಒಬ್ಬನನ್ನೇ ಕಾಣುವ ಮಾನವತಾವಾದಿ.

('ಚುನಾವಣೆ'ಯಲ್ಲಿ) –ಬಿ.ಕೆ.ರಂಗನಾಥ್

೧೬. ಸನದಿಯವರು ಕೇವಲ ಮಾನವಿಕ ಕವಿಯಲ್ಲ. ಕವಿ ಟಾಗೋರರ ಕವಿತೆಯಲ್ಲಿರುವ ವಿಶ್ವ ಪ್ರೀತಿ, ಮಮತೆ ಕೂಡಾ ಅವರ ಕವ್ಯದಲ್ಲಿದೆ.

('ಕನ್ನಡ ಜನ ಅಂತರಂಗ'ದಲ್ಲಿ) –ಪ್ರೊ.ಎಸ್.ಆರ್.ನಾರಾಯಣರಾವ್

೧೭. ತಮ್ಮ ಉದ್ಯೋಗಕ್ಕಾಗಿ ಅವರು ವಿವಿಧ ರಾಜ್ಯಗಳಲ್ಲಿದ್ದರು. ಹೀಗಾಗಿ ಅವರು ಊರೂರುಗಳನ್ನು ಸುತ್ತಿದರೂ, ಭಿನ್ನಮತ, ಭಾಷೆ, ರೂಢಿಗಳ ಜನರ ಹೃದಯಗಳಲ್ಲೂ ಪ್ರಯಾಣ ಮಾಡಿದರು.

('ಮಾನವ್ಯ ಕವಿ'ಯ ಮುನ್ನುಡಿಯಲ್ಲಿ) –ದಿ.ಸು.ರಂ.ಎಕ್ಕುಂಡಿ

೧೮. ಸಾತ್ವಿಕ ರೂಪವಿರುವವನೇ ನಿಜವಾದ ಸಜ್ಜನನೆನಿಸುತ್ತಾನೆ. ನಿಜವಾದ ಬರಹಗಾರ ತತ್ವಜ್ಞಾನಿಯೂ ಆಗಿರುತ್ತಾನೆ. ಸನದಿಯವರ ಕಾವ್ಯದಲ್ಲಿ ಹಾಗೂ ವ್ಯಕ್ತಿತ್ವದಲ್ಲಿ ನಾವು ಅಂತಹ ಗುಣಗಳನ್ನು ಕಾಣುತ್ತೇವೆ.

('ನಾಡೋಜ'ದಲ್ಲಿ) –ಡಾ.ಎಂ.ಐ.ಸವದತ್ತಿ

೧೯. ಕನ್ನಡದಂತೆಯೇ ಹಿಂದಿ, ಮರಾಠಿಯಲ್ಲೂ ನಿರರ್ಗಳವಾಗಿ ಮಾತಾಡಬಲ್ಲ ಸನದಿಯವರು ಹೊರನಾಡುಗಳಲ್ಲಿ ಇತರ ಭಾಷಿಕರ ನಡುವೆ ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಅಘೋಷಿತ ರಾಯಭಾರಿಯಾಗಿದ್ದಾರೆಂದರೆ ತಪ್ಪಲ್ಲ.

('ತಾಯಿನುಡಿ' ಯಲ್ಲಿ) –ಡಿ.ಕೆ.ಮೆಂಡನ್

ಈ ರೀತಿಯಲ್ಲಿ ಇವರುಗಳು ಮಾತ್ರವಲ್ಲದೆ, ಇನ್ನೂ ಹಲವರು ಅಂದರೆ ಸನದಿಯವರ ಆತ್ಮೀಯರು, ಒಡನಾಡಿಗಳು ಅವರ ಕಾವ್ಯ ಕುರಿತಂತೆ, ಜೀವನ ಲೇಖನ ಹಾಗೂ ವ್ಯಕ್ತಿತ್ವ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.

~*~*~*~*~*~

ಕೊನೆ ಟಿಪ್ಪಣಿಗಳು

೧	ಸನದಿ ಸಾಹಿತ್ಯ ಸಮೀಕ್ಷೆ	ಸಂಃ ಡಾ.ಗುರುಪಾದ ಮರಿಗುದ್ದಿ, ನಿಡಸೋಸಿ, ಬೆಳಗಾವಿ, ೧೯೯೯, ಪುಟ-೦೪
೨	ಅದೇ	ಪುಟ-೧೮
೩	ಮಾನವ್ಯ ಕವಿ	ಡಾ.ಗೌರೀಶ್ ಕಾಯ್ಕಿಣಿ, ಭಾವನಾ ಪ್ರಕಾಶನ, ಮುಂಬಯಿ, ೧೯೯೬, ಪುಟ-೧೦೩
೪	ಸ್ನೇಹ ಸಂಪದ	ಸಂಃ ಪ್ರೊ. ಜ್ಯೋತಿ ಹೊಸೂರು, ಬಿ.ಎ.ಸನದಿ ಸನ್ಮಾನ ಸಮಿತಿ, ಬೆಳಗಾವಿ, ೧೯೯೬, ಪುಟ-೬೦
೫	ಅದೇ	ಪುಟ-೬೮
೬	ಸೋಪಾನ	ಡಾ. ತಾಳ್ತಜೆ ವಸಂತಕುಮಾರ್ ಮತ್ತು ಕೆ.ಚಂದ್ರಮೌಳಿ, ಸುವರ್ಣಗಿರಿ ಪ್ರಕಾಶನ, ಮುಂಬಯಿ, ೧೯೯೬, ಪುಟ-೨೨೩
೭	ಅದೇ	ಪುಟ-೨೨೭
೮	ಅದೇ	ಪುಟ-೨೩೧
೯	ಮುಕ್ತಚಿಂತನ	ಪ್ರೊ. ಎಸ್.ಆರ್.ನಾರಾಯಣರಾವ್, ಬಿ.ಎ.ಸನದಿ ಸಾಂಸ್ಕೃತಿಕ ಪ್ರತಿಷ್ಠಾನ, ಬೆಳಗಾವಿ, ೨೦೦೬, ಪುಟ-೦೬
೧೦	ತಪನಿಂದ ತಾವರೆ	ಡಾ.ಬಸವರಾಜ ಸಾದರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ-೨೯೭

ಅಧ್ಯಾಯ ೫:-

ಸಾರರೂಪ

ಈ ಅಧ್ಯಯನದ ಉದ್ದೇಶ ಕವಿ ಸನದಿಯವರ ಎಲ್ಲ ಕವನಗಳ ಪರಿಶೀಲನೆಯಲ್ಲ. ಸನದಿಯವರ ಕವನಗಳ ಒಂದು ಲಕ್ಷಣವನ್ನು ಗುಣವನ್ನು ಎತ್ತಿ ತೋರಿಸುವುದು ಮಾತ್ರ ಸನದಿಯವರ ಕಾವ್ಯ ಹಿಡಿದಿರುವುದು- ಓಡಿರುವುದು ರಾಜಮಾರ್ಗದಲ್ಲ! ಅವರ ಕಾವ್ಯದಲ್ಲಿ ದುಡಿದಿರುವುದು ಅವರ ನಾಡಿನಲ್ಲಿ ಮಿಡಿದಿರುವುದು ನಮ್ಮ ನಾಡು, ನುಡಿಯ, ನಮ್ಮ ಇಂದಿನ ಬಾಳಿನ ಸಮಾಜದ ಪರಿಸರದ ಜೀವಂತ ಪ್ರಜ್ಞೆ, ಅವರು ತಮ್ಮ ಸುತ್ತಲಿರುವ ಸಮಾಜವನ್ನು ನಾಡು-ನುಡಿಯನ್ನು, ನಮ್ಮನ್ನು ಇಂದು ಎದುರಿಸುತ್ತಿರುವ ಹಲವಾರು ಜೀವಂತ ಸಮಸ್ಯೆಗಳನ್ನು ತುಂಬಿದ ಶ್ರದ್ಧೆಯಿಂದ ಸಂಗ್ರಹಿಸಿ ಆಶಾವಾದಿಯಾಗಿ ತಮ್ಮ ಕಾವ್ಯದ ಮೂಲಕ ಬಿಂಬಿಸುತ್ತಾರೆ. ಬಾಳಿಗೆ ಬೆನ್ನುಹಾಕಿ ವಿಮುಖರಾಗಿ ನಿಂತ ಕವಿ ಸನದಿಯವರು, ಬಂದುದನ್ನೆಲ್ಲ ಬಂದುದಕ್ಕೆಲ್ಲಾ ಅನನ್ಯವಾಗಿ ಪ್ರತಿಸ್ಪಂದಿಸಿರುವುದನ್ನು ಇವರ ಕವನಗಳಲ್ಲಿ ನಾನು ಗುರುತಿಸಿರುತ್ತೇನೆ.

ಸನದಿಯವರು ಯಾವುದೇ ಪಂಥ ಪಂಗಡಗಳಿಂದ ಪ್ರಸಿದ್ಧಿಗೆ ಬಂದವರಲ್ಲ. ತಮ್ಮೊಳಗಿನ ಧ್ವನಿಗೆ ಅವರು ಕಾವ್ಯದ ಬನಿಯನ್ನು ಸೇರಿಸಿದವರು. ಸನದಿಯವರು ಸೃಜನಶೀಲ ವ್ಯಕ್ತಿತ್ವದ ಮೂರ್ತಿವಂತ ನೇರವಾಗಿ ಮತ್ತು ಧಾಳವಾಗಿ ಹೇಳುವ ಕಲೆ ಈ ಕವಿಗೆ ಕರಗತವಾಗಿದೆ. ಅದಕ್ಕಾಗಿ ಅವರು ಯಾವುದೇ ಸುತ್ತ ಬಳಸುವುದಿಲ್ಲ. ಅಲ್ಲದ-ಇಲ್ಲದ ಗಿಮಿಕ್‌ಗಳಿಗೆ ಮೊರೆ ಹೋಗುವುದಿಲ್ಲ. ಹಾಗಾಗಿ ಅವರ ಕವನಗಳು ಸಮುದ್ರ ಸೇರುವಲ್ಲಿಯ ಹೊಳೆಯಂತೆ ಮಂದಮಂದವಾಗಿ ಪ್ರವಹಿಸುತ್ತವೆ. ಆರಂಭದ ರಭಸ-ವೇಗ ಹಾಗೂ ಕಡಿದಾದ ಪಾತ್ರವನ್ನು ಮೀರಿ ನದಿ ವಿಶಾಲವಾದ ಪಾತ್ರ ಪಡೆದುಕೊಳ್ಳುವಂತೆ ಅರ್ಥ ವೈಶಾಲ್ಯದೊಂದಿಗೆ ಶ್ರೀಸಾಮಾನ್ಯನಿಗೂ ತಲುಪುವಲ್ಲಿ ನಿಲುಕುವಲ್ಲಿ ಅವರ ಕವನಗಳು ಯಶಸ್ವಿಯಾಗುತ್ತವೆ.

ಮಾನವೀಯ ಮೌಲ್ಯಗಳಲ್ಲಿ ವಿಶ್ವಾಸವನ್ನು ಅದನ್ನು ಆಶಾವಾದವನ್ನು ಪ್ರಕಟಿಸುವ ಸನದಿಯವರ ಕಾವ್ಯ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿದೆ. ಸನದಿಯವರಿಗೆ ಆಂತರಿಕ ಒತ್ತಡವಿದೆ. ಒತ್ತಡದ ಕಾರಣ ಬದುಕನ್ನು ಪ್ರೀತಿಯ ಮೂಲಕ ಪರಿಸರದ ಜೊತೆ ತೊಡಗಿಸಿಕೊಳ್ಳುವ ಆಸೆ. ಮನುಷ್ಯ ಮನುಷ್ಯರ ನಡುವೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಇದನ್ನು ಸರಿಪಡಿಸಿವುದಕ್ಕಾಗಿ ಸಮಾನತೆಯನ್ನು ಒಪ್ಪಿಕೊಳ್ಳುವ ಮೌಲ್ಯಗಳ ಪ್ರತಿಪಾದನೆಯನ್ನು ಸ್ಪಷ್ಟವಾದ ಧೋರಣೆಯೊಂದಿಗೆ, ಸೂಕ್ಷ್ಮ ಆಶಯದ ಮೂಲಕ ಸಮಾಜನಿಷ್ಠ ಒಲವುಗಳನ್ನು ಹೊತ್ತು ಸಮಷ್ಟಿಯ ಸೃಷ್ಟಿಗೆ ಹಾಲೆರೆಯುತ್ತ ಕ್ರಿಯಾಶೀಲವಾಗುವುದು ಕವಿಯ ಬಹುದೊಡ್ಡ ಹಂಬಲವಾಗಿದೆ. ಇಂಥ ಆಲೋಚನೆಗಳನ್ನು ಕಾವ್ಯ ಕ್ರಿಯೆಗೆ ತೊಡಗಿಸಿ ರೂಪಕೊಡುವುದು ಸನದಿಯವರ ಕಾವ್ಯದ ಲಕ್ಷಣ.

ಸನದಿಯವರ ಸಮಗ್ರ ಕಾವ್ಯವನ್ನು ಒಂದು ಅಧ್ಯಯನ ಘಟಕವಾಗಿ ತೆಗೆದುಕೊಂಡಾಗ, ಅವರ ಜನಪರ ಸಂವೇದನೆಗಳು, ಪರಿಸರ ಸಂವೇದನೆಗಳು, ಮಾನವೀಯ ಸಂವೇದನೆಗಳು, ನಗರಪ್ರಜ್ಞೆ, ರಾಷ್ಟ್ರೀಯ ಸಂವೇದನೆಗಳು ಎದ್ದು ಕಾಣುತ್ತವೆ. ಎಂದರೆ ಇವಷ್ಟೇ ಅಲ್ಲವೆ ಎಂದಲ್ಲ, ಪ್ರತಿನಿಧಿಕ ಮೌಲ್ಯಗಳಗನುಗುಣವಾಗಿ ಈ ಆಯ್ಕೆ ನಡೆದಿದೆ ಎಂದಷ್ಟೇ ನನ್ನ ಅರ್ಥ.

ಇಲ್ಲಿ ಸನದಿಯವರ ಯಾವುದೇ ಸಂವೇದನೆಗಳನ್ನು ಪರಿಶೀಲಿಸಿದರೂ ಕಾವ್ಯದಲ್ಲಿ ಎದ್ದು ಕಾಣುವ ಅಂಶ ಮಾನವೀಯತೆ. ಇದು ಸನದಿಯವರ ಕಾವ್ಯದ ನಿರಂತರ ಒಳಸೆಲೆಗಳಲ್ಲಿ ಒಂದಾಗಿದೆ. ಇದನ್ನು ಜೀವ ಸಂವಾದಿಯೆಂದೊ, ಸ್ತ್ರೀವಾದಿ ಎಂದೋ, ಸಮಾಜ ಮುಖಿ ಎಂದೋ ಸಂದರ್ಭಕ್ಕೆ ತಕ್ಕಂತೆ ಹೆಸರಿಸಬಹುದಾದರೂ ಅವುಗಳ ಮೂಲ ಮಾತೃಕೆ ಬದಲಾಗುವುದಿಲ್ಲ. ಸೃಷ್ಟಿಶೀಲವಾದ ಮನಸ್ಸು ನಿರ್ದಿಷ್ಟ ಪ್ರಜೆಯೊಂದರ ಆಶ್ರಯವನ್ನು ಪಡೆದು ಬಾಹು ಅನುಭವಗಳಿಗೆ ಸ್ಪಂದಿಸುತ್ತದೆ. ಸನದಿಯವರಂತೂ ಎಲ್ಲ ಬೇಲಿಗಳಾಚೆಗಿನ ಮುಕ್ತ ಬಯಲಿನಲ್ಲಿ ನಿಲ್ಲಬಯಸಿದವರು. ಅಲ್ಲಿಂದ ಶುದ್ಧ ಗಾಳಿಯಲ್ಲಿ ಮಾನವತೆಯ ಸ್ವಂತಿಕೆಯ ಶೋಧವನ್ನು ನಡೆಸಿದವರು. ಆದುದರಿಂದ ಅವರ ಕಾವ್ಯ ಪ್ರೇರಣೆಯೂ, ಲಕ್ಷ್ಯವೂ ಮನುಷ್ಯನೇ ಆಗಿದ್ದಾನೆ.

ಸನದಿಯವರು ಸೌಜನ್ಯಕ್ಕೆ ಇನ್ನೊಂದು ಹೆಸರು. ಅವರ ಸ್ನೇಹಸೇತು ತನ್ನ ಎಲ್ಲ ಎಲ್ಲೆಗಳನ್ನು ಮೀರಿ ಹೃದಯ-ಹೃದಯಗಳನ್ನು ಬೆಸೆದಿದೆ. ಮಾತಿನಲ್ಲಿ ವಿನಯ; ಪ್ರೀತಿ ಜೇನಿನಷ್ಟ ಸಿಹಿ ಅವರು ಪ್ರಧಾನತಃ ಕವಿಗಳು, ಜೀವಜೀವಿಗಳು, ಪ್ರೇಮ, ವಾತ್ಸಲ್ಯ ಮತ್ತು ವಿಶ್ವಬಂಧುತ್ವಗಳಿಗೆ ಅವರ ಮನಸ್ಸು ಮಿಡಿಯುವಷ್ಟು ಬೇರಾವುದಕ್ಕೂ ಸ್ಪಂದಿಸುವುದಿಲ್ಲ.

ಇಸ್ಲಾಂ ಧರ್ಮದ ತತ್ವಗಳಲ್ಲೊಂದಾದ 'ಮಾನವೀಯ ಪ್ರಜ್ಞೆ' "ನೂರು ಬಾರಿ ಸಾವಿರಾರು ನುಚ್ಚಾಗುವ ಹಾಗೆ 'ಪವಿತ್ರ ಕಾಬಾ'ವನ್ನಾದರೂ ಛಿದ್ರಗೊಳಿಸು ಆದರೆ ಒಟ್ಟು ಮನುಷ್ಯನ ಹೃದಯವನ್ನು ಒಡೆಯದಿರು ದೇವರು ಕ್ಷಮಿಸಲಾರ" ಹಾಗೂ ವೀರಶೈವ ಧರ್ಮದಲ್ಲಿ ಮಾನವನೇ ದೇವರು, ಧರ್ಮ ನಡೆದಾಡುವ ದೇವಾಲಯ ಎಂದು ಕರೆದದ್ದು, ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ಹೇಳಿದಂತೆ "ಪ್ರತಿಯೊಬ್ಬ ಮಾನವನ ಹೃದಯದಲ್ಲಿ ದೇವರು ವಾಸಿಸಿರುವಾಗ ಯಾರನ್ನಾದರೂ ದ್ವೇಷಿಸಲು ಹೇಗೆ ಸಾಧ್ಯ" ಎಂಬ ಹಲವಾರು ತತ್ವ, ಆದರ್ಶಗಳನ್ನು ಸನದಿಯವರು ತಮ್ಮ ಬಾಳನುದ್ದಕ್ಕೂ, ಕಾವ್ಯದುದ್ದಕ್ಕೂ ಅಳವಡಿಸಿಕೊಂಡಿರುವುದನ್ನು ಗಮನಿಸಿರುತ್ತೇನೆ.

ಕಾವ್ಯದಲ್ಲಿ 'ಸಾಮಾಜಿಕ ಪ್ರಜ್ಞೆ' ಕಾವ್ಯಕ್ಕೆ ಪ್ರಸ್ತುತದ ಜೊತೆಗಿನ ನಿಕಟ ಸಂಬದ್ಧತೆ [Immediate Relavance for the present]ಯನ್ನು ಒದಗಿಸುವುದನ್ನು ಸನದಿಯವರ ಕಾವ್ಯ ಪ್ರವಹಿಸಿದೆ. ಸನದಿಯವರು ಏನನ್ನೇ ಬರೆಯಲಿ ಹೇಳಲಿ ಅದು ಜನಪರವಾದದ್ದು, ಮಾನವೀಯತೆಗೆ ಹಿತವಾದದ್ದನ್ನೇ ಬಯಸುವವರು ಜನಪರ ಕವಿಯಾದ ಸನದಿಯವರು ಸಮೂಹ ಪ್ರಜ್ಞೆಯುಳ್ಳವರು, ಸಮೂಹದಿಂದ ಭಿನ್ನವಾದ ಹೆಸರಾಗಲಿ, ವ್ಯಕ್ತಿತ್ವವಾಗಲಿ ಅವರದಾಗಿರಲಿಲ್ಲ.

ಕನ್ನಡದ ಯಾವುದೇ ಸಾಹಿತ್ಯ ಘಟ್ಟಕ್ಕೆ ಸೀಮಿತವಾಗದೆ, ನವೋದಯ, ನವ್ಯ ಬಂಡಾಯ, ದಲಿತ ಸಾಹಿತ್ಯದ ಸತ್ವವನ್ನು ಹೀರಿಕೊಂಡು ಸ್ವತಂತ್ರವಾಗಿ ಬೆಳೆದ 'ಮಾನವ್ಯಕವಿ' ಎಂದು ಖ್ಯಾತರಾಗಿದ್ದಾರೆ. ಕನ್ನಡದ ಉದಾರವಾದ ಸಾಹಿತ್ಯದ ಕವಲಿನ ಪ್ರಮುಖ ವಕ್ತಾರರಾಗಿರುವ ಇವರು ಎಪ್ಪತ್ತರ ದಶಕದಲ್ಲಿ 'ಜನಕಾವ್ಯ' ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಕವಿ.

ಸನದಿಯವರ ಕಾವ್ಯ ಜಗತ್ತು ಕಾಯುವ ದೈವದಲ್ಲಿ ನಂಬಿಕೆ ಕಳೆದುಕೊಂಡ ಜಗತ್ತು. ಇವರು ದೈವದ ಹಂಗಿಲ್ಲದ ಕವಿ ನಿಜ. ಮನುಷ್ಯನೇ ತನ್ನ ಕರ್ಮಕ್ಕೆ ಹೊಣೆಗಾರಿಕೆ ಒಪ್ಪಿಕೊಂಡು ಬದುಕಬೇಕಾದ ಜಗತ್ತು ಇದು ಎಂದು ಸನದಿ ಕಾವ್ಯ ನಂಬಿದೆ. ಮತ್ತು ಸಾಮಾಜಿಕ ವಿಷಮತೆಯ ಸಂದರ್ಭದಲ್ಲಿ ಮಾನವತೆ ದೀನವಾಗಿ ಅಳುತ್ತಿರುವುದನ್ನು ಇವರ ಸಮಗ್ರ ಕಾವ್ಯ ಅದ್ಭುತವಾಗಿ ವರ್ಣಿಸುತ್ತದೆ. ಯಾವುದೇ ಮೌಲ್ಯಗಳ ಪ್ರತಿಪಾದನೆಯ ಉದ್ದೇಶವು ನೇರವಾಗಿ ಕವಿತೆಯಾಗುವುದು ಕಷ್ಟ. ಬದುಕಿನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಜೀವಿಯ ಒಡಲ ಕುರಿತದಿಂದ ಬರುವ ಮಾತು ಮೌನವಾಗಿ ಆಯಕ್ಕೆ ತಿವಿಯುವಂತೆ ಕಾವ್ಯ ಹುಟ್ಟಬೇಕಾಗುತ್ತದೆ. ಹೀಗೆ ಹುಟ್ಟಿದ ಕಾವ್ಯ ಯಾವ ಹಣೆಪಟ್ಟಿಯ ಸಿದ್ಧಾಂತವಾಗದೆ ಜೀವಿಸಲು ಹಂಬಲಿಸುವ ಜೀವಿಗಳ ಕೈದೀವಿಗೆಯಾಗಿ ನಿಲ್ಲಬಲ್ಲದು. ಸನದಿಯವರ ಕಾವ್ಯ ಇಂಥ ಮಾದರಿಯದು.

ಸಮಾಜಮುಖಿಯಾದ, ಜನಪದ ಕಾಳಜಿಗಳನ್ನು ತುಂಬಿ ಕೊಂಡಿರುವ ಸನದಿಯವರು ಸೂಕ್ಷ್ಮಸಂವೇದನೆಯ ಭಾವುಕ ಕವಿ; ಭಾವಪೂರ್ಣವಾದ, ಹೃದಯ ಕವಿ; ಓದುಗರ ನೇರ ಮಾತು, ಭಾವಗಳನ್ನು ಹರಿಸಬಲ್ಲ ಕುಶಲ ಕವಿ; ಸನದಿಯವರ ಪ್ರತಿಭೆ ಬದುಕಿನ ಹಲವು ಮಗ್ಗಲುಗಳಿಗೆ ಅನಾಯಾಸ ಹೊರಳಿ ಅಲ್ಲಿನ ಅನುಭವಗಳನ್ನು ನಿರ್ಲಿಪ್ತವಾಗಿ ನೋಡಬಲ್ಲ ಹದವನ್ನು ಪಡೆದುಕೊಂಡಿರುವಂಥದ್ದು. ಯಾವುದೇ ಶೈಲಿಗೆ ಒಂದು ಧಾಟಿಗೆ ಕಟ್ಟು ಬೀಳದ ಇವರ ಭಾಷೆ, ಆಡು-ಮಾತು ಮತ್ತು ಗ್ರಾಂಥಿಕಗಳ ನಡುವಿನ ಸಂಭವಿತ ಲಯವೊಂದನ್ನು ಹಿಡಿದು ಮೂರ್ತಾ-ಮೂರ್ತಗಳನ್ನು ವೈಯಕ್ತಿಕ ಸಾಧಾರಣಗಳನ್ನು ಸಹಜವಾಗಿ ವ್ಯಂಜಿಸಬಲ್ಲ ಲವಲವಿಕೆಯನ್ನು ಪಡೆದುಕೊಂಡಿದೆ.

ಕಲ್ಪನಾ ವಿಲಾಸದಲ್ಲಿ ಮುಳುಗಿರುವುದು ಸನದಿಯವರಿಗೆ ಅಷ್ಟು ಪ್ರಿಯವಲ್ಲವಾದ್ದರಿಂದಲೋ ಏನೋ ಅವರು ಬದುಕಿನ ನಿಷ್ಠುರ ವಾಸ್ತವಗಳಿಗೆ ಮುಖಾಮುಖಿಯಾಗಿ ತಮ್ಮ ಅನುಭವಗಳನ್ನೇ ಹಿಡಿದು ಬಡಿದು ಕಾಯಿಸಿ, ಶೋಧಿಸಿ, ಬಾಗಿಸಿ, ಬಳುಕಿಸಿ ಕವಿತೆಯಾಗಿಸಲು ಬೆವರು ಹರಿಸಿದ್ದಾರೆ. ಹಾಗೆಯೇ ಅವರ ಕವಿತೆಗಳು ಓದುಗರಿಗೆ ಕ್ಷೀಣ ಬೆಳಕನ್ನಾದರೂ ತೋರುವ ಪುಟ್ಟ ದೀಪಗಳಾಗಿರುವ ಶಕ್ತಿ ಪಡೆದಿವೆ.

ವಿಮರ್ಶಕರೊಬ್ಬರು ಹೇಳುತ್ತಾರೆ ಕೇವಲ ಅಭಿವ್ಯಕ್ತಿ ಕ್ರಮದ ವಿಶಿಷ್ಟತೆ ಹಾಗೂ ಕಲಾತ್ಮಕತೆಗಳ ದೃಷ್ಟಿಯಿಂದ ಮಾತ್ರವೇ ನೋಡಿದಾಗ, ಅನೇಕ ಕವಿತೆಗಳು ಸಪ್ಪೆ ಎನ್ನಬಹುದು. ಆದರೆ ಅಂತಹ ಹಲವು ಕವಿತೆಗಳಲ್ಲಿಯೂ ಸೌಂದರ್ಯ ಅದರ ಅಂತರ್ದರ್ಶನದಲ್ಲಿದೆ, ಶೈಲಿಯಲ್ಲಿಲ್ಲ.

ಈ ಹೇಳಿಕೆಯನ್ನು ಒಪ್ಪಿಯೂ, ಕಲಾದೃಷ್ಟಿಯಿಂದ ಕೆಲವು ಒಳ್ಳೆಯ, ಆಸ್ವಾದನೀಯ ಕವನಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಅವರು ನಮ್ಮ ಗಣ್ಯ ಕವಿಗಳಲ್ಲಿ ಒಬ್ಬರು. ಆದರೆ ಅನೇಕರಂತೆ ಅವರು 'ವನಸುಮ'ವಾಗಿರುವುದು ವಿಷಾದಕರ ಅಥವಾ ಅದೂ ಒಂದು ವೈಶಿಷ್ಟ್ಯವೇ! ಎಂಬ ಮಾತನ್ನು ನಾನಿಲ್ಲಿ ಮನಗಂಡಿರುತ್ತೇನೆ.

~*~*~*~*~*~

ಪರಾಮರ್ಶನ ಗ್ರಂಥಸೂಚಿ

೧. ಸಾಹಿತ್ಯ ಮುತ್ತು ಜೀವನ ಮೌಲ್ಯ	ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.
೨. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು	ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.
೩. ಮುಕ್ತ ಚಿಂತನ	ಪ್ರೊ. ಎಸ್.ಆರ್.ನಾರಾಯಣರಾವ್, ಶ್ರೀ ಬಿ.ಎ ಸನದಿ ಸಾಂಸ್ಕೃತಿಕ ಪ್ರತಿಷ್ಠಾನ ಬೆಳಗಾವಿ, ೨೦೦೬.
೪. ಸೋಪಾನ	ಡಾ. ತಾಳ್ತಜೆ ವಸಂತಕುಮಾರ ಮತ್ತು ಕೆ.ಚಂದ್ರಮೌಳಿ, ಸುವರ್ಣಗಿರಿ ಪ್ರಕಾಶನ, ಮುಂಬಯಿ, ೧೯೯೬.
೫. ತಪನಿಂದ ತಾವರೆ	ಡಾ. ಬಸವರಾಜ ಸಾದರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.
೬. ಶ್ರೀ ಕುವೆಂಪು	ಡಾ. ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦.
೭. ಮಾನವ್ಯ ಕವಿ	ಡಾ.ಗೌರೀಶ್ ಕಾಯ್ಕಿಣಿ, ಭಾವನಾ ಪ್ರಕಾಶನ, ಮುಂಬಯಿ, ೧೯೯೬.
೮. ಸನದಿ ಸಾಹಿತ್ಯ ಸಮೀಕ್ಷೆ	ಡಾ.ಗುರುಪಾದ ಮರಿಗುದ್ದಿ, ಶ್ರೀ ನಿಜಲಿಂಗೇಶ್ವರ ಗ್ರಂಥಮಾಲೆ, ಬೆಳಗಾವಿ, ೧೯೯೯.
೯. ಮಾನವ್ಯ ಕವಿ ಬಿ.ಎ. ಸನದಿ	ಸಂಃ ಬಿ.ವಿ.ಗುಂಜೆಟ್ಟಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೦೨.
೧೦. ಸ್ನೇಹ ಸಂಪದ	ಪ್ರೊ. ಜ್ಯೋತಿ ಹೊಸೂರ, ಬಿ.ಎ.ಸನದಿ ಸನ್ಮಾನ ಸಮಿತಿ, ಬೆಳಗಾವಿ ೧೯೯೬.
೧೧. ಕುವೆಂಪು ಕಥನ	ಡಾ. ಉದ್ದಂಡಯ್ಯ, ಅಧ್ಯಯನ ಮಂಡಲ, ಬೆಂಗಳೂರು ೨೦೦೪.

೧೨. ಕುವೆಂಪು ಸಾಹಿತ್ಯ ಸಮಾಲೋಚನೆ — ಸಂಃ ಎಸ್.ಚನ್ನಪ್ಪ, ಪದ್ಮಶೇಖರ್, ಮೈಸೂರು, ೨೦೦೮.

೧೩. ವಿಮರ್ಶೆಯ ಪರಿಭಾಷೆ — ಬಿ.ಎಲ್. ನಾಗಭೂಷಣಸ್ವಾಮಿ, ಅಭಿನವ ಪ್ರಕಾಶನ ವಿಜಯನಗರ, ಬೆಂಗಳೂರು ೧೦೧೧.

೧೪. ಸಾಹಿತ್ಯ ವಿಮರ್ಶೆ — ಡಾ. ಸಿ.ಎನ್. ರಾಮಚಂದ್ರನ್, ಅಂಕಿತ ಪುಸ್ತಕ, ಬೆಂಗಳೂರು.

೧೫. ಕನ್ನಡ ಭಾಷೆಯ ಚರಿತ್ರೆ — ಎಂ.ಎಚ್.ಕೃಷ್ಣಯ್ಯ, ಅಂಕಿತ ಪುಸ್ತಕ, ಬೆಂಗಳೂರು, ೧೯೯೩.

೧೬. ಬಿ.ಎ.ಸನದಿ, ಬದುಕು ಬರಹ — ಡಾ. ಜಿ.ಎನ್. ಉಪಾಧ್ಯ, ಕರ್ನಾಟಕ ಸಂಘ, ಮುಂಬಯಿ, ೨೦೦೫.

೧೭. ಶ್ರೀ ಬಿ.ಎ. ಸನದಿ ಸಮಗ್ರ ಅಧ್ಯಯನ — ಡಾ. ದ್ರಾಕ್ಷಾಯಿಣಿ ಉಕ್ಕಲಿ (ಪಿ.ಎಚ್.ಡಿ ಮಹಾಪ್ರಬಂಧ), ೨೦೦೩.